# *ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ*

## *ದಿನಾಂಕ:16.05.2011ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಮಧ್ಯಾಹ್ನ 3.00 ಘಂಟೆಗೆ ನಡೆದ ಸಭೆಯ ನಡವಳಿಗಳು .*

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಉಪ ಆಯುಕ್ತರು(ದಕ್ಷಿಣ) |
| ಶ್ರೀಮತಿ.ಎಂ.ಶಕೀಲ – ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಪೂರ್ವ) |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ದಕ್ಷಿಣ) |
| ಶ್ರೀಮತಿ. ದೇವಿಕಾರಾಣಿ ಶ್ರೀಧರ್ – ಸದಸ್ಯರು | ಕಲ್ಯಾಣಾಧಿಕಾರಿ(ದಕ್ಷಿಣ/ಪಶ್ಚಿಮ) |
| ಶ್ರೀ. ಟಿ.ತಿಮ್ಮೇಗೌಡ – ಸದಸ್ಯರು | ಶಿಕ್ಷಣಾಧಿಕಾರಿಗಳು |
| ಶ್ರೀಮತಿ. ನಾಜಿನಿ ಬೇಗಂ – ಸದಸ್ಯರು | ಸಹ ಶಿಕ್ಷಣಾಧಿಕಾರಿಗಳು |
| ಶ್ರೀಮತಿ. ಚೇತನಾ ಗೌಡ – ಸದಸ್ಯರು | ಕ್ರೀಡಾಧಿಕಾರಿ |
| ಶ್ರೀ. ಕೆ.ರವೀಂದ್ರನ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿಗಳು |
| ಶ್ರೀ. ವಿ.ಕೃಷ್ಣ – ಸದಸ್ಯರು | ವಿಷಯ ಪರಿವೀಕ್ಷಕರು |
| ಶ್ರೀ. ಎಂ.ವೆಂಕಟೇಶ್ – ಸದಸ್ಯರು | ವ್ಯವಸ್ಥಾಪಕರು(ಕಲ್ಯಾಣ–ಪೂರ್ವ) |
| ಶ್ರೀಮತಿ. ಸವಿತಾ ರಮೇಶ್ – ಸದಸ್ಯರು | |

*ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಮಾನ್ಯ ಅಧ್ಯಕ್ಷರು ಸಭೆಗೆ ಸ್ವಾಗತಿಸುತ್ತಾ, ಮನ್ಯ ಸದಸ್ಯರುಗಳು ಹಾಗೂ ಅಧಿಕಾರಿಗಳನ್ನು ಸಭೆಗೆ ಪರಿಚಯಿಸುತ್ತಾ, ಈ ಸಭೆಯನ್ನು ಮುಖ್ಯವಾಗಿ ಶಿಕ್ಷಣ ಅಭಿವೃದ್ಧಿಗೆ ರೂಪರೇಷಗಳನ್ನು ರೂಪಿಸಲು ಕರೆಯಲಾಗಿದ್ದು, ಪ್ರಥಮವಾಗಿ ಶ್ರೀ.ನಿಚ್ಚಲ ಪ್ರಗಾಸಂ, ಶಿಕ್ಷಣಾಧಿಕಾರಿ ರವರು ಮಾತನಾಡುತ್ತಾ ಹಾಲಿ ಶಾಲಾ/ಕಾಲೇಜುಗಳಿಗೆ ನೀಡಲಾಗುವ ಸೌಲಭ್ಯಗಳನ್ನು ತಿಳಿಸುತ್ತಾ, ಈಗಾಗಲೇ ನೋಟ್ ಪುಸ್ತಕ ಹಾಗೂ ಸಮವಸ್ತ್ರಗಳನ್ನು ಖರೀದಿಸಲು ಕ್ರಮತೆಗೆದುಕೊಳ್ಳಲಾಗುತ್ತಿದ್ದು, ಶಾಲೆಗಳು ಪ್ರಾರಂಭವಾಗುವ ಹೊತ್ತಿಗೆ ವಿತರಿಸಲಾಗುವುದು. ಶ್ರೀಮತಿ.ಸವಿತಾ ರಮೇಶ್, ಮಾನ್ಯ ಸದಸ್ಯರು ಮಾತನಾಡುತ್ತಾ, ಕಳೆದ ಬಾರಿ ನೀಡಿರುವ ಸ್ಕೂಲ್ ಬ್ಯಾಗ್‌ಗಳ ಗುಣಮಟ್ಟ ಚೆನ್ನಾಗಿರುವುದಿಲ್ಲ, ಇಂತಹ ಬ್ಯಾಗ್‌ಗಳು ಆರು ತಿಂಗಳುಗಳು ಸಹ ಬಾಳಿಕೆ ಬರುವುದಿಲ್ಲ ಉತ್ತಮ ಗುಣಮಟ್ಟದ ಬ್ಯಾಗ್‌ಗಳನ್ನು ವಿತರಿಸುವುದು ಎಂಬುದಾಗಿ ತಿಳಿಸಿರುವುದರ ಮೇರೆಗೆ, ಶಿಕ್ಷಣಾಧಿಕಾರಿಗಳು ಉತ್ತರಿಸುತ್ತಾ, ಸಮಿತಿಯು ಅನುಮೋದಿಸುವ ಉತ್ತಮ ಗುಣಮಟ್ಟದ ಬ್ಯಾಗ್‌ಗಳನ್ನು ನೀಡುವುದಾಗಿ ತಿಳಿಸಿದರು. ಹೆಣ್ಣು ಮಕ್ಕಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯ್ತಿ ನೀಡಲಾಗಿರುತ್ತದೆ. ಎಸ್.ಸಿ/ಎಸ್.ಟಿ ಮಕ್ಕಳಿಂದ ಶುಲ್ಕವನ್ನು ಪಡೆಯಲಾಗುತ್ತಿಲ್ಲ. ಈ ಮಕ್ಕಳಿಗೆ ಕಲ್ಯಾಣ ಇಲಾಖೆಯ ಸಹಯೋಗವಿರುತ್ತದೆ.*

*–2*

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹೆಚ್ಚು ಅಂಕಗಳು ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ಆದಷ್ಟು ಶೀಘ್ರವಾಗಿ ವಿತರಿಸಲು ಕ್ರಮ ತೆಗೆದುಕೊಳ್ಳುವುದು ಹಾಗೂ ವಿದ್ಯಾರ್ಥಿಗಳ ಪೋಷಕರನ್ನು ಆಹ್ವಾನಿಸಿ ಇದಕ್ಕಾಗಿ ಒಂದು ಸಮಾರಂಭವನ್ನು ಏರ್ಪಡಿಸುವುದು. ಮುಂದುವರೆದಂತೆ, ಶಾಲಾ ವಾರ್ಷಿಕೋತ್ಸವ ಸಮಾರಂಭಕ್ಕೆ ಮಕ್ಕಳಿಂದ ವಾರ್ಷಿಕ ರೂ.25/- ಮತ್ತು ರೂ.40/-ಗಳನ್ನು ಮಾತ್ರ ವಸೂಲು ಮಾಡಲಾಗುತ್ತಿದೆ ಮುಂದಿನ ವರ್ಷದಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವುದಲ್ಲದೇ, ಉತ್ತಮ ಶಾಲೆ, ಉತ್ತಮ ಮುಖ್ಯೋಪಾಧ್ಯಾಯರು, ಉತ್ತಮ ಶಿಕ್ಷಕರು ಎಂಬುದಾಗಿ ಗುರ್ತಿಸಿ ಅವರುಗಳಿಗೂ ಸಹ ಬಹುಮಾನಗಳನ್ನು ನೀಡುವ ಕ್ರಮ ತೆಗೆದುಕೊಳ್ಳುವುದು, ಹಾಲಿ ಇರುವ ಪ್ರಯೋಗ ಶಾಲೆಗಳನ್ನು ಮೇಲ್ದರ್ಜೆಗೇರಿಸಲು ಕ್ರಮತೆಗೆದುಕೊಳ್ಳಲು ಕ್ರಮವಹಿಸುವುದಾಗಿ ಶಿಕ್ಷಣಾಧಿಕಾರಿ ರವರು ತಿಳಿಸಿದರು ಹಾಗೂ ಮಾನ್ಯ ಅಧ್ಯಕ್ಷರು ಶಾಲಾ/ಕಾಲೇಜುಗಳ ಆವರಣದಲ್ಲಿ ಪಂಚವಟಿ ಗಿಡಗಳನ್ನು ನೆಡಲು ಕ್ರಮತೆಗೆದುಕೊಳ್ಳುವುದು, ಮಾನ್ಯ ಸದಸ್ಯರಾದ ಶ್ರೀ.ಎಂ.ಕೃಷ್ಣ ರವರು ಮಾತನಾಡುತ್ತಾ, ಶಾಲೆಗಳಲ್ಲಿ ಶೌಚಾಲಯ, ನೀರಿನ ವ್ಯವಸ್ಥೆ ಇವುಗಳ ಬಗ್ಗೆ ಗಮನ ಹರಿಸುವುದು ಹಾಗೂ ಪ್ರಥಮ ಆದ್ಯತೆ ನೀಡುವುದು ಹಾಗೂ ಶಾಲಾ ಕಟ್ಟಡಗಳಿಗೆ ಅಗತ್ಯವಿರುವ ದುರಸ್ತಿ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳುವುದು ಹಾಗೂ ಶಾಲಾ ಅಭಿವೃದ್ಧಿ ಸಮಿತಿ ರಚನೆ ಕೂಡಲೇ ಕೈಗೆತ್ತಿಕೊಳ್ಳುವುದು ಕೂಡಲೇ ಕ್ರಮತೆಗೆದುಕೊಳ್ಳವುದು.

ಸಭೆಯಲ್ಲಿ ಹಾಜರಿದ್ದ ಮಾನ್ಯ ಉಪ ಆಯುಕ್ತರು(ದಕ್ಷಿಣ)ರವರು ಮಾತನಾಡುತ್ತಾ, 15 ದಿನಗಳೊಳಗಾಗಿ ಶಾಲೆಗಳಲ್ಲಿ ಆಗಬೇಕಾಗಿರುವ ಕೆಲಸ ಕಾರ್ಯಗಳ ಬಗ್ಗೆ ತಪಾಸಣೆ ಮಾಡಿ ಪಟ್ಟಿ ತಯಾರಿಸಿ ಕೊಡುವಂತೆ ಶಿಕ್ಷಣಾಧಿಕಾರಿಯವರಿಗೆ ತಿಳಿಸಿದರು.

ಶ್ರೀ.ದಯಾನಂದ, ಮಾನ್ಯ ಕಲ್ಯಾಣಾಧಿಕಾರಿ(ದಕ್ಷಿಣ)ರವರು ಮಾತನಾಡುತ್ತಾ, ಕಲ್ಯಾಣ ಇಲಾಖೆಯಿಂದ ಶಿಕ್ಷಣ ಇಲಾಖೆಗೆ ನೀಡಬಹುದಾದ ಸಲಹೆಗಳ ಬಗ್ಗೆ ತಿಳಿಸುತ್ತಾ, ವಿಶೇಷವಾಗಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಹೆಚ್ಚುವರಿಗಾಗಿ ಸಮವಸ್ತ್ರ, ನೋಟ್ ಪುಸ್ತಕಗಳನ್ನು ಕಲ್ಯಾಣ ಇಲಾಖೆಯಿಂದ ನೀಡಬಹುದಾಗಿದೆ. ಶೈಕ್ಷಣಿಕ ಪ್ರವಾಸಕ್ಕೆ ಅವಕಾಶವಿದ್ದು, ಸಕಾಲದಲ್ಲಿ ಕಾರ್ಯಕ್ರಮ ರೂಪಿಸಿದ ಕಾರಣ, ಕಳೆದ ವರ್ಷಗಳಲ್ಲಿ ಈ ಕಾರ್ಯ ಕ್ರಮವನ್ನು ಸಮರ್ಪಕವಾಗಿ ನಡೆದಿರುವುದಿಲ್ಲ. ಈ ಬಗ್ಗೆ ಆಗಸ್ಟ್ ತಿಂಗಳಿನಲ್ಲಿ ಕಾರ್ಯ ಕ್ರಮ ಹಾಕಿಕೊಂಡು 3 ದಿನಗಳಿಗೆ ಬದಲಾಗಿ ಎಲ್ಲಾ ಮಕ್ಕಳಿಗೆ 1 ದಿವಸ ಪ್ರವಾಸ ಕಾರ್ಯಕ್ರಮವನ್ನು ರೂಪಿಸಬಹುದಾಗಿದ್ದು, ಇದರಿಂದ ಎಲ್ಲಾ ಮಕ್ಕಳಿಗೂ ಅನುಕೂಲವಾಗುವುದು ಹಾಗೂ ಈ ಬಗ್ಗೆ ಕೆ.ಎಸ್.ಆರ್.ಟಿ.ಸಿ ಇಲಾಖೆಯಿಂದ ಸಹ ಶಾಲಾ ಮಕ್ಕಳಿಗೆ ರಿಯಾಯ್ತಿ ಪಡೆಯಬಹುದಾಗಿದೆ.

ಆರೋಗ್ಯ ವಿಮೆಯ ಬಗ್ಗೆ ಪ್ರಸ್ತಾಪ ಬಂದಿದ್ದು ಡಾ: ಸುರೇಶ್, ಯೋಜನಾ ಸಮನ್ವಯಾಧಿಕಾರಿ ಈ ಬಗ್ಗೆ ಬೈಯೋ ಮೆಟ್ರಿಕ್ ಟೆಂಡರ್ ಕರೆದಿರುವ ಬಗ್ಗೆ ಸಭೆಗೆ ಮಾಹಿತಿ ನೀಡಲಾಯ್ತು.

ಸಭೆಯಲ್ಲಿ ಹಾಜರಿದ್ದ, ಡಾ:ಎಸ್.ಬಿ.ನಾಗರಾಜ್, ಮಾನ್ಯ ಆರೋಗ್ಯಾಧಿಕಾರಿ ರವರು ಮಾತನಾಡುತ್ತಾ, ಇನ್ನು ಮುಂದೆ ವಾರಕ್ಕೊಮ್ಮೆ ನಮ್ಮ ಮಹಾನಗರ ಪಾಲಿಕೆ ವೈದ್ಯರುಗಳು ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ನಡೆಸುವರು ಆಗೊಂದು ವೇಳೆ ಹೆಚ್ಚಿನ ಚಿಕಿತ್ಸೆ ಅಗತ್ಯವೆನಿಸಿದರೆ ಅಂತಹ ಪ್ರಕರಣಗಳನ್ನು ಆಸ್ಪತ್ರೆಗಳಿಗೆ ಕಳುಹಿಸಿಕೊಡುವರು, ಈಚ್ಞಿಣ-ಂಖಆ ಖಜಾಜಿಚಾಡಿಚಿಟ ಬಗ್ಗೆ ತಿಳುವಳಿಕೆ ನೀಡುವರು, ಆರೋಗ್ಯ ಬಗ್ಗೆ ಮಕ್ಕಳಿಗೆ ಜಾಗೃತಿ ಉಂಟು ಮಾಡುವ ಬಗ್ಗೆ ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳು ಕ್ರಿಯಾ ಯೋಜನೆ ರೂಪಿಸುವರು ಎಂಬುದಾಗಿ ಮಾಹಿತಿ ನೀಡಿರುತ್ತಾರೆ. ಯೋಗಾಸನದ ಬಗ್ಗೆಯು ಸಹ ಮಕ್ಕಳಿಗೆ ತರಬೇತಿ ನೀಡುಲಾಗುವುದು ಎಂಬುದಾಗಿ ತಿಳಿಸಿದರು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:23.05.2011ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳಿಗ್ಗೆ 11.00 ಘಂಟೆಗೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಅಪರ ಆಯುಕ್ತರು(ಆಡಳಿತ/ಆರೋಗ್ಯ) |
| ಶ್ರೀಮತಿ. ಚೇತನಾ ಗೌಡ – ಸದಸ್ಯರು | ಕಾ.ನಿ.ಅ(ಯೋಜನೆ–ಪ) |
| ಶ್ರೀ. ಕೆ.ರವೀಂದ್ರನ್ – ಸದಸ್ಯರು | ಸ.ಕಾ.ನಿ.ಅ(ಯೋಜನೆ–ಪ) |
| ಶ್ರೀ. ವಿ.ಕೃಷ್ಣ – ಸದಸ್ಯರು | ಸ.ಕಾ.ನಿ.ಅ(ಪೂರ್ವ–ಪ್ರಾಜೆಕ್ಟ್) |
| ಶ್ರೀ. ಎಂ.ವೆಂಕಟೇಶ್ – ಸದಸ್ಯರು | ಸ.ಕಾ.ನಿ.ಅ(ಯೋಜನೆ–ಪ) |
| ಶ್ರೀಮತಿ. ಸವಿತಾ ರಮೇಶ್ – ಸದಸ್ಯರು | ಸಹ ಶಿಕ್ಷಣಾಧಿಕಾರಿಗಳು |
| ಶ್ರೀಮತಿ. ನಾಜಿನಿ ಬೇಗಂ – ಸದಸ್ಯರು | ಶಿಕ್ಷಣಾಧಿಕಾರಿಗಳು |
| ಶ್ರೀಮತಿ.ಎಂ.ಶಕೀಲ – ಸದಸ್ಯರು | ಕ್ರೀಡಾಧಿಕಾರಿ |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿಗಳು |
| ಶ್ರೀಮತಿ. ದೇವಿಕಾರಾಣಿ ಶ್ರೀಧರ್ – ಸದಸ್ಯರು | |
| ಶ್ರೀ. ಟಿ.ತಿಮ್ಮೇಗೌಡ – ಸದಸ್ಯರು | |

ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಶಿಕ್ಷಣ ಸ್ಥಾಯಿ ಸಮಿತಿಯು ಅಸ್ತಿತ್ವಕ್ಕೆ ಬಂದಿದ್ದು, ಬೃಹತ್ ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳ ಶಿಕ್ಷಣದ ಗುಣಮಟ್ಟ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ, ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿದ್ದು, ಈ ದಿಸೆಯಲ್ಲಿ ಮಾನ್ಯ ಸದಸ್ಯರುಗಳ ಹಾಗೂ ಅಧಿಕಾರಿಗಳ ಸಹಕಾರವನ್ನು ನೀಡುವಂತೆ ಕೋರುತ್ತಾ, ಕಾರ್ಯಕ್ರಮದ ಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ಸಲಹೆ ಹಾಗೂ ಸೂಚನೆಗಳನ್ನು ನೀಡುವಂತೆ ಕೋರಲಾಗಿರುತ್ತದೆ.

**ವಿಷಯದ ಸಂಖ್ಯೆ:– ಶಿ.ಸ್ಥಾ.ಸ/03/11–12**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/173/10–11, ದಿನಾಂಕ:09.05.2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 12–ಪ್ರಾಥಮಿಕ ಶಾಲೆಗಳು ಮತ್ತು 33–ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಸ್ಕೂಲ್‌ಬ್ಯಾಗ್‌ಗಳನ್ನು ಖರೀದಿಸಿ ವಿತರಿಸಲು 2011–12ನೇ ಸಾಲಿನ ಆಯವ್ಯಯ 25 ಶಿಕ್ಷಣ, ಇತರೇ ವೆಚ್ಚಗಳು, ಸ್ಕೂಲ್‌ಬ್ಯಾಗ್‌ಗಳ ಖರೀದಿದಾಗಿ ರೂ.30.18ಲಕ್ಷಗಳ ಅನುದಾನವನ್ನು ನಿಗದಿಗೊಳಿಸಿದ್ದು, ಸದರಿ ಮೊತ್ತದಲ್ಲಿ ಸ್ಕೂಲ್‌ಬ್ಯಾಗ್‌ಗಳನ್ನು ಖರೀದಿಸಲು

ದಿನಾಂಕ:21.03.2011ರಂದು ಇ-Procurement Tender ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:28.03.2011ರಂದು ಕೊನೆಯ ದಿನವಾಗಿತ್ತು. ದಿನಾಂಕ:30.03.2011ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿದ್ದು, 4 ಜನ ಟೆಂಡರ್‌ದಾರರಾದ 1) ಮೆ:ಮಾರುತಿ ಎಂಡರ್ ಪ್ರೈಸಸ್ # 28, ಟಿ.ಎಂ.ಸಿ. ರಾಯನ್ ರಸ್ತೆ, ಬೆಂಗಳೂರು-53 2) ಮೆ: ಬಾಲಾಜಿ ಬ್ಯಾಗ್ ಮ್ಯಾನುಪ್ಯಾಕ್ಚರರ್ಸ್ # 11, 1ನೇ ಮೈನ್, ಬಿ ಸ್ಟ್ರೀಟ್, ಕುವೆಂಪುನಗರ, ಮೈಸೂರು ರಸ್ತೆ, ಬೆಂಗಳೂರು-26, 3) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು ಮತ್ತು 4) ಮೆ:ಕೆ.ಕೆ.ಭಂಡಾರಿ # 32, ಮಾಮೂಲ್‌ಪೇಟೆ, ಬೆಂಗಳೂರು-53 ರವರುಗಳು ಭಾಗವಹಿಸಿರುತ್ತಾರೆ. ಇವರುಗಳು Technical bid ನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ 1) ಮೆ:ಮಾರುತಿ ಎಂಟರ್ ಪ್ರೈಸಸ್ ರವರು ಟೆಂಡರ್ ನಿಯಮ ನಿಂಬಂಧೆಗಳ ಪ್ರಕಾರ ಎಲ್ಲಾ ದಾಖಲಾತಿ ಪ್ರತಿಗಳನ್ನು ದೃಢೀಕರಿಸಿ ಸಲ್ಲಿಸಿರುವುದು ಕಂಡು ಬಂದಿರುವುದರಿಂದ, ಇವರ ಟೆಕ್ನಿಕಲ್ ಬಿಡ್‌ನ್ನು ಅಂಗೀಕರಿಸಲಾಗಿದೆ 2) ಮೆ:ಬಾಲಾಜಿ ಬ್ಯಾಗ್ ಮ್ಯಾನುಪ್ಯಾಕ್ಚರರ್ಸ್ ರವರು ನೀಡಿರುವ ದಾಖಲೆ ಪ್ರತಿಗಳನ್ನು ಪರಿಶೀಲಿಸಿದಾಗ ಟೆಂಡರ್ ನಿಯಮ ನಿಬಂಧನೆಗಳಲ್ಲಿ ತಿಳಿಸಿರುವ ಕ್ರ.ಸ. 5(ಬಿ) vat clearing certificate for 2010-11 ನೀಡಿರುವುದಿಲ್ಲ. 3) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿ. ರವರ ಟೆಂಡರ್‌ನ ಟೆಕ್ನಿಕಲ್ ಬಿಡ್‌ನಲ್ಲಿ ತಿಳಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಟೆಂಡರ್ ನಿಯಮ ನಿಬಂಧನೆಗಳಲ್ಲಿ ತಿಳಿಸಿರುವ ಕ್ರ.ಸ.5(ಬಿ) Single work order copy (supply order copy) for Rs.20.00 lakhs in supply of School Bags in any one of the previous 2 financial year (2009-10 or 2010-11) ರಂತೆ ದಾಖಲೆ ಪ್ರತಿಗಳನ್ನು ಸಲ್ಲಿಸಿರುವುದಿಲ್ಲ 4) ಮೆ:ಕೆ.ಕೆ.ಭಂಡಾರಿ ರವರ ಟೆಂಡರ್‌ನ ಟೆಕ್ನಿಕಲ್ ಬಿಡ್‌ನಲ್ಲಿ ತಿಳಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಟೆಂಡರ್ ನಿಯಮ ನಿಬಂಧನೆಗಳನ್ನು ತಿಳಿಸಿರುವ ಕ್ರ.ಸ.5(ಬಿ)ರಲ್ಲಿ ಕೇಳಿರುವ 2010-11ರ vat clearing certificate ನೀಡಿರುವುದಿಲ್ಲ. ಕ್ರ.ಸ. 5(ಇ)ರಲ್ಲಿ ಕೇಳಿರುವಂತೆ Single work order copy(supply order copy) for Rs.20.00 lakhs in supply bags in any one of the previous 2 financial year (2009-10 or 2010-11) ರಂತೆ ದಾಖಲೆ ಪ್ರತಿಗಳನ್ನು ಸಲ್ಲಿಸಿರುವುದಿಲ್ಲ ಮತ್ತು ಕ್ರ.ಸ.5(ಸಿ)ರಲ್ಲಿರುವಂತೆ 1 ವರ್ಷದ Income Tax Return certificate ಪ್ರತಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಟೆಂಡರ್‌ನ ನಿಯಮ ನಿಬಂಧನೆ ಕ್ರ.ಸ(6)ರ ಪ್ರಕಾರ ಪೂರ್ಣ ದಾಖಲೆ ಪ್ರತಿಗಳನ್ನು ಸಲ್ಲಿಸದೇ ಇರುವ ಕ್ರ.ಸ.2), 3) ಮತ್ತು 4)ರಲ್ಲಿನ ಟೆಂಡರ್‌ದಾರರುಗಳ ಟೆಕ್ನಿಕಲ್ ಬಿಡ್‌ನ್ನು ಅನರ್ಹಗೊಳಿಸಿ ತಿರಸ್ಕರಿಸಲಾಗಿದೆ. ಟೆಕ್ನಿಕಲ್ ಬಿಡ್‌ನಲ್ಲಿ ಪೂರ್ಣ ದಾಖಲೆ ಪ್ರತಿಗಳನ್ನು ನೀಡಿ ಅರ್ಹತೆ ಹೊಂದಿರುವ ಮೆ: ಮಾರುತಿ ಎಂಟರ್ ಪ್ರೈಸಸ್ ರವರ Financial bidನ್ನು ದಿನಾಂಕ:26.04.2011ರಂದು ತೆರೆಯಲಾಯಿತು. ಸದರಿಯವರು ಸಲ್ಲಿಸಿರುವ ಮಾದರಿ ಸ್ಕೂಲ್‌ಬ್ಯಾಗ್‌ಗಳನ್ನು ಅಪರ ಆಯುಕ್ತರು(ಕಲ್ಯಾಣ), ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ ಇವರುಗಳ ಸಮ್ಮುಖದಲ್ಲಿ ಟೆಂಡರ್‌ನಲ್ಲಿ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ:ಎಸ್.ಜಿ.ಎಸ್. ಇಂಡಿಯಾ ಲಿ. ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂ. ಬಿ.ಟಿ.ಎಂ.ಲೇಔಟ್, ಬೆಂಗಳೂರು ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು, ಉತ್ತಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

2011-12ನೇ ಸಾಲಿನಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಸ್ಕೂಲ್‌ಬ್ಯಾಗ್ ಗಳನ್ನು ಮೆ:ಮಾರುತಿ ಎಂಟರ್ ಪ್ರೈಸಸ್ ರವರು ನೀಡಿರುವ ಟೆಂಡರ್‌ನ ಕಡಿಮೆ ದರದಲ್ಲಿ ಖರೀದಿಸಲು ಖರೀದಿ ವೆಚ್ಚದ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.

| Sl. No. | Particulars | Qnty. | Rates | Total Amount |
|---|---|---|---|---|
| 1 | School Bags for Primary and High Schools<br>Specifications:<br>Man made polyester (PVC coated) water<br>Proof materials 35 MM<br>a) PVC Clips, belts and handle<br>b) Double packet with jip<br>c) Double partition three part bag<br>d) Measurement | | | |
| | Small Size: 15 ½" X 11 ½" X 8" | 2,350 | 148/- | 3,47,800 |
| | Big Size: 17 ½" X 11 ½" X 8" | 8,625 | 152/- | 13,11,000 |
| | **TOTAL** | | | **16,58,800** |

(Rs. Sixteen Lakhs Fifty Eight Thousand Eight Hudred Only)

ಮೇಲ್ಕಂಡ ಪ್ರಮಾಣದಷ್ಟು ಸಾಮಗ್ರಿಗಳನ್ನು ಮೇಲ್ಕಂಡ ಟೆಂಡರ್‌ನ ಕಡಿಮೆ ದರಗಳಲ್ಲಿ ಖರೀದಿಸಲು ಒಟ್ಟು ಮೊತ್ತ ರೂ.16,58,800/-ಗಳು ವೆಚ್ಚವಾಗುತ್ತದೆ. ಸದರಿ ವೆಚ್ಚದ ಮೊತ್ತವನ್ನು 2011-12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆಯಲ್ಲಿ ಸ್ಕೂಲ್‌ಬ್ಯಾಗ್‌ಗಳ ಖರೀದಿಗಾಗಿ ನಿಗದಿಪಡಿಸಿರುವ ಒಟ್ಟು ಮೊತ್ತ ರೂ.30.18ಲಕ್ಷಗಳಲ್ಲಿ ಮಂಜೂರು ಮಾಡಲು ಮತ್ತು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಮೆ:ಮಾರುತಿ ಪ್ರೈಸಸ್ ರವರ ದರಗಳನ್ನು ಅಂಗೀಕರಿಸಿ ಸದರಿ ಕಂಪನಿಯವರಿಗೆ ಸರಬರಾಜು ಆದೇಶ ನೀಡುವ ಬಗ್ಗೆ ಅಥವಾ ಮರು ಟೆಂಡರ್ ಕರೆಯುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ದಿನಾಂಕ:14.05.2011ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಸ್ಕೂಲ್ ಬ್ಯಾಗ್ ಮಾದರಿಗಳನ್ನು ಸಮಿತಿ ಮುಂದೆ ಹಾಜರುಪಡಿಸಿದ್ದು, ಗುಣಮಟ್ಟ ಉತ್ತಮವಾಗಿಲ್ಲದ ಕಾರಣ, ಮರುಟೆಂಡರ್ ಕರೆಯಲು ತೀರ್ಮಾನಿಸಲಾಯಿತು.**

**ವಿಷಯದ ಸಂಖ್ಯೆ:- ಶಿ.ಸ್ಥಾ.ಸ/04/11-12**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/52/11-12, ದಿನಾಂಕ:09.05.2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 33-ಪ್ರೌಢ ಶಾಲೆಗಳು ಮತ್ತು 13-ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟಡವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು 2011-12ನೇ

ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕ 25 ಶಿಕ್ಷಣ, ಶೈಕ್ಷಣಿಕ ಗುಣಮಟ್ಟಡವನ್ನು ಹೆಚ್ಚಿಸುವ ಕಾರ್ಯಕ್ರಮಕ್ಕಾಗಿ (ಪಿ2256) ರೂ.150.00ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಮೊತ್ತದಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ದಿನಾಂಕ:09.04.2011ರಂದು ಇ–Procurement Tender ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:19.04.2011ರಂದು ಕೊನೆಯ ದಿನವಾಗಿತ್ತು. ದಿನಾಂಕ:21.04.2011ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೆ:ಎಸ್.ಕೆ.ಸ್ಟೀಲ್ ಇಂಡಸ್ಟ್ರೀಸ್, #105, 5ನೇ ಕ್ರಾಸ್, ಪ್ರಕಾಶ್‌ನಗರ, ಬೆಂಗಳೂರು–21 ರವರು ಮಾತ್ರ ಟೆಂಡರ್‌ದಾರರಾಗಿ ಭಾಗವಹಿಸಿರುತ್ತಾರೆ. ಇವರು Technical bid ನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು, ಪರಿಶೀಲಿಸಲಾಗಿ ಟೆಂಡರ್ ನಿಯಮ ನಿಬಂಧನೆಗಳಲ್ಲಿ ತಿಳಿಸಿರುವಂತೆ, ಪೂರ್ಣ ದಾಖಲೆ ಪ್ರತಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಸದರಿ ಟೆಂಡರ್‌ದಾರರನ್ನು ಅರ್ಹ ಟೆಂಡರ್‌ದಾರರೆಂದು (ಟೆಕ್ನಿಕಲ್ ಬಿಡ್‌ನಲ್ಲಿ) ಪರಿಗಣಿಸಿ ಸದರಿಯವರು ಸಲ್ಲಿಸಿರುವ ಈಟಿಚಿಟಿಛಿಚಿಟ ಛಟಿಜನ್ನು ದಿನಾಂಕ:27.04.2011ರಂದು ತೆರೆಯಲಾಯಿತು. ಸದರಿಯವರು ಸಲ್ಲಿಸಿರುವ ಮಾದರಿ ಸಲಕರಣೆಗಳನ್ನು ಅಪರ ಆಯುಕ್ತರು(ಕಲ್ಯಾಣ), ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ ಇವರುಗಳ ಸಮ್ಮುಖದಲ್ಲಿ ಟೆಂಡರ್‌ನ ನಿಯಮದಂತೆ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ: ಎಸ್.ಜಿ.ಎಸ್. ಇಂಡಿಯಾ ಲಿ. ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂ. ಬಿ.ಟಿ.ಎಂ.ಲೇಔಟ್, ಬೆಂಗಳೂರು ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು, ಎಲ್ಲಾ ಸಾಮಗ್ರಿಗಳು ಉತ್ತಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

2011–12ನೇ ಸಾಲಿನಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಗ್ರಂಥಾಲಯ ಸಲಕರಣೆಗಳನ್ನು ಮೆ:ಎಸ್.ಕೆ.ಸ್ಟೀಲ್ ಇಂಡಸ್ಟ್ರೀಸ್ ರವರು ನೀಡಿರುವ ಟೆಂಡರ್‌ನ ಕಡಿಮೆ ದರದಲ್ಲಿ ಖರೀದಿಸಲು, ಖರೀದಿ ವೆಚ್ಚದ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.

| Sl. No. | Description/Specification | Qnty. | Rate | Amount |
|---|---|---|---|---|
| 1 | Book Case:<br>Overall size 65"H X 12" D with plain glass doors disappearing type made out of 20G. CRCA sheet. The book case shall be derusted, primer coated and painted with synthetic paint as per indentor's choice, looking common keys are in duplicate. | 276 Nos. | 11,286/- | 31,14,936 |
| 2 | Filling cabinet (Four Drawers)<br>Overall size 51" X 18" X 28" with four drawers & single lock made out of 20G & CRCA sheet the entire cabinet shall be neatly derusted, primer coated & painted with two coats of synthetic | 46 Nos. | 14,193/- | 6,52,878 |

| | | | | |
|---|---|---|---|---|
| | *enamel paint as per inventors choice.* | | | |

| | | | | |
|---|---|---|---|---|
| 3 | *Steel Slotted Angle Rack:*<br>*Overall size: 6'H X 15" D X 36"W with four upright and five panels, the uprights shall be slotted angle of section 36 X 36 2 mm and the panels of size 36" x 15" made out of 20G. The panels should be fixed to the uprights by means of G1. Bolts of sizes 8mm X 16 mm by providing 08 nos., standard gussets at corners. The rack shall be painted as per indenter's choice.* | *332 Nos.* | *4,845/-* | *5,60,090* |
| 4 | *Cushion Chair:*<br>*The frame shall be made out of 16G MS tubular structure neatly powder coated. The seat shall be provided with high density cushion upholstered with good quality fabric* | *405 Nos.* | *2,860/-* | *1,58,300* |
| 5 | *Reading Table:*<br>*Overall size 6' X 2 ½' X 2 ½' made out of 32 x 32 mm square tube. The top shall be made out of 18mm thick prelaminated particle board with 32 mm teak wook beading all around neatly polished. The legs shall be provided with nylon shoes* | *276 Nos.* | *8,208/-* | *2,65,408* |
| 6 | *Steel Almirah with Glass Doors:*<br>*Steel Almirah of overall size 78"H X 36"w X 19"D with four fixed shelves making five compartments and the Almirah shall be provided with double doors with 4mm thick plain glass and three way lock made out of 22G X 22G and neatly painted with synthetic enamed paint.* | *92 Nos.* | *13,566/-* | *2,48,072* |
| | ***Total*** | | | ***99,99,684*** |

*(Rs. Ninety Nine lakhs Ninety Nine Thousand Six Hundred & Eighty Four Only)*

*ಮೇಲ್ಕಂಡ ಪ್ರಮಾಣದಷ್ಟು ಸಾಮಗ್ರಿಗಳನ್ನು ಟೆಂಡರ್‌ನಲ್ಲಿ ನಮೂದಿಸಿರುವ ಕಡಿಮೆ ದರಗಳಲ್ಲಿ ಖರೀದಿಸಲು ಒಟ್ಟು ಮೊತ್ತ ರೂ.99,99,684/–ಗಳು ವೆಚ್ಚವಾಗುತ್ತದೆ. ಈ ಮೊತ್ತವನ್ನು*

2011-12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಶಾಲಾ ಕಾಲೇಜುಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮಕ್ಕಾಗಿ ನಿಗದಿಪಡಿಸಿರುವ ಒಟ್ಟು ಮೊತ್ತ ರೂ.150.00ಲಕ್ಷಗಳಲ್ಲಿ ಮಂಜೂರು ಮಾಡಲು ಮತ್ತು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಮೆ:ಎಸ್.ಕೆ.ಸ್ಟೀಲ್ ಇಂಡಸ್ಟ್ರೀಸ್ ರವರ ದರಗಳನ್ನು ಅಂಗೀಕರಿಸಿ ಸದರಿ ಕಂ. ರವರಿಗೆ ಸರಬರಾಜು ಆದೇಶ ನೀಡುವ ಬಗ್ಗೆ ಅಥವಾ ಮರು ಟೆಂಡರ್ ಕರೆಯುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಮುಂದೂಡಿದೆ.**

***ವಿಷಯದ ಸಂಖ್ಯೆ :- ಶಿ.ಕ್ರೀ.ಸ್ಥಾ.ಸ/ 05 /11-12***

ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/178/10-11, ದಿನಾಂಕ:09.05.2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯಡಿ ಒಟ್ಟು 78-ಶಿಶುವಿಹಾರಗಳು, 12-ಪ್ರಾಥಮಿಕ ಶಾಲೆಗಳು, 33-ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶೂ ಮತ್ತು ಕಾಲುಚೀಲಗಳ ಖರೀದಿಗಾಗಿ 2011-12ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

| ಕ್ರ.ಸ | ಲೆಕ್ಕ ಶೀರ್ಷಿಕೆಯ ಹೆಸರು | ಅಂದಾಜು ಆಯವ್ಯಯ (ಲಕ್ಷಗಳಲ್ಲಿ) |
|---|---|---|
| 1 | ಶಿಶುವಿಹಾರ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಶೂಗಳ ವಿವರಣೆ | 29.21 |
| 2 | ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಶೂಗಳ ವಿವರಣೆ | 50.89 |
| 3 | ಶಿಶುವಿಹಾರದಿಂದ ಪ್ರೌಢಶಾಲೆಗಳಿಗೆ ಕಾಲುಚೀಲಗಳ ವಿವರಣೆ | 5.99 |
| **ಒಟ್ಟು** | | **86.09** |

ಮೇಲ್ಕಂಡ ಲೆಕ್ಕ ಶೀರ್ಷಿಕೆಗಳ ಒಟ್ಟು ಮೊತ್ತದಲ್ಲಿ ಶೂ ಮತ್ತು ಕಾಲುಚೀಲಗಳನ್ನು ಖರೀದಿಸಲು ದಿನಾಂಕ:21.03.2011ರಂದು ಇ-Procurement Tender ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:30.03.2011ರಂದು ಕೊನೆಯ ದಿನವಾಗಿತ್ತು. ದಿನಾಂಕ:01.04.2011ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿದ್ದು, 2 ಜನ ಟೆಂಡರ್‌ದಾರರಾದ 1) ಮೆ:ಎಕ್ಸೆಲ್ ಸ್ಪೋರ್ಟ್ಸ್ #1, ಮೆಜೆಸ್ಟಿಕ್ ಸರ್ಕಲ್, ಬೆಂಗಳೂರು-01 ಮತ್ತು 2) ಮೆ:ಎಂ.ಬಿ.ರಬ್ಬರ್ ಪ್ರೈ.ಲಿ.ಡಿ/13-15, ಸೈಟ್ 4, ಇಂಡಸ್ಟ್ರೀಯಲ್ ಏರಿಯಾ, ಸಹಿಬಾಬಾದ್-201010, ಉತ್ತರಪ್ರದೇಶ್ ರವರುಗಳು ಭಾಗವಹಿಸಿರುತ್ತಾರೆ. ಇವರುಗಳು Technical bidನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, 1) ಮೆ:ಎಕ್ಸೆಲ್ ಸ್ಪೋರ್ಟ್ಸ್ ರವರು ಟೆಂಡರ್ ನಿಯಮ ನಿಬಂಧನೆಗಳ ಪ್ರಕಾರ ಎಲ್ಲಾ ದಾಖಲಾತಿ ಪ್ರತಿಗಳನ್ನು ದೃಢೀಕರಿಸಿ ಸಲ್ಲಿಸಿರುವುದು ಕಂಡು ಬಂದಿರುವುದರಿಂದ, ಇದರ ಟೆಕ್ನಿಕಲ್ ಬಿಡ್ ಅನ್ನು ಅಂಗೀಕರಿಸಲಾಗಿದೆ. 2) ಮೆ:ಎಂ.ಬಿ. ರಬ್ಬರ್ ಪ್ರೈ.ಲಿ., ರವರು ಟೆಂಡರ್ ನಿಯಮ ನಿಬಂಧನೆಗಳ ಪ್ರಕಾರ ಕ್ರ.ಸ.5(ಡಿ)ರಲ್ಲಿ ನಮೂದಿಸಿರುವ B) Quality Assurance Certificate and 5(G) Income Tax returns for Previous 3 years ಪ್ರತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಟೆಂಡರ್‌ನ ನಿಯಮ ನಿಬಂಧನೆಗಳಲ್ಲಿ ತಿಳಿಸಿರುವ ಕ್ರ.ಸ (10)ರಲ್ಲಿರುವಂತೆ ಟೆಕ್ನಿಕಲ್

ಬಿಡ್ ಅನ್ನು ಅನರ್ಹಗೊಳಿಸಿ ತಿರಸ್ಕರಿಸಲಾಗಿದೆ. ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹತೆ ಹೊಂದಿರುವ ಮೆ:ಎಕ್ಸೆಲ್ ಸ್ಪೋರ್ಟ್ಸ್ ರವರ Financial bid ಅನ್ನು ದಿನಾಂಕ:26.04.2011ರಂದು ತೆರೆಯಲಾಯಿತು. ಸದರಿಯವರು ಸಲ್ಲಿಸಿರುವ ಮಾದರಿ ಶೂ ಮತ್ತು ಕಾಲುಚೀಲುಗಳನ್ನು ಅಪರ ಆಯುಕ್ತರು(ಕಲ್ಯಾಣ), ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ ಇವರುಗಳ ಸಮ್ಮುಖದಲ್ಲಿ ಟೆಂಡರ್‌ನಲ್ಲಿ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ:ಎಸ್.ಜಿ.ಎಸ್. ಇಂಡಿಯಾ ಲಿ. ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂ., ಬಿ.ಟಿ.ಎಂ. ಲೇಔಟ್, ಬೆಂಗಳೂರು ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು, ಉತ್ತಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

2011–12ನೇ ಸಾಲಿನಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಶೂ ಮತ್ತು ಕಾಲುಚೀಲಗಳನ್ನು ಮೆ:ಎಕ್ಸೆಲ್ ಸ್ಪೋರ್ಟ್ಸ್ ರವರು ನೀಡಿರುವ ಕಡಿಮೆ ದರದಲ್ಲಿ ಖರೀದಿಸಲು, ಖರೀದಿ ವೆಚ್ಚದ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.

| Sl. No. | Particulars | Qnty. | Rates | Total Amount. |
|---|---|---|---|---|
| 1 | Nursery Boys (3yrs. To 5yrs.) Black leather shoes with lays | 2,000 | 349/– | 6,98,000 |
| 2 | Nursery Girls (3yrs. To 5yrs.) Black leather shoes with belt | 1,900 | 354/– | 6,72,600 |
| 3 | Primary Boys (1st to 4th std) Black leather shoes with lays. | 700 | 335/– | 2,34,500 |
| 4 | Primary Girls (1st to 4th std) Black leather shoes with belt | 650 | 345/– | 2,24,250 |
| 5 | Primary Boys (5st to 7h std) Black leather shoes with lays | 500 | 340/– | 1,70,000 |
| 6 | Primary Girls (5st to 7th std) Black leather shoes with belt | 460 | 355/– | 1,63,300 |
| 7 | High School Boys(8th to 10th std) Black leather shoes with lays | 3,000 | 473/– | 14,19,000 |
| 8 | High School Girls (8th to 10th std) Black leather shoes with belt | 5,080 | 5171/– | 26,36,520 |
| 9 | High School Boys(8th to 10th std) white canvas shoes with lays | 3,000 | 209/– | 6,27,000 |
| 10 | High School Girls (8th to 10th std) white canvas shoes shoes with lays | 5,080 | 209/– | 10,61,720 |
| 11 | Nursery boys & girls black socks | 3,900 | 26/– | 1,01,400 |
| 12 | Primary boys & girls black socks | 2,310 | 29/– | 66,990 |
| 13 | High Schools boys & girls black socks | 8,080 | 33/– | 2,66,640 |
| 14 | High Schools boys & girls black socks | 8,080 | 33/– | 2,66,640 |
| | **TOTAL** | | | **86,08,560** |

*(Rs. Eighty Six Lakhs Eight Thousand Five Hundred and Sixty Only)*

ಮೇಲ್ಕಂಡ ಪ್ರಮಾಣದಷ್ಟು ಸಾಮಗ್ರಿಗಳನ್ನು ಟೆಂಡರ್‌ನ ಕಡಿಮೆ ದರಗಳಲ್ಲಿ ಖರೀದಿಸಲು ಒಟ್ಟು ಮೊತ್ತ ರೂ.86,08,560/–ಗಳು ವೆಚ್ಚವಾಗುತ್ತದೆ. ಈ ಮೊತ್ತವನ್ನು 2011–12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆಗಳಲ್ಲಿ ನಿಗದಿಪಡಿಸಿರುವ ಒಟ್ಟು ಮೊತ್ತ ರೂ.86.09 ಲಕ್ಷಗಳಲ್ಲಿ ಮಂಜೂರು ಮಾಡಲು ಮತ್ತು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಮೆ: ಎಕ್ಸೆಲ್

ಸ್ಪೋರ್ಟ್ಸ್ ರವರ ದರಗಳನ್ನು ಅಂಗೀಕರಿಸಿ ಸದರಿ ಕಂಪನಿಯವರಿಗೆ ಸರಬರಾಜು ಆದೇಶ ನೀಡುವ ಬಗ್ಗೆ ಅಥವಾ ಮರು ಟೆಂಡರ್ ಕರೆಯುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ಟಿಪ್ಪಣಿ ಪರಿಶೀಲಿಸಿ, ಬಾಟಾ ಕಂಪನಿಯಿಂದ ಖರೀದಿಸುವಂತೆ ತೀರ್ಮಾನಿಸಲಾಯಿತು.**

ಅಧ್ಯಕ್ಷರ ಅಪ್ಪಣೆ ಮೇರೆಗೆ, ಇತರೇ ವಿಷಯಗಳ ಚರ್ಚೆಯಲ್ಲಿ ಮೂರು ವರ್ಷಕ್ಕೂ ಮೇಲ್ಪಟು ಒಂದೇ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಅಧ್ಯಾಪಕರುಗಳನ್ನು ವರ್ಗಾವಣೆ ಮಾಡಬೇಕೆಂಬ ವಿಷಯ ಚರ್ಚೆಗೆ ಬಂದಿದ್ದು, ಆದರೆ, ಶೇ.50ಕ್ಕೂ ಹೆಚ್ಚು ಹುದ್ದೆಗಳು ಖಾಲಿಯಿದ್ದು, ಈ ಹಂತದಲ್ಲಿ ವರ್ಗಾವಣೆ ಮಾಡುವುದರಿಂದ, ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗುವುದಾಗಿ ಶಿಕ್ಷಣಾಧಿಕಾರಿಯವರು ತಿಳಿರುವ ಮೇರೆಗೆ, ನೇಮಕಾತಿ ನಂತರ ವರ್ಗಾವಣೆ ಮಾಡುವುದು ಸೂಕ್ತವೆಂದು ಒಟ್ಟಾರೆ ಅಭಿಪ್ರಾಯವಾಗಿರುತ್ತದೆ. ಶಾಲಾ/ಕಾಲೇಜುಗಳಲ್ಲಿ ಸ್ವಚ್ಛತೆ ಇಲ್ಲದಿರುವುದು ಸಮಿತಿಯ ಗಮನಕ್ಕೆ ಬಂದಿದ್ದು, ಇದರ ಕಡೆ ಹೆಚ್ಚಿನ ಗಮನ ಹರಿಸಲು ಸೂಚಿಸಲಾಯಿತು. ವಿದ್ಯಾರ್ಥಿಗಳ ಹಿತದೃಷ್ಟಿ ಯಾವುದೇ ಶಿಕ್ಷಕರ ಕೊರತೆಗೆ ಅವಕಾಶ ನೀಡಬಾರದು ಸಾಧ್ಯವಾದ ಮಟ್ಟಿಗೆ ಹೊರಗುತ್ತಿಗೆ ಆಧಾರದ ಮೇರೆಗೆ, ಶಿಕ್ಷಕರ ನಿಯೋಜನೆಗೆ ಕ್ರಮ ತೆಗದುಕೊಳ್ಳಲು ಸೂಚಿಸಲಾಯ್ತು ಹಾಗೂ ಈಗಾಗಲೇ ಸ್ಕೂಲ್ ಬ್ಯಾಗ್, ಶೂ ಸ್ಯಾಕ್ಸ್ ವಿತರಿಸಲು ಟೆಂಡರ್ ಕರೆಯಲಾಗದ್ದು. ಆದರೆ, ಅವುಗಳ ಗುಣಮಟ್ಟದ ಬಗ್ಗೆ ಸಮಿತಿಯು ಅಸಮಾಧಾನ ವ್ಯಕ್ತಪಡಿಸಿದ್ದು ಮರು ಟೆಂಡರ್ ಕರೆದು ಗುಣಮಟ್ಟದ ಸಾಮಗ್ರಿಗಳನ್ನು ವಿತರಿಸಲು ಅನುಕೂಲವಾಗುವಂತೆ ಕಡತಗಳನ್ನು ಹಿಂದಕ್ಕೆ ಕಳುಹಿಸಲಾಗಿದ್ದು, ಆದಷ್ಟು ಶೀಘ್ರವಾಗಿ ಮರು ಟೆಂಡರ್ ಕರೆಯಲು ಕ್ರಮ ವಹಿಸುವುದು ಹಾಗೂ ದಿನಾಂಕ:15.06.2011ರೊಳಗಾಗಿ ವಿತರಿಸಲು ಕ್ರಮ ತೆಗೆದುಕೊಳ್ಳಲು ಸೂಚಿಸಲಾಯ್ತು.

ಕಳೆದ ವರ್ಷ ಎಲ್ಲಾ ಶಾಲಾ ಮಕ್ಕಳಿಗೆ ಸ್ವೆಟರ್‌ಗಳು ವಿತರಿಸಿದ್ದು, ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಎರಡು ಜೊತೆ ನೀಡಿದ್ದು. ಆದರೆ, ಈ ಬಾರಿ ಸ್ವೆಟರ್ ಬದಲಾಗಿ ಉತ್ತಮ ಗುಣಮಟ್ಟದ ಕೋಟುಗಳನ್ನು ಖರೀದಿಸಲು ಹಾಗೂ ಇದಕ್ಕಾಗಿ ಅಗತ್ಯವಿರುವ ಹಣಕ್ಕೂ ಸಂಬಂಧಿಸಿದಂತೆ 2011-12ನೇ ಸಾಲಿನ ಆಯವ್ಯಯದಲ್ಲಿ ಹೆಚ್ಚುವರಿಗೆ ಕ್ರಮತೆಗೆದುಕೊಳ್ಳವುದು ಹಾಲಿ ಶಾಲಾ ಮಕ್ಕಳಿಗೆ ಮಾತ್ರ ಬ್ಯಾಗ್‌ಗಳನ್ನು ವಿತರಿಸಲಾಗುತ್ತಿದ್ದು ಪೂಜ್ಯ ಮಹಾಪೌರರು ಪಿ.ಯು.ಸಿ ಮಕ್ಕಳಿಗೂ ಸಹ ಬ್ಯಾಗ್ ಅವಶ್ಯಕತೆ ಇರುವುದರಿಂದ, ಪಿ.ಯು.ಸಿ ವಿದ್ಯಾರ್ಥಿಗಳಿಗು ನೀಡಲು ಸೂಚಿಸಿದ್ದು, ಅದರಂತೆ, ಈ ವರ್ಷದಿಂದಲೇ ಬ್ಯಾಗ್‌ಗಳನ್ನು ವಿತರಿಸಲು ಕ್ರಮತೆಗೆದುಕೊಳ್ಳುವುದು.

ಈಗಾಗಲೇ ತಿಳಿಸಿರುವಂತೆ, ಎಲ್ಲಾ ವಿದ್ಯಾರ್ಥಿಗಳಿಗೆ ಜೂನ್ 15ರೊಳಗಾಗಿ ನೋಟ್ ಪುಸ್ತಕ ಪಠ್ಯಪುಸ್ತಕಗಳು ಹಾಗೂ ಸಮ ವಸ್ತ್ರಗಳನ್ನು ನೀಡುವುದು ಯಾವುದೇ ಕಾರಣಕ್ಕೂ ವಿಳಂಬ ಆಗಬಾರದು ಹಾಗೂ ಈಗಾಗಲೇ ತೀರ್ಮಾನಿಸಿರುವಂತೆ, ಸಂಬಂಧಪಟ್ಟ ವಲಯ ಅಪರ/ಜಂಟಿ ಆಯುಕ್ತರು ತಿಂಗಳಿಗೊಮ್ಮೆ ತಪ್ಪದೇ ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲಾ/ಕಾಲೇಜುಗಳಿಗೆ ಖುದ್ದು ಭೇಟಿ ನೀಡುವುದಲ್ಲದೆ ಕುಂದು ಕೊರತೆಗಳನ್ನು ಆಲಿಸಿ ಅದರ ನಿವಾರಣೆ ಕ್ರಮತೆಗೆದುಕೊಳ್ಳುವುದು, ಇದರಿಂದ ಶಾಲಾ/ಕಾಲೇಜುಗಳಲ್ಲಿ ಶಿಸ್ತು ಜೊತೆಗೆ ಉಪಾಧ್ಯಾಯರುಗಳಲ್ಲಿ ಜಾಗ್ರತೆ ಉಂಟಾಗುವುದು ಇದರಿಂದ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುವಲ್ಲಿ ಸಹಕಾರಿಯಾಗುವುದು, ಈಗಾಗಲೇ ಎಲ್ಲಾ ಅಪರ/ಜಂಟಿ ಆಯುಕ್ತರವರುಗಳಿಗೆ ಶಾಲಾ ಅಭಿವೃದ್ಧಿ ಸಮಿತಿ ರಚನೆಗೆ ಕುರಿತಂತೆ ಅವರುಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾನ್ಯ ನಗರ ಪಾಲಿಕೆ ಸದಸ್ಯರುಗಳ ಸಭೆಯನ್ನು ಕರೆಯುವಂತೆ ತಿಳಿಸಲಾಗಿದ್ದು ಕ್ರಮ ತೆಗೆದುಕೊಂಡ ಬಗ್ಗೆ ಮೂರು ದಿನಗಳೊಳಗಾಗಿ ಸಮಿತಿಗೆ ವರದಿ ನೀಡುವಂತೆ, ಸೂಚಿಸುವುದೆಂದು ಮಾನ್ಯ ಸದಸ್ಯರುಗಳು ಅಭಿಪ್ರಾಯಪಟ್ಟಿರುತ್ತಾರೆ.

*ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.*

*ಅಧ್ಯಕ್ಷರು,*
*ಶಿಕ್ಷಣ ಸ್ಥಾಯಿ ಸಮಿತಿ,*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:08.06.2011ರಂದು ಶಿಕ್ಷಣ ಸ್ಥಾಯಿ ಸಮಿತಿಯ ತಪಾಸಣಾ ವರದಿ

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಶ್ರೀ.ಗೋಪಾಲ್, ಸ.ಶಿ.ಅ |
| ಶ್ರೀ. ಕೆ.ರವೀಂದ್ರನ್ – ಸದಸ್ಯರು | ಶ್ರೀ.ಯರ್ರಪ್ಪ, ಸ.ಶಿ.ಅ |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | ಶ್ರೀ.ಏಕಾಂತಪ್ಪ, ಸ.ಶಿ.ಅ |
| ಶ್ರೀಮತಿ. ಸವಿತಾ ರಮೇಶ್ – ಸದಸ್ಯರು | ಶ್ರೀ.ಚಂದ್ರಪ್ಪ, ಕ್ರೀಡಾಧಿಕಾರಿ |
| ಶ್ರೀಮತಿ. ನಾಜಿನಿ ಬೇಗಂ – ಸದಸ್ಯರು | |
| ಶ್ರೀ. ಎಂ.ವೆಂಕಟೇಶ್ – ಸದಸ್ಯರು | |
| ಶ್ರೀಮತಿ.ಎಂ.ಶಕೀಲ – ಸದಸ್ಯರು | |
| ಶ್ರೀ. ಟಿ.ತಿಮ್ಮೇಗೌಡ – ಸದಸ್ಯರು | |

ಸಮಿತಿಯು ಮಲ್ಲೇಶ್ವರಂ 12ನೇ ಅಡ್ಡ ರಸ್ತೆ, ಕೋದಂಡರಾಮಪುರ ಇಲ್ಲಿರುವ ಮಲ್ಲೇಶ್ವರಂ ಪ್ರೌಢ ಶಾಲೆಗೆ ಭೇಟಿ ನೀಡಿದ್ದು, ಈ ಶಾಲೆಯಲ್ಲಿ ಪಠ್ಯ ಪುಸ್ತಕಗಳನ್ನು ದಾಸ್ತಾನು ಮಾಡಿದ್ದು, ಅಂದು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಪಠ್ಯ ಪುಸ್ತಕ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಕ್ಕೆ ಮಾನ್ಯ ಉಪ ಮಹಾಪೌರರು ಹಾಗೂ ಆಡಳಿತ ಪಕ್ಷದ ನಾಯಕರಾದ ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದು, ಮಲ್ಲೇಶ್ವರಂ ಪ್ರೌಢ ಶಾಲೆ ಹಾಗೂ ಶ್ರೀರಾಮಪುರ ಪ್ರೌಢ ಶಾಲೆ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಪಠ್ಯ ಪುಸ್ತಕಗಳನ್ನು ವಿತರಿಸಲಾಯ್ತು. ಮಾನ್ಯ ಉಪ ಮಹಾಪೌರರು ಮಾತನಾಡುತ್ತಾ, ಶಿಕ್ಷಣ ಅಭಿವೃದ್ಧಿಗೆ ತಮ್ಮ ಅನುದಾನದಿಂದ ಅಗತ್ಯವಿರುವ ಎಲ್ಲಾ ನೆರವುಗಳನ್ನು ನೀಡುವುದಾಗಿ ಭರವಸೆ ನೀಡಿದರು ಹಾಗೂ ವಿದ್ಯಾರ್ಥಿಗಳಿಗೆ ಅವರ ಅಮೃತಹಸ್ತದಿಂದ ಪಠ್ಯ ಪುಸ್ತಕಗಳನ್ನು ವಿತರಿಸಿದರು ಹಾಗೂ ಶ್ರೀಯುತ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಇವರು ಶಿಕ್ಷಣ ಅಭಿವೃದ್ಧಿ ಆಯವ್ಯಯದಲ್ಲಿ ಪ್ರಥಮ ಆದ್ಯತೆ ನೀಡುವುದಾಗಿ ತಿಳಿಸುತ್ತಾ ಶಿಕ್ಷಣ ಅಭಿವೃದ್ಧಿ ಯಾವುದೇ ರೀತಿಯ ಬದಲಾವಣೆ ಬಯಸಿದ್ದಲ್ಲಿ ಅದನ್ನು ಕೂಡಲೇ ಅನುಷ್ಠಾನಗೊಳಿಸಲು ಸಹಕಾರ ನೀಡುವುದಾಗಿ ತಿಳಿಸುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಾಲೆಗಳು ಖಾಸಗಿ ಶಾಲೆಗಳಿಗೆ ಸ್ಪರ್ಧೆ ನೀಡುವಂತಾಗಬೇಕು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಗತ್ಯವಿರುವ ಎಲ್ಲಾ ಸೌಲಭ್ಯ ನೀಡುತ್ತಿದ್ದು, ಅದಕ್ಕೆ ಶಿಕ್ಷಕರು ಸ್ಪಂದಿಸಬೇಕು, ಉತ್ತಮ ಶಾಲೆ ಎನಿಸಬೇಕಾದರು ಅಲ್ಲಿನ ಶಿಕ್ಷಕರ ವೃಂದ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು. **"ಇದು ನಮ್ಮ ಶಾಲೆ"** ಎಂಬ ಮನೋಭಾವವನ್ನು ಬೆಳಸಿ ಕೊಳ್ಳಬೇಕು. 2010–11ನೇ ಸಾಲಿನಲ್ಲಿ ಈ ಶಾಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಲ್ಲಾ ಶಾಲೆಗಳಿಗಿಂತ ಕನಿಷ್ಟ ಫಲಿತಾಂಶ ಬಂದಿದ್ದು, ಇದಕ್ಕೆ ಶಿಕ್ಷಕರೇ ಹೊಣೆಗಾರರು, ನೀವುಗಳು ಸರಿಯಾಗಿ ಪಾಠ ಪ್ರವಚನ ಮಾಡಿದ್ದರೆ ಈ ರೀತಿ ಆಗುತ್ತಿರಲಿಲ್ಲ ಮಕ್ಕಳ ಭವಿಷ್ಯ ಹಾಳು ಮಾಡುತ್ತಿರುವಿರಿ. ಇಲ್ಲಿನ ಮಕ್ಕಳ ಸಂಖ್ಯೆ ಕಡಿಮೆ ಇರುವುದಕ್ಕೂ ನಾವೇ ಕಾರಣರು ಎಂಬುದಾಗಿ ತಿಳಿಸುತ್ತಾ, ಇನ್ನು ಮುಂದೆ ಈ ರೀತಿ ಆಗಬಾರದು, ಒಂದು ಕಾಲದಲ್ಲಿ ಈ ಶಾಲೆಗೆ ಪ್ರವೇಶ ಸಿಗುವುದೇ ಕಷ್ಟವಾಗಿತ್ತು. ಅಂತಹ ಶಾಲೆಗೆ

*ಮಕ್ಕಳ ಸಂಖ್ಯೆ ಕಡಿಮೆ ಇದೆ ಎಂದರೆ ಇದನ್ನು ನಿಮ್ಮ ಇಚ್ಚಾಶಕ್ತಿ ಕೊರತೆ ಕಾಣುತ್ತದೆ. ಇದೇ ರೀತಿ ಮುಂದುವರೆದರೆ ಶಾಲೆಯನ್ನು ಬೇರೆ ಕಡೆಗೆ ಹಸ್ತಾಂತರಿಸಬೇಕಾಗುವುದು.*

*ಇದೇ ಶಾಲಾ ಕಟ್ಟಡದ 1ನೇ ಮಹಡಿಯಲ್ಲಿ ರಾಜೀವ್ ಗಾಂಧಿ ಕಾನೂನು ಕಾಲೇಜಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು. ಆದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಕ್ಕಳು ಹಳೆಯ ಹೆಂಚಿನ ಕೊಠಡಿಗಳಲ್ಲಿ ಪಾಠ ಕಲಿಯುವಂತಾಗಿದೆ. ನರ್ಸರಿ, ಪ್ರೈಮರಿ ಶಾಲೆ ಈ ಹೆಂಚಿನ ಕೊಠಡಿಗಳಲ್ಲಿ ನಡೆಸಲಾಗುತ್ತಿದ್ದು, ಬೇರೆಯವರಿಗೆ ಸುಸಜ್ಜಿತ ಕಟ್ಟಡ ನೀಡಿರುವುದು ನಿಜಕ್ಕೂ ವಿಷಾದನೀಯ ಮತ್ತೊಂದು ಆಶ್ಚರ್ಯ ಸಂಗತಿ ಎಂದರೆ ಕಾನೂನು ಕಾಲೇಜಿನ ವಿದ್ಯುತ್ ಬಿಲ್ಲನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಭರಿಸುತ್ತಿರುವುದು. ಗುತ್ತಿಗೆ ಆಧಾರದ ಮೇಲೆ ರಾಜೀವ್ ಗಾಂಧಿ ಕಾನೂನು ಕಾಲೇಜಿಗೆ ನೀಡಲಾಗಿರುವ ಸಂಬಂಧಪಟ್ಟ ಕಡತವನ್ನು ಆಸ್ತಿ ವಿಭಾಗದಿಂದ ಪರಿಶೀಲನೆಗೆ ತರಿಸಿಕೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು.*

*ಸಂಬಂಧಪಟ್ಟ ಯೋಜನೆ ವಿಭಾಗದ ಇಂಜಿನೀಯರುಗಳು ಸ್ಥಳದಲ್ಲಿ ಹಾಜರಿದ್ದು, ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಶಾಲೆಗೆ ಒದಗಿಸಲು ಕೂಡಲೇ ಕ್ರಮತೆಗೆದುಕೊಳ್ಳಲು ಸೂಚಿಸಲಾಯ್ತು.*

*ನಂತರ ಸಮಿತಿಯು ದಯಾನಂದನಗರ ಬಾಲಕೀಯರ ಪ್ರೌಢ ಶಾಲೆಗೆ ಭೇಟಿ ನೀಡಿದ್ದು, ಅಲ್ಲಿನ ಮುಖ್ಯೋಧ್ಯಾಯರಾದ ಶ್ರೀ.ಬಿ.ಎಸ್.ಗವಿರಾಜಪ್ಪ, ಇವರು ಹಾಜರಿದ್ದ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳು ಶಾಲೆ ಭೇಟಿ ನೀಡಿದ್ದರು, ಸಹ ಎದ್ದು ನಿಂತು ಗೌರವ ನೀಡುವ ಸೌಜನ್ಯ ಕೂಡ ಇವರಲ್ಲಿ ಇರುವುದಿಲ್ಲ. ಇವರ ಛೇಂಬರ್ ದಾಸ್ತಾನು ಮಳಿಗೆಯಂತೆ ಇಟ್ಟುಕೊಂಡಿದ್ದಾರೆ. ಈ ಶಾಲೆಯಲ್ಲಿ 6 ಜನ ನಾಲ್ಕನೆ ದರ್ಜೆ ನೌಕರರಿದ್ದರು, ಶಾಲೆಯನ್ನು ಸ್ವಚ್ಛವಾಗಿ ಇಟ್ಟುಕೊಂಡಿರುವುದಿಲ್ಲ. ಅನುಪಯುಕ್ತ ವಸ್ತುಗಳನ್ನು ಎಲ್ಲಂದರಲ್ಲಿ ಬಿಸಾಡಿದ್ದು, ಇನ್ನೊಂದು ವಿಶೇಷವೇನೆಂದರೆ, ಈ ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ ಎಂಬ ಮಾಹಿತಿ ಕೂಡ ಇವರಿಗೆ ತಿಳಿಯದು, ಈ ಶಾಲೆಯಲ್ಲಿ 20 ವಿದ್ಯಾರ್ಥಿಗಳಿದ್ದು ಶಿಕ್ಷಕರು ಸರಿಯಾಗಿ ಪಾಠ ಪ್ರವಚನ ಮಾಡದೇ ಇರುವುದರಿಂದ, ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ. ಶಾಲೆ ಇರುವ ಪ್ರದೇಶದಲ್ಲಿ ಕಡುಬಡವರು, ಮಧ್ಯಮ ವರ್ಗದವರು ವಾಸ ಮಾಡುತ್ತಿದ್ದು, ಇಲ್ಲಿ ಉತ್ತಮ ಶಾಲೆಯನ್ನು ನಡೆಸಬಹುದಾಗಿದ್ದು, ಶಿಕ್ಷಕರ ಕರ್ತವ್ಯಲೋಪದಿಂದಾಗಿ ಮಕ್ಕಳ ಭವಿಷ್ಯ ಹಾಳಾಗುತ್ತಿದೆ, ಪಕ್ಕದಲ್ಲೇ ವಾರ್ಡ್ ಕಛೇರಿ ಇದ್ದರು ಇಲ್ಲಿನ ಶಾಲೆ ಮುಖ್ಯೊಪಾದ್ಯಾರು ಇದಾವುದನ್ನು ಸಂಬಂಧಪಟ್ಟವರ ಗಮನಕ್ಕಾಗಿ ತಂದಿರುವುದಿಲ್ಲ.*

*ಸಮಿತಿಯು ಈ ಶಾಲೆಯ ನಿರ್ವಹಣೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಮುಖ್ಯೋಪಾಧ್ಯಾಯರಾದ ಶ್ರೀ.ಬಿ.ಎಸ್.ಗವಿರಾಜಪ್ಪ ಇವರು ಕರ್ತವ್ಯ ಲೋಪದ ಬಗ್ಗೆ ಶಿಸ್ತಿನ ಕ್ರಮತೆಗೆದುಕೊಳ್ಳಬೇಕಾಗುತ್ತದೆ. ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರನ್ನು ಹಾಗೂ ಇತರೇ ಸಿಬ್ಬಂದಿ ವರ್ಗದವರನ್ನು ಬೇರೆ ಕಡೆಗೆ ವರ್ಗಾಯಿಸಲು ಮಾನ್ಯ ಆಯುಕ್ತರವರನ್ನು ಕೋರಲು ತೀರ್ಮಾನಿಸಿದ್ದು, ಅದರಂತೆ, ಮಾನ್ಯ ಆಯುಕ್ತರವರು ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಅಗತ್ಯ ಕ್ರಮತೆಗೆದುಕೊಳ್ಳುವರೆಂದು ಹಾಗೂ ಈ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇರುವುದರಿಂದ ಈ ವರ್ಷದಿಂದ ಕೋ-ಎಜುಕೇಷನ್ ಶಾಲೆ ನಡೆಸಲು ಅಗತ್ಯ ಕ್ರಮತೆಗೆದುಕೊಳ್ಳಲು ಸ್ಥಳದಲ್ಲಿ ಹಾಜರಿದ್ದ ಸಹ ಶಿಕ್ಷಣಾಧಿಕಾರಿ ಇವರಿಗೆ ಸೂಚಿಸಲಾಯ್ತು.*

*ಕೆ.ರಮೇಶ್ ರಾಜು,*

*ಅಧ್ಯಕ್ಷರು,*
*ಶಿಕ್ಷಣ ಸ್ಥಾಯಿ ಸಮಿತಿ,*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:09.06.2011ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳಿಗ್ಗೆ 11.00 ಘಂಟೆಗೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಉಪ ಆಯುಕ್ತರು(ಪೂರ್ವ–ಪ್ರಭಾರ) |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀ.ಕೆ.ರವೀಂದ್ರನ್ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀ.ವಿ.ಕೃಷ್ಣ – ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಶ್ರೀಮತಿ.ನಾಜಿನಿ ಬೇಗಂ – ಸದಸ್ಯರು | ವಿಷಯ ಪರಿವೀಕ್ಷಕರು |
| ಶ್ರೀಮತಿ.ಎಂ.ಶಕೀಲ – ಸದಸ್ಯರು | ವಿಷಯ ಪರಿವೀಕ್ಷಕರು |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | 11 ಪಿ.ಯು.ಕಾಲೇಜುಗಳ ಪ್ರಾಂಶುಪಾಲರು |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ – ಸದಸ್ಯರು | 31 ಪ್ರೌಢ ಶಾಲೆ ಮುಖ್ಯೋಪಾಧ್ಯಾಯರು |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | ಶಿಕ್ಷಣಾಧಿಕಾರಿಯವರ ಸಿಬ್ಬಂದಿ ವರ್ಗ |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

**ವಿಷಯದ ಸಂಖ್ಯೆ:– ಶಿ.ಸ್ಥಾ.ಸ/04/11–12**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/52/11–12, ದಿನಾಂಕ:09.05.2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 33–ಪ್ರೌಢ ಶಾಲೆಗಳು ಮತ್ತು 13–ಸಂಯುಕ್ತ ಪದವಿ ಪೂರ್ವ

ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟಡವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು 2011-12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕ 25 ಶಿಕ್ಷಣ, ಶೈಕ್ಷಣಿಕ ಗುಣಮಟ್ಟಡವನ್ನು ಹೆಚ್ಚಿಸುವ ಕಾರ್ಯಕ್ರಮಕ್ಕಾಗಿ (ಪಿ2256) ರೂ.150.00ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಮೊತ್ತದಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ದಿನಾಂಕ:09.04.2011ರಂದು ಇ-Procurement Tender ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:19.04.2011ರಂದು ಕೊನೆಯ ದಿನವಾಗಿತ್ತು. ದಿನಾಂಕ:21.04.2011ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೆ:ಎಸ್.ಕೆ.ಸ್ಟೀಲ್ ಇಂಡಸ್ಟ್ರೀಸ್, #105, 5ನೇ ಕ್ರಾಸ್, ಪ್ರಕಾಶ್‌ನಗರ, ಬೆಂಗಳೂರು-21 ರವರು ಮಾತ್ರ ಟೆಂಡರ್‌ದಾರರಾಗಿ ಭಾಗವಹಿಸಿರುತ್ತಾರೆ. ಇವರು Technical bidನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಟೆಂಡರ್ ನಿಯಮ ನಿಬಂಧನೆಗಳಲ್ಲಿ ತಿಳಿಸಿರುವಂತೆ, ಪೂರ್ಣ ದಾಖಲೆ ಪ್ರತಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಸದರಿ ಟೆಂಡರ್‌ದಾರರನ್ನು ಅರ್ಹ ಟೆಂಡರ್‌ದಾರರೆಂದು (ಟೆಕ್ನಿಕಲ್ ಬಿಡ್‌ನಲ್ಲಿ) ಪರಿಗಣಿಸಿ ಸದರಿಯವರು ಸಲ್ಲಿಸಿರುವ Financial bidನ್ನು ದಿನಾಂಕ:27.04.2011ರಂದು ತೆರೆಯಲಾಯಿತು. ಸದರಿಯವರು ಸಲ್ಲಿಸಿರುವ ಮಾದರಿ ಸಲಕರಣೆಗಳನ್ನು ಅಪರ ಆಯುಕ್ತರು(ಕಲ್ಯಾಣ), ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ ಇವರುಗಳ ಸಮ್ಮುಖದಲ್ಲಿ ಟೆಂಡರ್‌ನ ನಿಯಮದಂತೆ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ: ಎಸ್.ಜಿ.ಎಸ್. ಇಂಡಿಯಾ ಲಿ. ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂ. ಬಿ.ಟಿ.ಎಂ.ಲೇಔಟ್, ಬೆಂಗಳೂರು ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು, ಎಲ್ಲಾ ಸಾಮಗ್ರಿಗಳು ಉತ್ತಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

2011-12ನೇ ಸಾಲಿನಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಗ್ರಂಥಾಲಯ ಸಲಕರಣೆಗಳನ್ನು ಮೆ:ಎಸ್.ಕೆ.ಸ್ಟೀಲ್ ಇಂಡಸ್ಟ್ರೀಸ್ ರವರು ನೀಡಿರುವ ಟೆಂಡರ್‌ನ ಕಡಿಮೆ ದರದಲ್ಲಿ ಖರೀದಿಸಲು, ಖರೀದಿ ವೆಚ್ಚದ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.

| Sl. No. | Description/Specification | Qnty. | Rate | Amount |
|---|---|---|---|---|
| 1 | Book Case:<br>Overall size 65"H X 12" D with plain glass doors disappearing type made out of 20G. CRCA sheet. The book case shall be derusted, primer coated and painted with synthetic | 276 ಒಂ೩ | 11,286/- | 31,14,936 |

| | | | | |
|---|---|---|---|---|
| | *paint as per indentor's choice, looking common keys are in duplicate.* | | | |
| *2* | *Filling cabinet (Four Drawers)*<br>*Overall size 51" X 18" X 28" with four drawers & single lock made out of 20G & CRCA sheet the entire cabinet shall be neatly derusted, primer coated & painted with two coats of synthetic enamel paint as per inventors choice.* | *46 Nos.* | *14,193/–* | *6,52,878* |
| *3* | *Steel Slotted Angle Rack: Overall size: 6'H X 15" D X 36"W with four upright and five panels, the uprights shall be slotted angle of section 36 X 36 2 mm and the panels of size 36" x 15" made out of 20G. The panels should be fixed to the uprights by means of G1. Bolts of sizes 8mm X 16 mm by providing 08 nos., standard gussets at corners. The rack shall be painted as per indenter's choice.* | *332 Nos.* | *4,845/–* | *5,60,090* |
| *4* | *Cushion Chair:*<br>*The frame shall be made out of 16G MS tubular structure neatly powder coated. The seat shall be provided with high density cushion upholstered with good quality fabric* | *405 Nos.* | *2,860/–* | *1,58,300* |

| | | | | |
|---|---|---|---|---|
| 5 | *Reading Table:* *Overall size 6' X 2 ½' X 2 ½' made out of 32 x 32 mm square tube. The top shall be made out of 18mm thick prelaminated particle board with 32 mm teak wook beading all around neatly polished. The legs shall be provided with nylon shoes* | *276 Nos.* | *8,208/-* | *2,65,408* |
| 6 | *Steel Almirah with Glass Doors:* *Steel Almirah of overall size 78"H X 36"w X 19"D with four fixed shelves making five compartments and the Almirah shall be provided with double doors with 4mm thick plain glass and three way lock made out of 22G X 22G and neatly painted with synthetic enamed paint.* | *92 Nos.* | *13,566/-* | *2,48,072* |
| ***Total*** | | | | ***99,99,684*** |

*(Rs. Ninety Nine lakhs Ninety Nine Thousand Six Hundred & Eighty Four Only)*

*ಮೇಲ್ಕಂಡ ಪ್ರಮಾಣದಷ್ಟು ಸಾಮಗ್ರಿಗಳನ್ನು ಟೆಂಡರ್‌ನಲ್ಲಿ ನಮೂದಿಸಿರುವ ಕಡಿಮೆ ದರಗಳಲ್ಲಿ ಖರೀದಿಸಲು ಒಟ್ಟು ಮೊತ್ತ ರೂ.99,99,684/–ಗಳು ವೆಚ್ಚವಾಗುತ್ತದೆ. ಈ ಮೊತ್ತವನ್ನು 2011–12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಶಾಲಾ ಕಾಲೇಜುಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮಕ್ಕಾಗಿ ನಿಗದಿಪಡಿಸಿರುವ ಒಟ್ಟು ಮೊತ್ತ ರೂ.150.00ಲಕ್ಷಗಳಲ್ಲಿ ಮಂಜೂರು ಮಾಡಲು ಮತ್ತು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಮೆ:ಎಸ್.ಕೆ.ಸ್ಟೀಲ್ ಇಂಡಸ್ಟ್ರೀಸ್ ರವರ ದರಗಳನ್ನು ಅಂಗೀಕರಿಸಿ ಸದರಿ ಕಂ. ರವರಿಗೆ ಸರಬರಾಜು ಆದೇಶ ನೀಡುವ ಬಗ್ಗೆ ಅಥವಾ ಮರು ಟೆಂಡರ್ ಕರೆಯುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.*

*ನಿರ್ಣಯ:  ಮುಂದೂಡಿದೆ. (ದಿನಾಂಕ:23.05.2011)*

*ನಿರ್ಣಯ:  ದಿನಾಂಕ:09.06.2011: ದಿನಾಂಕ:14.05.2011ರ ಆಯುಕ್ತರ ಟಿಪ್ಪಣಿ ಪರಿಶೀಲಿಸಿದೆ.  ಪ್ರಸ್ತಾಪಿಸಿದ ವಿಷಯದ ಬಗ್ಗೆ ಮರು ಟೆಂಡರ್ ಕರೆದು ಸಮಿತಿಯ ಮುಂದೆ ಪುನರ್  ಮಂಡಿಸಲು ಸಮಿತಿಯು ತೀರ್ಮಾನಿಸಿತು.*

***ವಿಷಯದ ಸಂಖ್ಯೆ:- ಶಿ.ಸ್ಥಾ.ಸ/06/11-12***

*ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/118/11-12, ದಿನಾಂಕ:30.05.2011*

*ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 33-ಪ್ರೌಢ ಶಾಲೆಗಳು ಮತ್ತು 13-ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಎಸ್.ಎಸ್.ಎಲ್.ಸಿ. ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಮಲ್ಟಿಮೀಡಿಯಾ ಆಧಾರಿತ ಶಿಕ್ಷಣವನ್ನು ನೀಡುವ ಸಲುವಾಗಿ ಮೆ:ಕಿಯೋನಿಕ್ಸ್ ಸಂಸ್ಥೆ ರವರು ಪ್ರಸ್ತಾನವೆಯನ್ನು ಸಲ್ಲಿಸಿರುತ್ತಾರೆ.*

*ಅದರಂತೆ, ಸದರಿ ಕಾರ್ಯಕ್ರಮವನ್ನು ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ಪ್ರೌಢ ಶಾಲೆ, ಎಸ್.ಎಸ್.ಎಲ್.ಸಿ., ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅಳವಡಿಸಲು ಒಂದು ವರ್ಷದ ವೆಚ್ಚ ರೂ.4,91,23,436/-ಗಳು ಎಂದು ಅಂದಾಜಿಸಿ ಈ ವೆಚ್ಚವನ್ನು ಪಾಲಿಕೆಯ ಶಿಕ್ಷಣ ಇಲಾಖೆಯಲ್ಲಿ ಆಯವ್ಯಯ ನಿಗದಿಪಡಿಸಿಲ್ಲದಿರುವುದರಿಂದ, ಸದರಿ ವೆಚ್ಚವನ್ನು ಸಾಮಾನ್ಯ ಆಡಳಿತದಲ್ಲಿ ಭರಿಸಲು ಮೆ:ಕಿಯೋನಿಕ್ಸ್ ಸಂಸ್ಥೆಯವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಅದರಂತೆ, ದಿನಾಂಕ:22.02.2011ರಂದು ಪ್ರಸ್ತಾವನೆಯನ್ನು ಅನುಮೋದಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಮಂಡಿಸಲಾಗಿದ್ದು, ದಿನಾಂಕ:14.03.2011ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಸದರಿ ನಿರ್ಣಯವನ್ನು ಒಪ್ಪಿರುತ್ತದೆ.*

*ಶಿಕ್ಷಣ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ದಿನಾಂಕ:29.03.2011ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಅಧಿಕ ವಿಷಯದ ಸಂಖ್ಯೆ 1(285)ರನ್ವಯ ಸರ್ವಾನುಮತದಿಂದ ಅಂಗೀಕೃತವಾಯಿತು.*

*ತದನಂತರ, ಒಂದು ವರ್ಷಕ್ಕೆ ಅಂದಾಜು ರೂ.4,91,23,436/-ಗಳು ಖರ್ಚಾಗಬಹುದೆಂಬುದರ ಬದಲಿಗೆ ಐದು ವರ್ಷಕ್ಕೆ ಅಂದಾಜು ರೂ.4,91,23,436/-ಗಳು ಖರ್ಚಾಗಬಹುದೆಂದು ತಿದ್ದುಪಡಿ ಟಿಪ್ಪಣಿಯನ್ನು ಮಂಡಿಸಲಾಗಿತ್ತು ಸದರಿ ತಿದ್ದುಪಡಿ ಟಿಪ್ಪಣಿಯನ್ನು ದಿನಾಂಕ:31.03.2011ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:297/10-11ರಲ್ಲಿ ತಿದ್ದುಪಡಿ ಟಿಪ್ಪಣಿಯು ಸರ್ವಾನುಮತದಿಂದ ಅಂಗೀಕೃತವಾಯಿತು.*

*ಮುಂದುವರೆದಂತೆ, ಮೆ:ಕಿಯೋನಿಕ್ಸ್ ಸಂಸ್ಥೆ ರವರು ದಿನಾಂಕ:13.05.2011ರಂದು ಮತ್ತೊಮ್ಮೆ ಮನವಿಯನ್ನು ಸಲ್ಲಿಸಿ, ಎರಡನೇ ವರ್ಷದಿಂದ ಪ್ರತಿ ಶೈಕ್ಷಣಿಕ ವರ್ಷಗಳಲ್ಲಿ ಈ ಕಾರ್ಯಕ್ರಮದ ಮುಂದುವರಿಕೆಗೆ ನಿರ್ವಹಣಾ ಮತ್ತು ಮುಂದುವರಿಕೆ ವೆಚ್ಚವನ್ನು ಪಾಲಿಕೆಯು ಭರಿಸಬೇಕಾಗಿ ಕೋರಿರುತ್ತಾರೆ,*

*ಪರಿಶೀಲಿಸಲಾಗಿ, ಮೆ:ಕಿಯೋನಿಕ್ಸ್ ಸಂಸ್ಥೆರವರು ಸದರಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಯಂತ್ರ, ಸಲಕರಣೆ, ಪರಿಕರಗಳ ಅನುಷ್ಠಾನಿಸುವ ವೆಚ್ಚ ಮತ್ತು ಪ್ರಥಮ ವರ್ಷದ ನಿರ್ವಹಣಾ ವೆಚ್ಚವು ಸೇರಿದಂತೆ ಒಟ್ಟು ವೆಚ್ಚ ರೂ.4,91,23,436/–ಗಳು ಎಂದು ಅಂದಾಜಿಸಿರುವುದಾಗಿ ತಿಳಿಸಿ, ಎರಡನೇ ವರ್ಷದಿಂದ ಪ್ರತಿ ಶೈಕ್ಷಣಿಕ ವರ್ಷಗಳಲ್ಲಿ ಈ ಕಾರ್ಯಕ್ರಮದ ನಿರ್ವಾಹಣಾ ವೆಚ್ಚನ್ನು ಪಾಲಿಕೆಯು ಭರಿಸಲು ಕೋರಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯ ಅನುಮೋದನೆ ಕೋರಿ ಶಿಕ್ಷಣ ಸ್ಥಾಯಿ ಸಮಿತಿಯ ತೀರ್ಮಾನಕ್ಕೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ದಿನಾಂಕ:30.05.2011ರ ಪ್ರಸ್ತಾವನೆಯನ್ನು ಆಯುಕ್ತರು ಸಮಿತಿಗೆ ಸಲ್ಲಿಸಿದ್ದು, ಈ ಪ್ರಸ್ತಾವನೆಯನ್ನು ಆಯುಕ್ತರು ಪುನರ್ ಪರಿಶೀಲಿಸಿ, ನಂತರದಲ್ಲಿ ಸಮಿತಿಯ ಮುಂದೆ ಮರು ಮಂಡಿಸಲು ನಿಯಮಾನುಸಾರ ಕ್ರಮವಹಿಸುವಂತೆ ಸಮಿತಿಯು ತೀರ್ಮಾನಿಸಿತು.***

***<u>ವಿಷಯದ ಸಂಖ್ಯೆ:– ಶಿ.ಸ್ಥಾ.ಸ/07/11–12</u>***

*ವಿಷಯ: ವಾರ್ಡ್–127ರ ಮೂಡಲಪಾಳ್ಯದಲ್ಲಿ ಹೊಸದಾಗಿ ಶಿಶುವಿಹಾರ ಪ್ರಾರಂಭಿಸುವ ಕುರಿತು.*

*ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ.ಎನ್.ಶಾಂತಕುಮಾರಿ, ಮಾನ್ಯ ನಗರ ಪಾಲಿಕೆ ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(4ಎ)ಪಿಆರ್/28/11–12, ದಿನಾಂಕ:01.06.2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್–127, ಮೂಡಲಪಾಳ್ಯ, ಭೈರವೇಶ್ವರನಗರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರೌಢ ಶಾಲೆ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು, ಇಲ್ಲಿ ಸುಮಾರು 800 ವಿದ್ಯಾರ್ಥಿಗಳು ಶಾಲೆಗೆ ಬರುತ್ತಿದ್ದು, ಈ ಪ್ರದೇಶದಲ್ಲಿ ಬಡವರು, ಕೂಲಿ ಕಾರ್ಮಿಕರು ಹೆಚ್ಚಾಗಿರುವುದರಿಂದ, ಸಣ್ಣ ಮಕ್ಕಳನ್ನು ನೋಡಿಕೊಳ್ಳಲು ಯಾರು ಇಲ್ಲದೇ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗುತ್ತಿದೆ. ಆದುದರಿಂದ, ಬಿ.ಬಿ.ಎಂ.ಪಿ ಪ್ರೌಢ ಶಾಲೆ ಹತ್ತಿರ ಶಿಶುವಿಹಾರ ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.*

*ಸದರಿ ಪತ್ರಕ್ಕೆ ಅನುಗುಣವಾಗಿ ಕೂಡಲೇ ಪ್ರಕ್ರಿಯೇ ಪ್ರಾರಂಭ ಮಾಡಬೇಕಿರುವ ಹಿನ್ನೆಲೆಯಲ್ಲಿ ಬಿ.ಬಿ.ಎಂ.ಪಿ. ಪ್ರೌಢ ಶಾಲೆ, ಭೈರವೇಶ್ವರನಗರದ ಹತ್ತಿರ ಹೊಸದಾಗಿ*

ಶಿಶುವಿಹಾರ ಪ್ರಾರಂಭಿಸಲು ಅನುಮತಿ ನೀಡುವ ಸಂಬಂಧ ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ದಿನಾಂಕ:01.06.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

11.00 ಘಂಟೆಯಿಂದ 12.00 ಘಂಟೆಯವರೆಗೆ ವಿಷಯಗಳ ಬಗ್ಗೆ ಚರ್ಜೆ, 12.00 ಘಂಟೆಗೆ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರ ಸಭೆಯನ್ನು ಕರೆಯಲಾಗಿದ್ದು, ಇದರಲ್ಲಿ 13 ಪಿ.ಯು.ಸಿ ಕಾಲೇಜುಗಳ ಪೈಕಿ 11 ಕಾಲೇಜುಗಳ ಪ್ರಾಂಶುಪಾಲರು ಹಾಜರಾಗಿದ್ದು ಮೊದಲಿಗೆ ದ್ವಿತೀಯ ಪಿ.ಯು.ಸಿ ಫಲಿತಾಂಶದ ಬಗ್ಗೆ ಪರಾಮರ್ಶೆ ನಡೆಸಲಾಗಿದ್ದು, ಅತ್ಯಂತ ಕಡಿಮೆ ಫಲಿತಾಂಶ ಪಡೆದ ಶಾಲೆ ಸಿ.ಜೆ.ಸಿ. ಆಸ್ಟಿನ್ ಟೌನ್ ಫಲಿತಾಂಶ 33.78% ಈ ಬಗ್ಗೆ ಸಂಬಂಧಪಟ್ಟ ಪ್ರಾಂಶುಪಾಲರು ನೀಡಿದ ಹೇಳಿಕೆ ಸಮಂಜಸವಾಗಿರುವುದಿಲ್ಲ. ಮಹಾನಗರ ಪಾಲಿಕೆಯ ಎಲ್ಲಾ ರೀತಿ ಸೌಲಭ್ಯಗಳನ್ನು ನೀಡಿದ್ದರು ಸಹ ಫಲಿತಾಂಶ ಕಡಿಮೆಯಾಗಲು ಅಲ್ಲಿನ ಉಪನ್ಯಾಸಕರ ಇಚ್ಛಾಶಕ್ತಿ ಕೊರತೆ ಕಾರಣವಾಗಿರುತ್ತದೆ. ಕಳೆದ ಬಾರಿಗೆ ಹೊಲಿಸಿದರೆ, ಪ್ರಸಕ್ತ ಸಾಲಿನಲ್ಲಿ 3.78%ರಷ್ಟು ಹೆಚ್ಚಳವಾಗಿರುತ್ತದೆ. ಮುಂದಿನ ವರ್ಷದಲ್ಲಿ ಶೇ.50ರಷ್ಟು ಫಲಿತಾಂಶ ತರುವುದಾಗಿ ಪ್ರಾಂಶುಪಾಲರು ತಿಳಿಸಿರುತ್ತಾರೆ. ಕಳೆದ ಭಾರಿಗಿಂತ ಪ್ರಸಕ್ತ ಸಾಲಿನಲ್ಲಿ ಫಲಿತಾಂಶ ಕಡಿಮೆ ಇರುವ ಎಲ್ಲಾ ಕಾಲೇಜುಗಳ ಪರಾಮರ್ಶೆ ನಡೆಸಲಾಗಿದ್ದು, ಇದರಲ್ಲಿ ಸಿ.ಜೆ.ಸಿ.ಡಿಸ್ಪೆನ್ಸರಿ ರಸ್ತೆ, ಶೇ.71% ರಿಂದ 68.9%, ಸಿ.ಜೆ.ಸಿ.ಮಾಗಡಿ ರಸ್ತೆ, ಶೇ.66% ರಿಂದ 64.88%, ಸಿ.ಜೆ.ಸಿ. ಬನಪ್ಪ ಪಾರ್ಕ್ ಶೇ.69% ರಿಂದ 60.52%, ಸಿ.ಜೆ.ಸಿ. ಮತ್ತಿಕೆರೆ ಶೇ.72% ರಿಂದ 60%, ಸಿ.ಜೆ.ಸಿ. ಚಾಮರಾಜಪೇಟೆ ಶೇ.63% ಇದ್ದದ್ದು ಶೇ.57% ಈ ಪೈಕಿ ಸಿ.ಜೆ.ಸಿ.ಶೇ.72% ರಿಂದ 60%, ಸುಮಾರು ಶೇ.12ರಷ್ಟು ಫಲಿತಾಂಶ ಕಡಿಮೆಯಾಗಿದ್ದು, ಇದು ನಿಜಕ್ಕೂ ವಿಷಾದನೀಯ ಇನ್ನು ಮುಂದೆ. ಈ ರೀತಿಯಾಗಬಾರದು, ಮುಂದಿನ ವರ್ಷಗಳಲ್ಲಿ ಈ ರೀತಿಯಲ್ಲಿ ಫಲಿತಾಂಶ ತರುವುದಾಗಿ ಪ್ರಾಂಶುಪಾಲರುಗಳು ಭರವಸೆ ನೀಡಿರುತ್ತಾರೆ. ಸಿ.ಜೆ.ಸಿ ಬೈರವೇಶ್ವರನಗರ, ಶೇ 90%, ಸಿ.ಜೆ.ಸಿ.ಡಿಸ್ಪೆನ್ಸರಿ ರಸ್ತೆ ಶೇ,80%, ಸಿ.ಜೆ.ಸಿ.ಶ್ರೀರಾಮಪುರ ಶೇ.80%, ಸಿ.ಜೆ.ಸಿ.ಮಾಗಡಿ ರಸ್ತೆ ಶೇ.75%, ಸಿ,ಜೆ.ಸಿ.ಬನಪ್ಪ ಪಾರ್ಕ್ ಶೇ.75%, ಸಿ.ಜೆ.ಸಿ.ಮತ್ತಿಕೆರೆ ಶೇ.70%, ಸಿ.ಜೆ.ಸಿ. ಜೋಗುಪಾಳ್ಯ ಶೇ.65%, ಸಿ.ಜೆ.ಸಿ.ಚಾಮರಾಜಪೇಟೆ ಶೇ,70%, ಸಿ.ಜೆ.ಸಿ. ಕ್ಲೀವ್ ಲ್ಯಾಂಡ್ ಟೌನ್, ಶೇ.65%, ಸಿ.ಜೆ.ಸಿ. ಟಾಸ್ಕರ್ ಶೇ.70%, ಸಿ.ಜೆ.ಸಿ.ಟಾಸ್ಕರ್‌ಟೌನ್ ಶೇ.70%, ಸಿ.ಜೆ.ಸಿ.ಪಾದರಾಯನಪುರ ಶೇ.65%, ಸಿ.ಜೆ.ಸಿ. ಕಸ್ತೂರಭಾನಗರ ಶೇ,55%, ಸಿ.ಜೆ.ಸಿ.ಆಸ್ಟಿನ್ ಟೌನ್ ಶೇ,60%. ತರುವುದಾದಿ ತಿಳಿಸಿರುತ್ತಾರೆ.

ಶೇ.50%ಕ್ಕಿಂತ ಕಡಿಮೆ ಬಂದಿರುವ ಎಲ್ಲಾ ಪಿ.ಯು.ಸಿ. ಕಾಲೇಜುಗಳ ಪ್ರಾಂಶುಪಾಲರಿಗೆ ತೀವ್ರವಾದ ಎಚ್ಚರಿಕೆ ನೀಡುತ್ತಾ, ಮುಂದಿನ ವರ್ಷದಲ್ಲಿ ಯಾವುದೇ ಕಾಲೇಜಿನ ಫಲಿತಾಂಶ ಶೇ.50ಕ್ಕಿಂತ ಕಡಿಮೆ ಆಗಬಾರದು, ಹಾಲಿ ನೀವುಗಳು ನೀಡಿರುವ ಭರವಸೆಗೆ ಬದ್ಧರಾಗಿರಬೇಕೆಂದುದಾಗಿ ತಿಳಿಸಲಾಗಿದ್ದು, ಕಾಲೇಜುಗಳಿಗೆ ಯಾವುದೇ ಕೊರತೆ ಅಥವಾ ತೊಂದರೆ ಇದ್ದಲ್ಲಿ ಅದನ್ನು ಸಮಿತಿಯ ಗಮನಕ್ಕೆ ತಂದಲ್ಲಿ, ಅವುಗಳ ನಿವಾರಣೆ ಅಗತ್ಯವಿರುವ ಎಲ್ಲಾ

ಕ್ರಮತೆಗೆದುಕೊಳ್ಳಲಾಗುವುದು, ಸಭೆಯಲ್ಲಿ ಹಾಜರಿದ್ದ ಶಿಕ್ಷಣಾಧಿಕಾರಿಯವರಿಗೆ, ಸಹಾಯಕ ಶಿಕ್ಷಣಾಧಿಕಾರಿಯವರಿಗೆ, ವಿಷಯ ಪರಿವೀಕ್ಷಕರುಗಳಿಗೆ, ಕ್ರೀಡಾಧಿಕಾರಿಯವರಿಗೆ ಹೆಚ್ಚಿನ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸಲು ಹಾಗೂ ಮಹಾನಗರ ಪಾಲಿಕೆ ಕಾಲೇಜುಗಳು ಖಾಸಗಿ ಕಾಲೇಜುಗಳಿಗೆ ಸ್ಪರ್ಧೆ ನೀಡುವಂತಾಗಬೇಕು, ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕೆಂಬುದಾಗಿ ಸೂಚಿಸಲಾಯ್ತು, ಕೊನೆಯಲ್ಲಿ ಯಾವುದಾದರೂ ಸಮಸ್ಯೆ ಇದ್ದಲ್ಲಿ ಅವುಗಳ ಪಟ್ಟಿ ಮಾಡಿ ಸಮಿತಿಗೆ ಕಳುಹಿಸಿಕೊಡಲು ಸೂಚಿಸಲಾಯ್ತು.

ಮಧ್ಯಾಹ್ನ 3.00 ಘಂಟೆಗೆ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರ ಸಭೆಯನ್ನು ಕರೆಯಲಾಗಿದ್ದು, ಇಲ್ಲಿಯೂ ಸಹ ಫಲಿತಾಂಶದ ಬಗ್ಗೆ ಪರಾಮರ್ಶೆ ನಡೆಸಲಾಗಿದ್ದು, ಅತ್ಯಂತ ಕಡಿಮೆ ಫಲಿತಾಂಶ ಬಂದಿರುವ ಶಾಲಾ ಮುಖ್ಯೋಪಾಧ್ಯಾಯರುಗಳಿಗೆ ಇನ್ನು ಮುಂದೆ ಈ ರೀತಿಯಾಗದಂತೆ ತೀವ್ರವಾದ ಎಚ್ಚರಿಕೆ ನೀಡಲಾಯ್ತು, 33 ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರುಗಳ ಪೈಕಿ, 31 ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರುಗಳು ಹಾಜರಾಗಿದ್ದು, ಇದರಲ್ಲಿ ಅನೇಕರು ಶಾಲೆಯಲ್ಲಿ ಮೂಲಭೂತ ಸೌಕರ್ಯದ ಬಗ್ಗೆ ಹಾಗೂ ವಿಶೇಷವಾಗಿ ಮಾಗಡಿ ರಸ್ತೆ ಶಾಲಾ ಕಟ್ಟಡದಲ್ಲಿ ಕೊಠಡಿಗಳ ಕೊರತೆಯಿದ್ದು, ಆದರಿಂದ, 2 ಪಾಳೆಯದಲ್ಲಿ ಶಾಲೆಯನ್ನು ನಡೆಸುತ್ತಿರುವುದಾಗಿ ತಿಳಿಸಿದ್ದು, ಬೆಳಿಗ್ಗೆ ಪ್ರೌಢ ಶಾಲೆ, ಮಧ್ಯಾಹ್ನ ಪಿ.ಯು.ಸಿ ತರಗತಿಗಳನ್ನು ನಡೆಸುತ್ತಿದ್ದು ಇದರಿಂದಾಗಿ ಪೂರ್ಣ ಪ್ರಮಾಣದಲ್ಲಿ ಶಾಲೆಯನ್ನು ನಡೆಸಲು ಸಾಧ್ಯವಾಗದೇ ಇರುವುದರಿಂದ, ಪಾಠ/ಪ್ರವಚನಗಳ ಬಗ್ಗೆ ಹೆಚ್ಚಿನ ಗಮನಹರಿಸಲು ಸಾಧ್ಯವಾಗುತ್ತಿಲ್ಲ. ಮಕ್ಕಳಿಗೆ ಆಟವಾಡಲು ಆಟದ ಮೈದಾನದ ಕೊರತೆ ಇರುವುದನ್ನು ಸಮಿತಿಯ ಗಮನಕ್ಕೆ ತಂದಿದು, ಈ ಶಾಲೆಯಲ್ಲಿ ನೆಲ ಅಂತಸ್ತು ಹಾಗೂ 1ನೇ ಮಹಡಿ ಇದ್ದು, 2ನೇ ಮಹಡಿಯನ್ನು ನಿರ್ಮಿಸಿ ಕೊಡುವಂತೆ ಪ್ರದಾನ ಅಭಿಯಂತರರಿಗೆ ಪತ್ರ ಬರೆಯಲಾಗಿದೆ. ಯಾವುದೇ ಸಮಸ್ಯೆ ಇದ್ದರು ಸಹ ಅದನ್ನು ಕೂಡಲೇ ಸಮಿತಿಯ ಗಮನಕ್ಕೆ ಬಂದಲ್ಲಿ, ಅದನ್ನು ಪರಿಹರಿಸಿ ಕೊಡುವುದಾಗಿ ತಿಳಿಸಲಾಯಿತು. ಮುಂದಿನ ವರ್ಷಗಳಲ್ಲಿ ಫಲಿತಾಂಶ ಹೆಚ್ಚಾಗಲು ಗಮನ ಹರಿಸಬೇಕು. ಮುಖೋಪಾಧ್ಯಾಯರುಗಳು ಈ ನಿಟ್ಟಿನಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸ ಮಾಡಬೇಕು, ಶಾಲೆಗಳಲ್ಲಿ ಶಿಸ್ತಿಗೆ ಪ್ರಾಮುಖ್ಯತೆ ಹಾಗೂ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಕುಂದು-ಕೊರತೆಗಳ ಬಗ್ಗೆ ಪಟ್ಟಿ ತಯಾರಿಸಿ ಕೊಡುವಂತೆ ಸೂಚಿಸಲಾಯ್ತು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:23.06.2011ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳಿಗ್ಗೆ 11.00 ಘಂಟೆಗೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು - ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಚೇತನಾ ಗೌಡ - ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀ.ಕೆ.ರವೀಂದ್ರನ್ - ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀ.ವಿ.ಕೃಷ್ಣ - ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀ.ಎಂ.ವೆಂಕಟೇಶ್ - ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಶ್ರೀಮತಿ.ಸವಿತಾ ರಮೇಶ್ - ಸದಸ್ಯರು | |
| ಶ್ರೀಮತಿ.ನಾಜಿನಿ ಬೇಗಂ - ಸದಸ್ಯರು | |
| ಶ್ರೀಮತಿ.ಎಂ.ಶಕೀಲ - ಸದಸ್ಯರು | |
| ಶ್ರೀಮತಿ.ಕೆ.ಪೂರ್ಣಿಮ - ಸದಸ್ಯರು | |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ - ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ - ಸದಸ್ಯರು | |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

**ವಿಷಯದ ಸಂಖ್ಯೆ:- ಶಿ.ಸ್ಥಾ.ಸ/03/11-12**

ವಿಷಯ: ಪಾಲಿಕಯ ಶಾಲಾ/ಕಾಲೇಜುಗಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಸ್ಕೂಲ್‌ಬ್ಯಾಗ್‌ಗಳನ್ನು ಸರಬರಾಜು ಮಾಡುವ ಬಗ್ಗೆ.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/173/11-12, ದಿನಾಂಕ:10.06.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ

ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಸ್ಕೂಲ್‌ಬ್ಯಾಗ್‌ಗಳನ್ನು ಖರೀದಿಸಿ ವಿತರಿಸಲು 2011-12ನೇ ಸಾಲಿನ ಆಯವ್ಯಯ 25 ಶಿಕ್ಷಣ, ಇತರೇ ವೆಚ್ಚಗಳು, ಸ್ಕೂಲ್‌ಬ್ಯಾಗ್‌ಗಳ ಖರೀದಿಗಾಗಿ ರೂ.31.18ಲಕ್ಷಗಳ ಅನುದಾನವನ್ನು ನಿಗದಿಗೊಳಿಸಿದ್ದು, ಸದರಿ ಮೊತ್ತದಲ್ಲಿ ಸ್ಕೂಲ್‌ಬ್ಯಾಗ್‌ಗಳನ್ನು ಖರೀದಿಸಲು ದಿನಾಂಕ:28.05.2011ರಂದು ಇ-Procurement Tender ದ್ವಿ-ಲಕೋಟೆ ಪದ್ಧತಿಯಲ್ಲಿ ಮರುಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:02.06.2011ರಂದು ಕೊನೆಯ ದಿನವಾಗಿದ್ದು, ದಿನಾಂಕ:04.06.2011ರಂಡು ಟೆಕ್ನಿಕಲ್ ಬಿಡ್ ಅನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ 2 ಜನ ಟೆಂಡರ್‌ದಾರರುಗಳಾದ 1) ಮೆ:ಮಾರುತಿ ಎಂಟರ್ ಪ್ರೈಸಸ್ #28, ಡಾ:ಟಿ.ಸಿ.ಎಂ.ರಾಯನ್ ರಸ್ತೆ, ಬೆಂಗಳೂರು-53, 2) ಮೆ:ಬಾಲಾಜಿ ಇಂಡಸ್ಟ್ರೀಸ್ #9, 3ನೇ ಮಹಡಿ, ಬೆಂಗಳೂರು-53, ರವರುಗಳು ಭಾಗವಹಿಸಿರುತ್ತಾರೆ. ಇವರುಗಳು ಖಿಜುಛಿಟಿಛಿಚಿಟ ಛಿಜ ನಲ್ಲಿ ದಾಖಲಾತಿಗಳನ್ನು ಪರಿಶೀಲಿಸಲಾಗಿ, 2 ಜನ ಟೆಂಡರ್‌ದಾರರುಗಳು ಟೆಂಡರ್ ನಿಯಮ ನಿಬಂಧನೆಗಳಲ್ಲಿ ತಿಳಿಸಿರುವ ಕ್ರ.ಸಮ:5ರಲ್ಲಿ ತಿಳಿಸಿರುವಂತೆ ಪೂರ್ಣ ದಾಖಲೆ ಪತ್ರಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಇವರುಗಳ ಟೆಕ್ನಿಕಲ್ ಬಿಡ್ ಅನ್ನು ಅಂಗೀಕರಿಸಬಹುದಾಗಿರುತ್ತದೆ.

ಟೆಕ್ನಿಕಲ್ ಬಿಡ್‌ನಲ್ಲಿ ಪೂರ್ಣ ದಾಖಲೆ ಪ್ರತಿಗಳನ್ನು ನೀಡಿ ಅರ್ಹತೆ ಹೊಂದಿರುವ 2 ಜನ ಟೆಂಡರ್‌ದಾರರುಗಳ Financial bidನ್ನು ದಿನಾಂಕ:06.06.2011ರಂದು ತೆರೆಯಲಾಯಿತು. ಸದರಿಯವರು ಸಲ್ಲಿಸಿರುವ ಮಾದರಿ ಸ್ಕೂಲ್‌ಬ್ಯಾಗ್‌ಗಳನ್ನು ಅಪರ ಆಯುಕ್ತರು(ಆಸ್ತಿಗಳು), ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ ಇವರುಗಳ ಸಮ್ಮುಖದಲ್ಲಿ ಟೆಂಡರ್‌ನಲ್ಲಿ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ:ಎಸ್.ಜಿ.ಎಸ್ ಇಂಡಿಯಾ ಲಿ., ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂ., ಬಿ.ಟಿ.ಎಂ. ಲೇಔಟ್, ಬೆಂಗಳೂರು ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು, ಉತ್ತಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

ಫೈನಾನ್ಸಿಯಲ್ ಬಿಡ್‌ನಲ್ಲಿ 2 ಜನ ಟೆಂಡರ್‌ದಾರರುಗಳು ಸಲ್ಲಿಸಿರುವ ತಲಾ ಒಂದು ಸ್ಕೂಲ್‌ಬ್ಯಾಗ್‌ನ ದರಗಳು ಈ ಕೆಳಕಂಡಂತೆ ಇರುತ್ತದೆ.

| Sl. No. | Particulars | | Unit | M/s.Maruthi Enterprises | M/s.Balaji Industries |
|---|---|---|---|---|---|
| | | | | Rate | Rate |
| 1 | Big Size | 6/3 PNP Premium imported good quality Matty material Inner partition in 420 Dinner Nylon Height 46 coms., width 34 cms & Depth 20 cms shape:Half oval Shape | Each | 385.00 | 397.00 |
| 2 | Medium Size | 6/3 PNP Premium imported good quality Matty material Inner partition in 420 Dinner | Each | 365.00 | 375.00 |

| | | | | | |
|---|---|---|---|---|---|
| | | Nylon Height 41 coms., width 30 cms & Depth 17 cms shape:Half oval Shape | | | |

ಸದರಿ ಟೆಂಡರ್‌ನ ಫೈನಾನ್ಸಿಯಲ್ ಬಿಡ್‌ನಲ್ಲಿ 2 ಜನ ಟೆಂಡರ್‌ದಾರರುಗಳು ಸಲ್ಲಿಸಿರುವ ಮೇಲ್ಕಂಡ ದರಗಳ ತುಲನಾತ್ಮಕ ಪಟ್ಟಿಯನ್ನು ತಯಾರಿಸಿ ಪರಿಶೀಲಿಸಿದಾಗ ಮೆ:ಮಾರುತಿ ಎಂಟರ್ ಪ್ರೈಸಸ್ ರವರು ಮೆ:ಬಾಲಾಜಿ ಇಂಡಸ್ಟ್ರೀಸ್ ರವರಿಗಿಂತ ಕಡಿಮೆ ದರಗಳನ್ನು ನೀಡಿರುವುದು ಕಂಡು ಬಂದಿರುವ ಕಾರಣ, ಇವರನ್ನು ಎಲ್–1 ಅರ್ಹ ಟೆಂಡರ್‌ದಾರರೆಂದು ಪರಿಗಣಿಸಹುದಾಗಿದೆ.

ಎಲ್–1 ಟೆಂಡರ್‌ದಾರರಾದಂತಹ ಮೆ:ಮಾರುತಿ ಎಂಟರ್ ಪ್ರೈಸಸ್ ರವರು ನೀಡಿರುವ ಮೇಲ್ಕಂಡ ದರಗಳಲ್ಲಿ 12 ಪ್ರಾಥಮಿಕ ಶಾಲೆಗಳು, 33, ಪ್ರೌಢ ಶಾಲೆಗಳು ಮತ್ತು ಪೂಜ್ಯ ಮಹಾಪೌರರು ಹಾಗೂ ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ ರವರ ಆದೇಶದ ಮೇರೆಗೆ 13 ಕಿರಿಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯಾಬಲಕ್ಕನುಗುಣವಾಗಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಸ್ಕೂಲ್‌ಬ್ಯಾಗ್‌ಗಳನ್ನು, ಈ ಕೆಳಕಂಡಂತೆ ಖರೀದಿಸಬಹುದಾಗಿರುತ್ತದೆ.

| Sl. No. | Particulars | | Qty. | Rate | Rate |
|---|---|---|---|---|---|
| 1 | Big Size (High School Students | 6/3 PNP Premium imported good quality Matty material Inner partition in 420 Dinner Nylon Height 46 coms., width 34 cms & Depth 20 cms shape:Half oval Shape | 8,625 | 385.00 | 33,20,625/- |
| 2 | Big Size (Jr. College Students | 6/3 PNP Premium imported good quality Matty material Inner partition in 420 Dinner Nylon Height 46 coms., width 34 cms & Depth 20 cms shape:Half oval Shape | 5,125 | 385.00 | 19,73,125/- |
| 3 | Medium Size (Primary School Students | 6/3 PNP Premium imported good quality Matty material Inner partition in 420 Dinner Nylon Height 46 coms., width 34 cms & Depth 20 cms shape:Half oval Shape | 2,350 | 365.00 | 8,57,750/- |

| Total | 61,51,500/- |
|---|---|

(ರೂ.ಅರವತ್ತೊಂದು ಲಕ್ಷದ ಐವತ್ತೊಂದು ಸಾವಿರದ ಐದು ನೂರು ಮಾತ್ರ)

ಮೇಲ್ಕಂಡ ಖರೀದಿ ವೆಚ್ಚದ ಒಟ್ಟು ಮೊತ್ತ ರೂ.61,51,500/-ಗಳನ್ನು 2011-12ನೇ ಸಾಲಿನ ಆಯವ್ಯಯ 25 ಶಿಕ್ಷಣ, ಇತರೇ ವೆಚ್ಚಗಳು, ಸ್ಕೂಲ್‌ಬ್ಯಾಗ್‌ಗಳ ಖರೀದಿಗಾದಿ ನಿಗದಿಪಡಿಸಿರುವ ಮೊತ್ತ ರೂ.31.18ಲಕ್ಷಗಳಲ್ಲಿ ಹಾಗೂ ಹೆಚ್ಚುವರಿ ವೆಚ್ಚದ ಮೊತ್ತ ರೂ.31.00ಲಕ್ಷಗಳನ್ನು ಶಿಕ್ಷಣ ಇಲಾಖೆಯ ಆಯವ್ಯಯ ವೆಚ್ಚದ ಇತರೇ ಶೀರ್ಷಿಕೆಗಳಲ್ಲಿ ಭರಿಸಿ ಅವಶ್ಯಕತೆ ಇರುವ ಪ್ರಮಾಣದಷ್ಟು ಸ್ಕೂಲ್‌ಬ್ಯಾಗ್‌ಗಳನ್ನು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಟೆಂಡರ್‌ನ ಕಡಿಮೆ ದರ ನೀಡಿರುವ ಮೆ:ಮಾರುತಿ ಎಂಟರ್ ಪ್ರೈಸಸ್ ರವರಿಂದ ಖರೀದಿಸಬಹುದಾಗಿರುತ್ತದೆ. ಸದರಿ ಖರೀದಿ ವೆಚ್ಚದ ಮೊತ್ತ ರೂ.61,51,500/-ಗಳನ್ನು ಮಂಜೂರು ಮಾಡಲು ಹಾಗೂ ಮೆ:ಮಾರುತಿ ಎಂಟರ್ ಪ್ರೈಸಸ್ ರವರಿಗೆ ಸ್ಕೂಲ್‌ಬ್ಯಾಗ್‌ಗಳನ್ನು ಅತೀ ಜರೂರಾಗಿ ಸರಬರಾಜು ಮಾಡುವಂತೆ, ಸರಬರಾಜು ಆದೇಶ ನೀಡಲು ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ದಿನಾಂಕ:10.06.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**ವಿಷಯದ ಸಂಖ್ಯೆ:- ಶಿ.ಸ್ಥಾ.ಸ/08/11-12**

ವಿಷಯ: ಪಾಲಿಕೆಯ 13 ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಪಠ್ಯಪುಸ್ತಕ/ಅಧ್ಯಯನ ಪುಸ್ತಕಗಳನ್ನು ಸರಬರಾಜು ಮಾಡುವ ಬಗ್ಗೆ.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/15/11-12, ದಿನಾಂಕ:17.06.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಪಠ್ಯಪುಸ್ತಕ/ಅಧ್ಯಯನ ಪುಸ್ತಕಗಳನ್ನು ಖರೀದಿಸಿ ವಿತರಿಸಲು 2011-12ನೇ ಸಾಲಿನ ಆಯವ್ಯಯ 25 ಶಿಕ್ಷಣ, ಕಿರಿಯ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು/ಅಧ್ಯಯನ ಪುಸ್ತಕಗಳ ಖರೀದಿಗಾಗಿ ರೂ.30.75ಲಕ್ಷಗಳ ಅನುದಾನವನ್ನು ನಿಗದಿಗೊಳಿಸಿದ್ದು, ಸದರಿ ಮೊತ್ತದಲ್ಲಿ ಪಠ್ಯಪುಸ್ತಕಗಳು/ಅಧ್ಯಯನ ಪುಸ್ತಕಗಳನ್ನು ಖರೀದಿಸಲು ದಿನಾಂಕ:20.05.2011ರಂದು ಇ-Procument Tender ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:30.05.2011ರಂದು ಕೊನೆಯ ದಿನವಾಗಿದ್ದು, ದಿನಾಂಕ:01.06.2011ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಮೆ:ಪ್ರಕಾಶ ಸಾಹಿತ್ಯ #1, ತಲಕಾಡು ಸುಬ್ಬರಾವ್ ಲೇನ್, ಕಾಟನ್‌ಪೇಟೆ, ಬೆಂಗಳೂರು-53 ರವರು ಏಕೈಕ ಟೆಂಡ್‌ದಾರರಾಗಿ ಭಾಗವಹಿಸಿರುತ್ತಾರೆ. ಸದರಿಯವರು Technical bid ನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಟೆಂಡರ್‌ನ ನಿಯಮ ನಿಬಂಧನೆಗಳ ಕ್ರ.ಸಂ. 5ರಲ್ಲಿ ತಿಳಿಸಿರುವಂತೆ ಪೂರ್ಣ ದಾಖಲೆ ಪತ್ರಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಇವರುಗಳ ಟೆಕ್ನಿಕಲ್ ಬಿಡ್‌ನ್ನು ಅಂಗೀಕರಿಸಬಹುದಾಗಿರುತ್ತದೆ.

ಟೆಕ್ನಿಕಲ್ ಬಿಡ್‌ನಲ್ಲಿ ಪೂರ್ಣ ದಾಖಲೆ ಪ್ರತಿಗಳನ್ನು ನೀಡಿ ಅರ್ಹತೆ ಹೊಂದಿರುವ ಮೆ:ಪ್ರಕಾಶ ಸಾಹಿತ್ಯ ರವರ Financial bid ನ್ನು ದಿನಾಂಕ:06.06.2011ರಂದು ತೆರೆಯಲಾಯಿತು. ಸದರಿಯವರು ಪಠ್ಯಪುಸ್ತಕಗಳ ಮುಖ ಬೆಲೆಯ ಮೇಲೆ ಶೇ.16ರ ಸೋಡಿಯನ್ನು ನೀಡುವುದಾಗಿ ಒಪ್ಪಿರುವುದರಿಂದ, ಸದರಿಯವರನ್ನು ಅರ್ಹ ಟೆಂಡರ್‌ದಾರರೆಂದು ಪರಿಗಣಿಸಬಹುದಾಗಿದೆ.

ಮೆ: ಪ್ರಕಾಶ ಸಾಹಿತ್ಯ ರವರು ನೀಡಿರುವ ಮೇಲ್ಕಂಡ ಸೋಡಿಯಲ್ಲಿ 13 ಕಿರಿಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯಾಬಲಕ್ಕನುಗುಣವಾಗಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ವಿವಿಧ ಶೀರ್ಷಿಕೆವಾರು ಪಠ್ಯಪುಸ್ತಕಗಳನ್ನು ಖರೀದಿಸಬಹುದಾಗಿರುತ್ತದೆ.

ಮೆ:ಪ್ರಕಾಶ ಸಾಹಿತ್ಯ ರವರು ನೀಡಿರುವ ಪಠ್ಯಪುಸ್ತಕಗಳ ಎಂ.ಆರ್.ಪಿ. ದರಗಳಿಗೆ ಶೇ.16ರಂತೆ ರಿಯಾಯ್ತಿ ಪಡೆದು ಅಗತ್ಯ ಇರುವ ಅಂದಾಜು 48,000 ಸಂಖ್ಯೆಯಷ್ಟು ವಿವಿಧ ಶೀರ್ಷಿಕೆಗಳ ಪಠ್ಯಪುಸ್ತಕಗಳನ್ನು ಖರೀಸಿಸಲು, ಖರೀದಿ ವೆಚ್ಚ ರೂ.30.75ಲಕ್ಷಗಳು ಆಗಬಹುದೆಂದು ಅಂದಾಜು ಮಾಡಲಾಗಿದೆ. ಸದರಿ ಖರೀದಿ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯ ಶೀರ್ಷಿಕ ಕಿರಿಯ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು/ಅಧ್ಯಯನ ಪುಸ್ತಕಗಳ ಖರೀದಿಗಾಗಿ ನಿಗದಿಪಡಿಸಿರುವ ಮೊತ್ತ ರೂ.30.75ಲಕ್ಷಗಳಲ್ಲಿ ಮಂಜೂರು ಮಾಡಲು ಮತ್ತು ಪಾರದರ್ಶಕ ನಿಯಮಾನುಸಾರ ಹೆಚ್ಚಿನ ಸೋಡಿ ನೀಡಿರುವ ಮೆ:ಪ್ರಕಾಶ ಸಾಹಿತ್ಯ ರವರ ದರಗಳನ್ನು (ಶೇ.16ರ ಸೋಡಿ ಕಳೆದು) ಅಂಗೀಕರಿಸಿ, ಜರೂರಾಗಿ ಪಠ್ಯಪುಸ್ತಕಗಳನ್ನು ಸರಬರಾಜು ಮಾಡುವಂತೆ ಸರಬರಾಜು ಆದೇಶ ನೀಡಲು ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ ದಿನಾಂಕ:17.06.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**<u>ವಿಷಯದ ಸಂಖ್ಯೆ:- ಶಿ.ಸ್ಥಾ.ಸ/09/11-12</u>**

ವಿಷಯ: ವಾರ್ಡ್-72ರ ಹೇರೋಹಳ್ಳಿ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಹೊಸದಾಗಿ ಶಿಶುವಿಹಾರ ಪ್ರಾರಂಭಿಸುವ ಕುರಿತು.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/30/11-12, ದಿನಾಂಕ:14.06.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ಹನುಮಂತೇಗೌಡ, ಸದಸ್ಯರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್-72, ಹೇರೋಹಳ್ಳಿ ರವರು ವಿಳಾಸ ಮಾಡಿರುವ ಪತ್ರದಲ್ಲಿ ವಾರ್ಡ್-72ರ ಹೇರೋಹಳ್ಳಿ ವ್ಯಾಪ್ತಿಗೆ ಸೇರುವ 1) ಮಹದೇಶ್ವರನಗರ 2) ಮುನೇಶ್ವನಗರ 3) ಪ್ರಸನ್ನ ಬಡಾವಣೆ 4) ಮಾರುತಿನಗರ 5) ಕೆಂಪೇಗೌಡನಗರ 6) ವಿಘ್ನೇಶ್ವರನಗರ 7) ತುಂಗಾನಗರ ಮುಂತಾದ ಗ್ರಾಮಗಳಲ್ಲಿ ತುಂಬಾ ಕಡುಬಡವರು ಹಾಗೂ ಕೂಲಿ ಕಾರ್ಮಿಕರು ವಾಸವಾಗಿದ್ದು, ಈ ಪ್ರದೇಶದಲ್ಲಿ ಶಿಶುವಿಹಾರ ಇರುವುದಿಲ್ಲ. ಆದ್ದರಿಂದ, ಮೇಲ್ಕಂಡ ಪ್ರದೇಶದಲ್ಲಿ ಬಡವರು, ಕೂಲಿ ಕಾರ್ಮಿಕರು ಹೆಚ್ಚಾಗಿರುವುದರಿಂದ, ಸಣ್ಣ ಮಕ್ಕಳನ್ನು ನೋಡಿಕೊಳ್ಳಲು ಯಾರು ಇಲ್ಲದೇ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗುತ್ತಿದೆ. ಆದ್ದರಿಂದ, ಮೇಲ್ಕಂಡ 7 ಗ್ರಾಮಗಳಲ್ಲಿ ಹೊಸದಾಗಿ ಪಾಲಿಕೆಯ ವತಿಯಿಂದ ಶಿಶುವಿಹಾರ ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಪತ್ರಕ್ಕೆ ಅನುಗುಣವಾಗಿ ಕೂಡಲೇ ಪ್ರಕ್ರಿಯೆ ಪ್ರಾರಂಭ ಮಾಡಬೇಕಿರುವ ಹಿನ್ನೆಲೆಯಲ್ಲಿ ವಾರ್ಡ್-72ರ ಹೇರೋಹಳ್ಳಿ ವ್ಯಾಪ್ತಿಗೆ ಸೇರುವ 1) ಮಹದೇಶ್ವರನಗರ 2) ಮುನೇಶ್ವರನಗರ 3) ಪ್ರಸನ್ನ ಬಡಾವಣೆ 4) ಮಾರುತಿನಗರ 5) ಕೆಂಪೇಗೌಡನಗರ 6) ವಿಘ್ನೇಶ್ವರನಗರ 7) ತುಂಗಾನಗರ ಗ್ರಾಮಗಳಲ್ಲಿ ಹೊಸದಾಗಿ ಪಾಲಿಕೆಯ ವತಿಯಿಂದ ಶಿಶುವಿಹಾರ ಪ್ರಾರಂಭಿಸಲು ಅನುಮತಿ ನೀಡುವ ಸಂಬಂಧ ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

## ನಿರ್ಣಯ: ದಿನಾಂಕ:14.06.2011ರ ಆಯುಕ್ತರ ಟಿಪ್ಪಣಿ.

**ವಿಷಯದ ಸಂಖ್ಯೆ:- ಶಿ.ಸ್ಥಾ.ಸ/10/11-12**

ವಿಷಯ: ವಾರ್ಡ್-72ರ ಹೇರೋಹಳ್ಳಿ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಪಾಲಿಕೆಯ ವತಿಯಿಂದ ಹೊಸದಾಗಿ ಪ್ರೌಢ ಶಾಲೆಯನ್ನು ಪ್ರಾರಂಭಿಸುವ ಕುರಿತು.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/180/11-12, ದಿನಾಂಕ:14.06.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ಹನುಮಂತೇಗೌಡ, ಸದಸ್ಯರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್-72, ಹೇರೋಹಳ್ಳಿ ಪ್ರದೇಶದಲ್ಲಿ ಕಡುಬಡವರು, ಸೂರಿಲ್ಲದವರು ಆರ್ಥಿಕವಾಗಿ ಹಿಂದುಳಿದವರು, ಹರಿಜನ-ಗಿರಿಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದು, ಸದರಿ ಸ್ಥಳದಲ್ಲಿ ಯಾವುದೇ ಸರ್ಕಾರಿ ಅಥವಾ ಮಹಾನಗರ ಪಾಲಿಕೆ ಪ್ರೌಢ ಶಾಲೆ ಇರುದಿಲ್ಲವಾದ್ದರಿಂದ ಹಾಗೂ ಅಲ್ಲಿನ ಜನರು ಖಾಸಗಿ ಶಾಲೆಯಲ್ಲಿ ಹೆಚ್ಚಿನ ಡೊನೇಷನ್ ಕೊಟ್ಟು ವ್ಯಾಸಂಗ ಮಾಡಿಸಲು ಕಷ್ಟಸಾಧ್ಯವಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ವತಿಯಿಂದ ಹೊಸದಾಗಿ ಪ್ರೌಢ ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಸದರಿ ಪ್ರೌಢ ಶಾಲೆಯನ್ನು ಪ್ರಾರಂಭಿಸಲು ಕಟ್ಟಡದ ವ್ಯವಸ್ಥೆಯನ್ನು ನೀಡುವುದಾಗಿ ತಿಳಿಸುತ್ತಾ, ಶಿಕ್ಷಕರು ಹಾಗೂ ಪೀಠೋಪಕರಣಗಳ ವ್ಯವಸ್ಥೆಯೊಂದಿಗೆ ಹೊಸದಾಗಿ ಪ್ರೌಢ ಶಾಲೆಯನ್ನು ಪ್ರಾರಂಭಿಸಲು ಕೋರಿರುತ್ತಾರೆ.

ಸದರಿ ಪತ್ರಕ್ಕೆ ಅನುಗುಣವಾಗಿ ಕೂಡಲೇ ಪ್ರಕ್ರಿಯೇ ಪ್ರಾರಂಭ ಮಾಡಬೇಕಿರುವ ಹಿನ್ನೆಲೆಯಲ್ಲಿ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ವಾರ್ಡ್-72ರ ಹೇರೋಹಳ್ಳಿ ಪ್ರದೇಶದಲ್ಲಿ ಕಟ್ಟಡದ ವ್ಯವಸ್ಥೆ ಇರುವುದರಿಂದ ಹಾಗೂ ಈಗಾಗಲೇ ಶಾಲೆಗಳು 01.06.2011ರಿಂದ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊಸದಾಗಿ ಪಾಲಿಕೆಯ ವತಿಯಿಂದ ಪ್ರೌಢ ಶಾಲೆ ಪ್ರಾರಂಭಿಸಲು ಅನುಮತಿ ನೀಡುವ ಸಂಬಂಧ ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

## ನಿರ್ಣಯ: ದಿನಾಂಕ:14.06.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

**ವಿಷಯದ ಸಂಖ್ಯೆ:- ಶಿ.ಸ್ಥಾ.ಸ/11/11-12**

ವಿಷಯ: ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡುವ ಕುರಿತು.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/14/11-12, ದಿನಾಂಕ:14.06.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯಡಿ 78 ಪ್ರಾಥಮಿಕ ಶಾಲೆ, 33 ಪ್ರೌಢ ಶಾಲೆಗಳು ಹಾಗೂ 13 ಸಂಯುಕ್ತ ಪದವಿ

ಪೂರ್ವ ಕಾಲೇಜುಗಳು ಹಾಗೂ ಬಿ.ಬಿ.ಎಂ.ಪಿ ಮತ್ತು ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಪಬ್ಲಿಕ್ ಸ್ಕೂಲ್ ಅಸ್ತಿತ್ತದಲ್ಲಿದ್ದು, ಸದರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಪಾಲಿಕೆಯ ವತಿಯಿಂದ ಉಚಿತವಾಗಿ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡಬೇಕಾಗಿರುತ್ತದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಡಿ/108/ಎಂಎಂಎಸ್/2010, ದಿನಾಂಕ:31.05.2010ರ ಆದೇಶದಂತೆ, 2010–11ನೇ ಶೈಕ್ಷಣಿಕ ಸಾಲಿನಿಂದ ಅಕ್ಷರ ದಾಸೋಹ ಕಾರ್ಯಕ್ರಮದ ಅಕ್ಷಯ ಪಾತ್ರ ಪ್ರತಿಷ್ಠಾನಕ್ಕೆ ವಹಿಸಿರುವ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ನವೀಕರಿಸುವ ಸಂದರ್ಭದಲ್ಲಿ ಆ ಸಂಸ್ಥೆಯವರು ದೇಣಿಗೆಯನ್ನು ಪಡೆಯಬಾರದು ಎಂಬ ಕಟ್ಟುನಿಟ್ಟಿನ ಷರತ್ತಿಗನುಗುಣವಾಗಿ ಈ ಯೋಜನೆಯನ್ನು ಮುಂದುವರೆಸಬಹುದೆಂದು ಸೂಚನೆ ನೀಡಿರುವ ಮೇರೆಗೆ ಹಾಗೂ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಿದ್ಯಾರ್ಥಿಗಳಿಂದಾಗಲಿ, ಅವರ ಪೋಷಕರಿಂದಾಗಲಿ ಯಾವುದೇ ಹಣವನ್ನು ಸಂಗ್ರಹಿಸುವುದನ್ನು ನಿಷೇದಿಸಿದೆ ಎಂಬ ಅಂಶದ ಆಧಾರದ ಮೇರೆಗೆ, ಕಳೆದ 2010–11ನೇ ಸಾಲಿನಲ್ಲಿ ಮೆ:ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ಸರಬರಾಜು ಆದೇಶ ನೀಡಲಾಗಿತ್ತು.

ದಿನಾಂಕ:28.04.2011ರಂದು ಮೆ:ಮೊಹ್ಸಿನ್ ಷರೀಪ್ ಎಜುಕೇಷನಲ್ & ಚಾರಿಟಬಲ್ ಟ್ರಸ್ಟ್ ರವರು ಮಾನ್ಯ ಆಯುಕ್ತರವರಿಗೆ ಪತ್ರವನ್ನು ವಿಳಾಸ ಮಾಡಿ ಪಾಲಿಕೆಯಲ್ಲಿ ವ್ಯಾಸಂಗ ಮಾಡುವ 50,000 ವಿದ್ಯಾರ್ಥಿಗಳಿಗೆ ತಲಾ ವಿದ್ಯಾರ್ಥಿಗೆ ರೂ.5.00ರ ದರದಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಸರಬರಾಜು ಮಾಡುವುದಾಗಿ ತಿಳಿಸಿರುತ್ತಾರೆ.

ಪ್ರಸ್ತುತ 2011–12ನೇ ಸಾಲಿನಲ್ಲಿ ನೀಡಿರುವ ಷರತ್ತು ಮತ್ತು ನಿಬಂಧನೆಯಂತೆ ಹಾಗೂ ದರದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಮಾಡಲು ಅನುಮತಿ ಕೋರಿ ದಿನಾಂಕ:09.05.2010ರಂದು ಮೆ:ಅಕ್ಷಯ ಫೌಂಡೇಷನ್ ರವರು ಪತ್ರವನ್ನು ವಿಳಾಸ ಮಾಡಿರುತ್ತಾರೆ.

ಪರಿಶೀಲಿಸಲಾಗಿ, ಮೆ:ಅಕ್ಷಯ ಪಾತ್ರ ಪ್ರತಿಷ್ಠಾನದವರು ತಲಾ ಒಂದ ಊಟಕ್ಕೆ ರೂ.4.50ರ ದರದಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಸರಬರಾಜು ಮಾಡುತ್ತಿರುವುದರಿಂದ, ಮೆ:ಮೊಹ್ಸಿನ್ ಷರೀಪ್ ಎದುಕೇಷನಲ್ & ಚಾರಿಟಬಲ್ ಟ್ರಸ್ಟ್ ರವರು ತಿಳಿಸಿರುವ ದರ ರೂ.5.00 ಆಗಿದ್ದು, ತಲಾ ಒಂದು ಊಟಕ್ಕೆ ರೂ.0.50 ಹೆಚ್ಚಳವಾಗುವುದರಿಂದ, ಪಾಲಿಕೆಗೆ ನಷ್ಟವಾಗುವುದರಿಂದ ಮೆ:ಅಕ್ಷಯ ಪಾತ್ರ ಫೌಂಡೇಷನ್ ಸರಬರಾಜು ಆದೇಶ ನೀಡುವುದು ಸೂಕ್ತವಾಗಿರುತ್ತದೆ.

ಪ್ರಸಕ್ತ 2011–12ನೇ ಸಾಲಿನಲ್ಲಿ ವ್ಯಾಸಂಗ ಮಾಡುವ ಅಂದಾಜು 20,000 ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಬಿಸಿಯೂಟ ವ್ಯವಸ್ಥೆ ಮಾಡುವುದರ ಜೊತೆಗೆ ಭಾರತೀಯ ವಿದ್ಯಾಭವನ ಪಬ್ಲಿಕ್ ಸ್ಕೂಲ್ ಶ್ರೀರಾಮಪುರದಲ್ಲಿ ವ್ಯಾಸಂಗ 160 ವಿದ್ಯಾರ್ಥಿಗಳಿಗೂ ಸಹ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಮಾಡಬೇಕಾಗಿರುತ್ತಾದೆ.

ಅದರಂತೆ, ಪ್ರಸಕ್ತ 2011–12ನೇ ಶೈಕ್ಷಣಿಕ ವರ್ಷವು 01.06.2011ರಿಂದ ಪ್ರಾರಂಭವಾಗಲಿರುವುದಿಂದ, ಪಾಲಿಕೆ ಸಭೆಯ ಅನುಮೋದನೆ ಪಡೆಯಲು ಕಾಲಾವಕಾಶ ಬೇಕಾಗಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಾಲಿಕೆಯ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ, ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಒದಗಿಸುವಂತೆ ಮೆ:ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ದಿನಾಂಕ:26.05.2011ರಂದು ಮೆ:ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ಸರಬರಾಜು ಆದೇಶವನ್ನು ನೀಡಲಾಗಿರುತ್ತದೆ.

ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಬಿಸಿಯೂಟದ ವ್ಯವಸ್ಥೆಯನ್ನು ಮಾಡಲು ಮೆ: ಇಸ್ಕಾನ್ ಸಂಸ್ಥೆಯ ಅಕ್ಷಯ ಪಾತ್ರ ಫೌಂಡೇಷನ್‌ಗೆ ಸರಬರಾಜು ಆದೇಶವನ್ನು ನೀಡುವಾಗ ಮೇಲ್ಕಂಡಂತೆ ಎರಡು ಷರತ್ತುಗಳನ್ನು ವಿಧಿಸಿ, ಕೌನ್ಸಿಲ್ ಸಭೆಯ ಅನುಮತಿಯನ್ನು ನಿರೀಕ್ಷಿಸಿ ಸರಬರಾಜು ಆದೇಶ ನೀಡಲಾಗಿದ್ದು, ಅದರಂತೆ, ದಿನಾಂಕ:01.06.2011ರಿಂದ ಇಸ್ಕಾನ್ ಸಂಸ್ಥೆಯವರು ಪಾಲಿಕೆಯ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸುತ್ತಿದ್ದಾರೆ.

ಮುಂದುವರೆದು, ಕಳೆದ ಸಾಲಿನ ಷರತ್ತು ಮತ್ತು ನಿಬಂಧನೆಗಳಂತೆ ಹಾಗೂ ದರದಂತೆ ಪ್ರಸಕ್ತ ಸಾಲಿನಲ್ಲಿಯೂ ಸಹ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಜೊತೆ ಭಾರತೀಯ ವಿದ್ಯಾಭವನ ಮತ್ತು ಬಿ.ಬಿ.ಎಂ.ಪಿ. ಸಹಯೋಗದೊಂದಿಗೆ ನಡೆಸುತ್ತಿರುವ ಪಬ್ಲಿಕ್ ಶಾಲೆಯ 160 ವಿದ್ಯಾರ್ಥಿಗಳಿಗೂ ಸಹ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಒದಗಿಸಲು ಮೆ:ಅಕ್ಷಯ ಪಾತ್ರೆ ಫೌಂಡೇಷನ್ ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ದಿನಾಂಕ:14.06.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

ಅಧ್ಯಕ್ಷರ ಆದೇಶದ ಮೇರೆಗೆ, ಇತರೇ ವಿಷಯಗಳು:

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿರುವ ಆಟದ ಮೈದಾನ, ಶಾಲಾ ಕಟ್ಟಡಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ಅವುಗಳನ್ನು ರದ್ದುಗೊಳಿಸುವ ಕುರಿತು.

***

ನಗರ ಪಾಲಿಕೆಗೆ ಸೇರಿರುವ ಆಟದ ಮೈದಾನಗಳನ್ನು ಹಾಗೂ ಶಾಲಾ ಕಟ್ಟಡಗಳನ್ನು ಖಾಸಗಿ ಸಂಸ್ಥೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ಇದರಿಂದಾಗಿ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಆಟದ ಮೈದಾನದ ಕೊರತೆ ಹಾಗೂ ಶಾಲಾ ಕಟ್ಟಡದ ಕೊರತೆ ಇದ್ದು, ಈಗಾಗಲೇ ಗುತ್ತಿಗೆ ನೀಡಿರುವ ಕೆಲವು ಶಾಲಾ ಕಟ್ಟಡದ ಹಾಗೂ ಆಟದ ಮೈದಾನದ ಗುತ್ತಿಗೆ ಅವಧಿಯು ಮುಗಿದಿದ್ದು, ಇವುಗಳನ್ನು ಗುರ್ತಿಸಿ ನಗರ ಪಾಲಿಕೆ ವಶಕ್ಕೆ ತೆಗೆದುಕೊಳ್ಳಬೇಕಾಗಿದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಮಿತಿಯು ಇನ್ನು ಮುಂದೆ ನಗರ ಪಾಲಿಕೆಗೆ ಸೇರಿದ ಆಟದ ಮೈದಾನಗಳನ್ನು ಶಾಲಾ ಕಟ್ಟಡ ಹಾಗೂ ಕ್ರೀಡಾಂಗಣಗಳನ್ನು ಯಾವುದೇ ಖಾಸಗಿ ಸಂಸ್ಥೆಯವರಿಗೆ ನೀಡಬಾರದೆಂಬುದಾಗಿ ಇವುಗಳನ್ನು ವ್ಯವಸ್ಥಿತ ರೀತಿಯಲ್ಲಿ ನಗರ ಪಾಲಿಕೆಯೇ ನಿರ್ವಹಿಸುವುದೆಂದು ಹಾಗೂ ಆಟದ ಮೈದಾನದ ಅಥವಾ ಶಾಲಾ ಕಟ್ಟಡಕ್ಕೆ ಹೊಂದಿಕೊಂಡಿರುವ ಜಾಗವನ್ನು ಶಾಲಾ ಮಕ್ಕಳ ಶಿಕ್ಷಣದ ಹಿತದೃಷ್ಟಿಯಿಂದ ಇಂತಹ ಜಾಗಗಳನ್ನು ಸಹ ಗುತ್ತಿಗೆ ಆಧಾರದ ಮೇಲೆ ನೀಡಬಾರದೆಂದು ಸಮಿತಿಯು ತೀರ್ಮಾನಿಸಿದ್ದು, ಈ ಬಗ್ಗೆ ನಗರ ಪಾಲಿಕೆ ಸಭೆಯ ಮುಂದೆ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯುವಂತೆ ಮಾನ್ಯ ಆಯುಕ್ತರವರನ್ನು ಕೋರಲು ನಿರ್ಣಯಿಸಲಾಯ್ತು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:13.07.2011ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳಿಗ್ಗೆ 11.00 ಘಂಟೆಗೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀ.ಕೆ.ರವೀಂದ್ರನ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀ.ವಿ.ಕೃಷ್ಣ – ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | |
| ಡಾ: ನಾಜಿನಿ ಬೇಗಂ – ಸದಸ್ಯರು | |
| ಶ್ರೀಮತಿ.ಎಂ.ಶಕೀಲ – ಸದಸ್ಯರು | |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

**ವಿಷಯದ ಸಂಖ್ಯೆ:– ಶಿ.ಸ್ಥಾ.ಸ/05/11–12**

ವಿಷಯ: ಪಾಲಿಕೆಯ ಶಿಶುವಿಹಾರ, ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್‌ಗಳನ್ನು ಸರಬರಾಜು ಮಾಡುವ ಬಗ್ಗೆ.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/178/11–12, ದಿನಾಂಕ:01.07.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 78 ಶಿಶುವಿಹಾರ, 12 ಪ್ರಾಥಮಿಕ ಶಾಲೆಗಳು ಮತ್ತು 33 ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಉತ್ತಮ

ಗುಣಮಟ್ಟದ ಶೂ ಮತ್ತು ಸಾಕ್ಸ್‌ಗಳ ಖರೀದಿಆಗಿ 2011-12ನೇ ಸಾಲಿನ ಆಯವ್ಯಯದಲ್ಲಿ, ಈ ಕೆಳಕಂಡಂತೆ, ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

| ಕ್ರ.ಸ | ಲೆಕ್ಕ ಶೀರ್ಷಿಕೆಯ ಹೆಸರು | ಅಂದಾಜು ಆಯವ್ಯಯ (ಲಕ್ಷಗಳಲ್ಲಿ) |
|---|---|---|
| 1 | ಶಿಶುವಿಹಾರ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಶೂಗಳ ವಿವರಣೆ | 29.21 |
| 2 | ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಶೂ ಗಳ ವಿತರಣೆ | 50.89 |
| 3 | ಶಿಶುವಿಹಾರದಿಂದ ಪ್ರೌಢ ಶಾಲೆಗಳಿಗೆ ಕಾಲುಚೀಲಗಳ ವಿವರಣೆ | 05.99 |
| | **ಒಟ್ಟು** | **86.09** |

ಮೇಲ್ಕಂಡ ಲೆಕ್ಕ ಶೀರ್ಷಿಕೆಗಳ ಒಟ್ಟು ಮೊತ್ತದಲ್ಲಿ ಶೂ ಮತ್ತು ಕಾಲುಚೀಲಗಳನ್ನು ಖರೀದಿಸಲು ದಿನಾಂಕ:20.06.2011ರಂದು ಇ-Procurement Tender ದ್ವಿ-ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:24.03.2011ರಂದು ಕೊನೆಯ ದಿನವಾಗಿದ್ದು, ದಿನಾಂಕ:27.04.2011ರಂದು ಟೆಕ್ನಿಕಲ್ ಬಿಡ ಅನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಮೆ:ಎಕ್ಸೆಲ್ ಸ್ಪೋರ್ಟ್ಸ್, #1, 2, ಮೆಜೆಸ್ಟಿಕ್ ಸರ್ಕಲ್, ಬೆಂಗಳೂರು-01 ರವರು ಮಾತ್ರ ಭಾಗವಹಿಸಿರುತ್ತಾರೆ. ಇವರುಗಳು Technical bidನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಸದರಿಯವರು ಟೆಂಡರ್ ನಿಯಮ ನಿಬಂಧನೆಗಳ ಪ್ರಕಾರ ಎಲ್ಲಾ ದಾಖಲಾತಿ ಪ್ರತಿಗಳನ್ನು ದೃಢೀಕರಿಸಿ ಸಲ್ಲಿಸಿರುವುದು ಕಂಡು ಬಂದಿರುವುದರಿಂದ, ಇವರ ಟೆಕ್ನಿಕಲ್ ಬಿಡ್ ಅನ್ನು ಅಂಗೀಕರಿಸಲಾಗಿರುತ್ತದೆ. ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹತೆ ಹೊಂದಿರುವ ಮೆ:ಎಕ್ಸೆಲ್ ಸ್ಪೋರ್ಟ್ಸ್ ರವರ Finacial bid ಅನ್ನು ದಿನಾಂಕ:27.06.2011ರಂದು ತೆರೆಯಲಾಯಿತು. ಸದರಿಯವರು ಸಲ್ಲಿಸಿರುವ ಮಾದರಿ ಶೂ ಮತ್ತು ಕಾಲುಚೀಲಗಳನ್ನು ಅಪರ ಆಯುಕ್ತರು(ಆಸ್ತಿಗಳು), ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ ಇವರುಗಳ ಸಮ್ಮುಖದಲ್ಲಿ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ:ಎಸ್.ಜಿ.ಎಸ್. ಇಂಡಿಯಾ ಲಿ., ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂಪನಿ, ಬಿ.ಟಿ.ಎಂ. ಲೇಔಟ್, ಬೆಂಗಳೂರು ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು, ಉತ್ತಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

2011-12ನೇ ಸಾಲಿನಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಶೂ ಮತ್ತು ಕಾಲುಚೀಲಗಳನ್ನು, ಮೆ:ಎಕ್ಸೆಲ್ ಸ್ಪೋರ್ಟ್ಸ್ ರವರು ನೀಡಿರುವ ಟೆಂಡರ್‌ನ ಕಡಿಮೆ ದರದಲ್ಲಿ ಖರೀದಿಸಲು, ಖರೀದಿ ವೆಚ್ಚದ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.

| Sl. No. | Particulars | Qnty. | Rates Rs. P. | Total Amount Rs. P. |
|---|---|---|---|---|
| 1 | Nursery Boys (3yrs. To 5yrs.) Black leather shoes with lays | 1,800 | 379.00 | 6,82,200.00 |
| 2 | Nursery Girls (3yrs. To 5yrs.) Black leather shoes with belt | 1,745 | 394.00 | 6,87,530.00 |

| | | | | |
|---|---|---|---|---|
| 3 | *Primary Boys (1st to 4th std) Black leather shoes with lays.* | *600* | *374.00* | *2,24,400.00* |
| 4 | *Primary Girls (1st to 4th std) Black leather shoes with belt* | *550* | *390.00* | *2,14,500.00* |
| 5 | *Primary Boys (5st to 7h std) Black leather shoes with lays* | *460* | *385.00* | *1,77,100.00* |
| 6 | *Primary Girls (5st to 7th std) Black leather shoes with belt* | *460* | *399.00* | *1,83,540.00* |
| 7 | *High School Boys(8th to 10th std) Black leather shoes with lays* | *2,700* | *529.00* | *14,28,300.00* |
| 8 | *High School Girls (8th to 10th std) Black leather shoes with belt* | *4,900* | *570.00* | *27,93,000.00* |
| 9 | *High School Boys(8th to 10th std) white canvas shoes with lays* | *2,700* | *209.00* | *5,64,300.00* |
| 10 | *High School Girls (8th to 10th std) white canvas shoes shoes with lays* | *4,900* | *209.00* | *10,24,100.00* |
| 11 | *Nursery boys & girls black socks* | *3,545* | *25.50* | *90,397.50* |
| 12 | *Primary boys & girls black socks* | *2,070* | *28.50* | *58,995.00* |
| 13 | *High Schools boys & girls black socks* | *7,600* | *28.50* | *2,16,600.00* |
| 14 | *High Schools boys & girls black socks* | *7,600* | *34.50* | *2,62,200.00* |
| | ***Total*** | | | ***86,07,162.50*** |

*(Rupees Eighty Six Lakhs Seven Thousand One Hundred and Sixty Two Fifty Ps. Only)*

*ಮೇಲ್ಕಂಡ ಪ್ರಮಾಣದಷ್ಟು ಶೂ ಮತ್ತು ಸಾಕ್ಸ್‌ಗಳನ್ನು ಟೆಂಡರ್‌ನ ಕಡಿಮೆ ದರಗಳಲ್ಲಿ ಖರೀದಿಸಲು ಒಟ್ಟು ಮೊತ್ತ ರೂ.86,07,162.50ಗಳು ವೆಚ್ಚವಾಗುತ್ತದೆ. ಈ ಮೊತ್ತವನ್ನು 2011–12ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆಗಳಲ್ಲಿ ನಿಗದಿಪಡಿಸಿರುವ ಒಟ್ಟು ಮೊತ್ತ ರೂ.86.09ಲಕ್ಷಗಳಲ್ಲಿ ಮಂಜೂರು ಮಾಡಲು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಮೆ:ಎಕ್ಸೆಲ್ ಸ್ಪೋರ್ಟ್ಸ್ ರವರ ದರಗಳನ್ನು ಅಂಗೀಕಗರಿಸಿ ಸದರಿ ಕಂಪನಿಯವರಿಗೆ ಸರಬರಾಜು ಆದೇಶ ನೀಡುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ದಿನಾಂಕ:01.07.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

*ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು ಚರ್ಚೆಯಲ್ಲಿ ವಿಶೇಷವಾಗಿ ಮಾಗಡಿ ರಸ್ತೆ, ಬಿ.ಬಿ.ಎಂ.ಪಿ. ಪದವಿ ಪೂರ್ವ ಕಾಲೇಜಿನಲ್ಲಿ ಶ್ರೀ.ಸೂರ್ಯಪಲ್ಲಾಗಟ್ಟಿ ಯವರು ಎರಡು ವಾರಗಳ ಕಾಲ 50 ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ– ಪ್ರಾತ್ಯಕ್ಷೀಕ ಶಿಬಿರದ ಕಾರ್ಯ ಕ್ರಮವನ್ನು ನಡೆಸಿಕೊಟ್ಟಿದ್ದು ಕಾಲೇಜಿನ ಅವಧಿಯ ನಂತರ ಮಧ್ಯಾಹ್ನ ಒಂದು ಗಂಟೆಗಳ ಕಾಲ ನಡೆಸಿರುತ್ತಾರೆ. ಈ ಶಿಬಿರಕ್ಕೆ ವಿದ್ಯಾರ್ಥಿಗಳು ಬಹಳ ಉತ್ಸಾಹದಿಂದ ಭಾಗವಹಿಸಿದ್ದು, ಈ ಬಗ್ಗೆ ದಿನಾಂಕ:06.07.2011ರಂದು ಸಮಾರೋಪ ಸಮಾರಂಭ ಕಾರ್ಯಕ್ರಮ ನಡೆಸಲಾಗಿದ್ದು, ಇದರಲ್ಲಿ ಶಿಕ್ಷಣ ಸ್ಥಾಯಿ ಸಮಿತಿಯ ಸದಸ್ಯರೆಲ್ಲರೂ ಭಾಗವಹಿಸಿದ್ದು ಶಿಬಿರದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆಯನ್ನು ಪಡೆಯಲಾಗಿದ್ದು ವಿದ್ಯಾರ್ಥಿಗಳು ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದು, ಈ ಶಿಬಿರವು ಮಾನಸಿಕ ಸ್ಥೈರ್ಯ, ಏಕಾಗ್ರತೆ, ಸಂಯಮ ಪಠ್ಯ ವಸ್ತುವಿನ ಬಗ್ಗೆ*

ಆಸಕ್ತಿ ಮೂಡಿಸುವಂತಹ ಉಪಯುಕ್ತ ಕಾರ್ಯಕ್ರಮ ಇದಾಗಿರುವುದಾಗಿ ಅಭಿಪ್ರಾಯಪಟ್ಟಿದ್ದು, ಕೆಲವು ಒಂದಿಬ್ಬರು ವಿದ್ಯಾರ್ಥಿಗಳು ವ್ಯತಿರಿಕ್ತವಾದ ಅಭಿಪ್ರಾಯ ವ್ಯಕ್ತಪಡಿಸಿದ್ದರು ಸಹ ಒಟ್ಟಾರೆ ಅವರಲ್ಲಿನ ಏಕಾಗ್ರತೆ ಕೊರತೆಯಿಂದಾಗಿ ಕಾರ್ಯಕ್ರಮದ ಉದ್ದೇಶ ಅರ್ಥವಾಗದೆ ಇರಬಹುದು ಎಂಬುದಾಗಿ ಅರ್ಥೈಸಬಹುದಾಗಿದೆ. ಈ ವ್ಯಕ್ತಿತ್ವ ವಿಕಸನ ವಿಶೇಷವಾಗಿ ವಿದ್ಯಾರ್ಥಿಗಳಿಗೆ ಮಾನಸಿಕ ಸ್ಥೈರ್ಯ ತುಂಬುವುದಾಗಿದ್ದು, ಈ ರೀತಿಯ ಶಿಬಿರವನ್ನು ಇತರೇ ಕಾಲೇಜುಗಳಿಗೂ ವಿಸ್ತರಿಸುವುದರಿಂದ, ಉಪಯುಕ್ತವಾಗುವುದರಿಂದ, ಶಿಬಿರವನ್ನು ನಡೆಸಿಕೊಟ್ಟ ಶ್ರೀ.ಸೂರ್ಯಪಲ್ಲಾಗಟ್ಟಿ ರವರಿಗೆ ಸಮಿತಿಯು ಧನ್ಯವಾದಗಳನ್ನು ತಿಳಿಸುತ್ತಾ, ಈ ಬಗ್ಗೆ ಯೋಜನೆಯನ್ನು ತಯಾರಿಸಿ ಸಮಿತಿಗೆ ಸಲ್ಲಿಸಿದ್ದಲ್ಲಿ ಈ ಬಗ್ಗೆ ಪರಿಶೀಲಿಸಬಹುದೆಂಬುದಾಗಿ ಸಮಿತಿ ಅಭಿಪ್ರಾಯಪಟ್ಟಿರುತ್ತದೆ.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:27.07.2011ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳಿಗ್ಗೆ 11.00 ಘಂಟೆಗೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀ.ಕೆ.ರವೀಂದ್ರನ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀ.ವಿ.ಕೃಷ್ಣ – ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | ಪ್ರಾಂಶುಪಾಲರು |
| ಡಾ: ನಾಜಿನಿ ಬೇಗಂ – ಸದಸ್ಯರು | ಮುಖ್ಯೋಪಾಧ್ಯಾಯರು |
| ಶ್ರೀಮತಿ.ಎಂ.ಶಕೀಲ – ಸದಸ್ಯರು | |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |

ಹಿಂದಿನ ಸಭೆಯ ನಡವಳಿಕೆಗಳು ಓದಿ ದಾಖಲು ಮಾಡಲಾಯ್ತು. ಸಭೆಯನ್ನು ಬೆಳಿಗ್ಗೆ 11.00 ಘಂಟೆಗೆ ಕರೆಯಲಾಗಿದ್ದು, ಆದರೆ, ಅಪರಾಹ್ನ 4.30 ಘಂಟೆಗೆ ನಗರ ಆರೋಗ್ಯ ಮತ್ತು ಸಂಶೋಧನೆ ಕೇಂದ್ರ (ಐ.ಪಿ.ಪಿ. ಸೆಂಟರ್, ಮಲ್ಲೇಶ್ವರಂ) ಇಲ್ಲಿ ಪ್ರಿ–ಕೌನ್ಸಿಲ್ ಸಭೆಯನ್ನು ಕರೆಯಲಾಗಿರುವ ಪ್ರಯುಕ್ತ ಮಾನ್ಯ ಸದಸ್ಯರು ಇಡಿ ದಿನ ಇರಲು ಸಾಧ್ಯವಾಗಾದ ಕಾರಣ ಹಾಗೂ ಮಧ್ಯಾಹ್ನ ಶಾಲಾ/ಕಾಲೇಜುಗಳ ಮುಖ್ಯೋಪಾಧ್ಯಾಯರು ಹಾಗೂ ಪ್ರಾಂಶುಪಾಲರುಗಳ ಸಭೆಯನ್ನು ಕರೆಯಲಾದ ಪ್ರಯುಕ್ತ, ಈ ಎರಡೂ ಸಭೆಗಳು ಒಟ್ಟಿಗೆ ಅಂದರೆ ಮಧ್ಯಾಹ್ನ 2.30 ಘಂಟೆಗೆ ಸಭೆ ಸೇರಿದ್ದು, ಈ ಸಭೆಯಲ್ಲಿ ಪ್ರಮುಖವಾಗಿ ಹಿಂದೆ ಕರೆಯಲಾಗಿದ್ದ, ಸಭೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಪ್ರಾಂಶುಪಾಲರುಗಳಿಗೆ ಅನೇಕ ವಿಷಯಗಳ ಬಗ್ಗೆ ಕೆಲವೊಂದು ಸೂಚನೆಗಳನ್ನು ನೀಡಲಾಗಿದ್ದು ಅವುಗಳ ಅನುಷ್ಠಾನದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು ಒಂದಿಬ್ಬರು ಮುಖ್ಯೋಪಾಧ್ಯಾಯರು ಹಾಗೂ ಪ್ರಾಂಶುಪಾಲರುಗಳನ್ನು ಹೊರತುಪಡಿಸಿದರೆ ಉಳಿದವರ ಪ್ರಗತಿ ಆಶಾದಾಯಕವಾಗಿರುವುದಿಲ್ಲ. ಈಗಾಗಲೇ ಅವರುಗಳಿಗೆ ಶಾಲೆಯ ಕುಂದು–ಕೊರತೆ ಬಗ್ಗೆ ಪಟ್ಟಿ ತಯಾರಿಸಿ ಸಲ್ಲಿಸುವಂತೆ, ತಿಳಿಸಿದ್ದರು ಸಹ ಸಲ್ಲಿಸಿರುವುದಿಲ್ಲ. ಇದರಿಂದಾಗಿ ಇವರುಗಳು ಸರಿಯಾದ ಮಾಹಿತಿ ನೀಡಿದ್ದಲ್ಲಿ, ಸಮಸ್ಯೆಗಳನ್ನು ಪರಿಹರಿಸಿ ಸಾಧ್ಯವಾಗುವುದು ಎಂಬುದು ಒಟ್ಟಾರೆ ಅಭಿಪ್ರಾಯವಾಗಿರುತ್ತದೆ.

ಆದ್ದರಿಂದ, ಮುಂದಿನ ಸಭೆ ಆಗಮಿಸುವ ಮುನ್ನ ಮಾಹಿತಿಯೊಂದಿಗೆ ಸಭೆ ಹಾಜರಾಗುವಂತೆ, ಕಟ್ಟುನಿಟ್ಟಿನ ಎಚ್ಚರಿಕೆ ನೀಡಲಾಯ್ತು, ಮಾಹಿತಿ ಇಲ್ಲದೇ ಬಂದಲ್ಲಿ ಸಮಸ್ಯೆ ಪರಿಹಾರವಾಗುವುದಿಲ್ಲ ಇದರಿಂದ ಸಭೆಯನ್ನು ಕರೆದು ಪ್ರಯೋಜನವಾಗುವುದಿಲ್ಲ ಮುಂದುವರೆದ ಚರ್ಚೆಯಲ್ಲಿ ಶಾಲಾ ಮುಖೋಪಾಧ್ಯಾಯರುಗಳು ಹಾಗೂ ಪ್ರಾಂಶುಪಾಲರುಗಳ ತರಗತಿಗಳನ್ನು ತೆಗೆದುಕೊಳ್ಳದಿರುವುದು ಸಮಿತಿಯ ಗಮನಕ್ಕೆ ಬಂದಿದ್ದು ಇದು ನಿಜಕ್ಕೂ ವಿಷಾದನೀಯ.

ಈ ಪೈಕಿ ಒಂದಿಬ್ಬರು ಮಾತ್ರ ತರಗತಿಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿದ್ದು, ಉಳಿದವರಿಗೆ, ಈ ಬಗ್ಗೆ ಪ್ರಶ್ನಿಸಲಾಗಿ ಅವರುಗಳಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಆದ್ದರಿಂದ, ಇನ್ನು ಮುಂದೆ ಕಡ್ಡಾಯವಾಗಿ ತರಗತಿಗಳನ್ನು ತೆಗೆದುಕೊಳ್ಳಬೇಕೆಂಬುದಾಗಿ ಕಟ್ಟು ನಿಟ್ಟಿನ ಆದೇಶವನ್ನು ನೀಡುವಂತೆ ಆಯುಕ್ತರವರನ್ನು ಕೋರಲು ತೀರ್ಮಾನಿಸಲಾಯ್ತು.

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ
ಪಾಠ ಪ್ರವಚನಗಳು ಸಮರ್ಪಕವಾಗಿ ನಡೆಯದೇ ಇರುವ ಕುರಿತು,

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 78 ನರ್ಸರಿ ಶಾಲೆ, 12 ಪ್ರೈಮರಿ ಶಾಲೆ, 33 ಪ್ರೌಢ ಶಾಲೆ ಹಾಗೂ 13 ಪದವಿ ಪೂರ್ವ ಕಾಲೇಜುಗಳನ್ನು ನಡೆಸಲಾಗುತ್ತಿದ್ದು, ವರ್ಷಕ್ಕೆ ಸುಮಾರು 60 ರಿಂದ 70 ಕೋಟಿಯಷ್ಟು ಹಣವನ್ನು ಶಿಕ್ಷಣದ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುತ್ತಿದ್ದು, ಇವುಗಳ ಉಸ್ತುವಾರಿ ನೋಡಿಕೊಳ್ಳಲು, ಶಿಕ್ಷಣಾಧಿಕಾರಿ ಹಾಗೂ 3 ಜನ ಸಹಾಯಕ ಶಿಕ್ಷಣಾಧಿಕಾರಿಗಳಿದ್ದು, ಆದರೂ ಸಹ ಇವರುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ, ಪಾಠ/ಪ್ರವಚನಗಳು ನಿರೀಕ್ಷಿಸಿರುವ ಮಟ್ಟದಲ್ಲಿ ನಡೆಯದೇ ಮಕ್ಕಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ. ಇವರುಗಳಿಗೆ ಶಾಲಾ/ಕಾಲೇಜುಗಳ ಶಿಕ್ಷಕರ, ಮುಖ್ಯೋಪಾಧ್ಯಾಯರುಗಳು, ಕಾಲೇಜುಗಳ ಉಪನ್ಯಾಸಕರುಗಳ ಹಾಗೂ ಪ್ರಾಂಶುಪಾಲರುಗಳ ಮೇಲೆ ಹಾಗೂ ಸಿಬ್ಬಂದಿ ಮೇಲೆ ನಿಯಂತ್ರಣ ಇರುವುದಿಲ್ಲ.

ಇದಲ್ಲದೇ ಕೆಲವು ಶಿಕ್ಷಕರು ಸಮಯಕ್ಕೆ ಸರಿಯಾಗಿ ಶಾಲೆಗಳಿಗೆ ಹಾಜರಾಗುವುದಿಲ್ಲ, ಬಂದರೂ ಸಹ ತರಗತಿಗಳನ್ನು ತೆಗೆದುಕೊಳ್ಳುವುದಿಲ್ಲ. ತರಗತಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಮೊಬೈಲ್ ಫೋನ್‌ಗಳಲ್ಲಿ ಗಂಟೆಗಟ್ಟಲೆ ಮಾತನಾಡುತ್ತಾ, ತರಗತಿಗಳನ್ನು ಮರೆತು ಬಿಡುತ್ತಾರೆ. ಇದರಿಂದಾಗಿ ಮಕ್ಕಳ ಭವಿಷ್ಯ ಹಾಳಾಗುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಬರುವ ಮಕ್ಕಳು ಕಡುಬಡತನದ ಕುಟುಂಗಳಿಂದ ಬಂದವರಾಗಿರುತ್ತಾರೆ. ಈ ವರ್ಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ನಗರ ಪಾಲಿಕೆಯು ಎಲ್ಲಾ ಸೌಲತ್ತುಗಳನ್ನು ನೀಡುತ್ತಿದ್ದರೂ ಸಹ ಯಾವುದೇ ಪ್ರಯೋಜನವಾಗುತ್ತಿಲ್ಲ.

ಆದ್ದರಿಂದ, ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಕ್ಕೆ ತಂದುಕೊಂಡು ಹಾಲಿ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯವರುಗಳನ್ನು ನಂಬಿಕೊಂಡು ಶಾಲೆಗಳನ್ನು ಉತ್ತಮ ರೀತಿಯಲ್ಲಿ ನಡೆಸುವುದು ಅಸಾಧ್ಯವೆಂದು ಕಂಡುಬಂದಿದ್ದು, ಈ ಹಿನ್ನೆಲೆಯಲ್ಲಿ ನಗರ ಪಾಲಿಕೆಯ ಶಾಲೆಗಳನ್ನು ಖಾಸಗಿ ಶಾಲೆಗಳಿಗಿಂತ ಉತ್ತಮ ರೀತಿಯಲ್ಲಿ ನಡೆಸಬಹುದಾಗಿದ್ದು, ಇದನ್ನು ಮನಗಂಡು ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಹಿರಿಯ, ನುರಿತ ಉನ್ನತ ಮಟ್ಟದ ಅಧಿಕಾರಿಯವರುಗಳು ಎರವಲು ಸೇವೆ ಆಧಾರದ ಮೇಲೆ ನಿಯೋಜನೆ ಮಾಡಿಕೊಂಡು ಉತ್ತಮ ಗುಣ ಮಟ್ಟದ ಶಿಕ್ಷಣವನ್ನು ನೀಡಬಹುದೆಂಬುದಾಗಿ ಸಮಿತಿಯು ಒಟ್ಟಾರೆ ಅಭಿಪ್ರಾಯವಾಗಿದ್ದು, ಈ ಹಿನ್ನೆಲೆಯಲ್ಲಿ ಈ ಕೆಳಕಂಡ ದರ್ಜೆಯ ಅಧಿಕಾರಿಗಳ ಸೇವೆಯನ್ನು

ಪಡೆಯುವಂತೆ ತೀರ್ಮಾನಿಸಲಾಯ್ತು 1) ಜಂಟಿ ನಿರ್ದೇಶಕರು ಸಾರ್ವಜನಿಕ ಶಿಕ್ಷಣ (ಜೆ.ಡಿ.ಪಿ.ಐ) 2 ವಲಯಗಳಿಗೆ (2 ಹುದ್ದೆ) ಇಬ್ಬರು 1) ಹಾಲಿ ಶಿಕ್ಷಣಾಧಿಕಾರಿ ರವರನ್ನು ಯಾವುದಾದರು ಒಂದು ವಲಯದಲ್ಲಿ ಮುಂದುವರಿಸಬಹುದಾಗಿದ್ದು ಹಾಗೂ ನಿರ್ದೇಶಕರು ಸಾರ್ವಜನಿಕ ಶಿಕ್ಷಣ (Director of Public Instruction) ಒಂದು ಹುದ್ದೆ ಒಟ್ಟು 3 ಅಧಿಕಾರಿಗಳನ್ನು ಎರವಲು ಸೇವೆ ಆಧಾರದ ಮೇಲೆ ನಿಯೋಜಿಸಿ ಕ್ರಮ ತೆಗೆದುಕೊಳ್ಳಲು ಮಾನ್ಯ ಆಯುಕ್ತರವರನ್ನು ಕೋರಲಾಗಿದೆ. ಶಿಕ್ಷಣ ಇಲಾಖೆ ಕಾರ್ಯ ಚಟುವಟಿಗಳ ಅಧಿಕಾರಿ ವರ್ಗ ಈ ರೀತಿ ಇರುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಹ ವಿನಂತಿಸಲಾಗಿದೆ.




ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:22.08.2011ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳಿಗ್ಗೆ 11.00 ಘಂಟೆಗೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀ.ಕೆ.ರವೀಂದ್ರನ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀ.ವಿ.ಕೃಷ್ಣ – ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | |
| ಡಾ: ನಾಜಿನಿ ಬೇಗಂ – ಸದಸ್ಯರು | |
| ಶ್ರೀಮತಿ.ಎಂ.ಶಕೀಲ – ಸದಸ್ಯರು | |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

**ವಿಷಯದ ಸಂಖ್ಯೆ:– ಶಿ.ಸ್ಥಾ.ಸ/06/11–12**

ವಿಷಯ: ಬೃಹತ್ ಬೆಂಗಳೂರು ನಗರ ಪಾಲಿಕೆಯ ಶಾಲೆಗಳು ಮತ್ತು ಕಾಲೇಜುಗಲ್ಲಿ ವ್ಯಾಸಂಗ ಮಾಡುವ ಎಸ್.ಎಸ್.ಎಲ್.ಸಿ., ಪ್ರಥಮ ಮತ್ತು ದ್ವಿತೀಯ .ಯು.ಸಿ. ವಿದ್ಯಾರ್ಥಿಗಳಿಗೆ ಮಲ್ಟಿ ಮೀಡಿಯಾ ಆಧಾರಿತ ಶಿಕ್ಷಣವನ್ನು ನೀಡುವ ಕುರಿತು. .

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/118/11–12, ದಿನಾಂಕ:08.08.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 33 ಪ್ರೌಢ ಶಾಲೆಗಳು ಹಾಗೂ 13 ಸಂಯುಕ್ತ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಎಸ್.ಎಸ್.ಎಲ್.ಸಿ., ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಮೆ: ಕಿಯೋನಿಕ್ಸ್ ಸಂಸ್ಥೆ ರವರು ಮಲ್ಟಿ ಮೀಡಿಯಾ

ಆಧಾರಿತ ಶಿಕ್ಷಣವನ್ನು ಐದು ವರ್ಷಗಳವರೆಗೆ ನೀಡಲು ಪ್ರಥಮ ವರ್ಷದ ಅನುಷ್ಠಾನ ಮತ್ತು ನಿರ್ವಹಣಾ ವೆಚ್ಚವು ರೂ.4,91,23,436/-ಗಳು ಆಗುವುದಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪಾಲಿಕೆಯ ಎಸ್.ಎಸ್.ಎಲ್.ಸಿ., ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಮಲ್ಟಿ ಮೀಡಿಯಾ ಆಧಾರಿತ ಶಿಕ್ಷಣವು ಉಪಯುಕ್ತವಾಗಿದ್ದು, ಸದರಿ ಕಾರ್ಯಕ್ರಮಕ್ಕೆ ವಿನಿಯೋಗಿಸಲು ಶಿಕ್ಷಣ ಇಲಾಖೆಯ ಆಯವ್ಯಯದಲ್ಲಿ ಅನುದಾನವನ್ನು ನಿಗದಿಪಡಿಸಿಲ್ಲದಿದ್ದರಿಂದ, ಸದರಿ ಕಾರ್ಯಕ್ರಮದ ಪ್ರಥಮ ವರ್ಷದ ಅನುಷ್ಠಾನ ಮತ್ತು ನಿರ್ವಹಣಾ ವೆಚ್ಚವಾದ ರೂ.4,91,23,436/-ಗಳನ್ನು ಸಾಮಾನ್ಯ ಆಡಳಿತದಲ್ಲಿ ಭರಿಸಿ ಮೆ:ಕಿಯೋನಿಕ್ಸ್ ಸಂಸ್ಥೆಯವರೊಂದಿಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಅದರಂತೆ, ದಿನಾಂಕ:22.02.2011ರಂದು ಸದರಿ ಪ್ರಸ್ತಾವನೆಯನ್ನು ಶಿಕ್ಷಣ ಸ್ಥಾಯಿ ಸಮಿತಿಯು ಅನುಮೋದಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಕಳುಹಿಸಿದ್ದರ ಹಿನ್ನೆಲೆಯಲ್ಲಿ ದಿನಾಂಕ:14.03.2011ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯಲ್ಲಿ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯವನ್ನು ಅನುಮೋದಿಸಿ ಪಾಲಿಕೆಯ ನಿರ್ಣಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ದಿನಾಂಕ:19.03.2011ರಂದು ಮಲ್ಟಿ ಮೀಡಿಯಾ ಆಧಾರಿತ ಶಿಕ್ಷಣ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ:ಕಿಯೋನಿಕ್ಸ್ ಸಂಸ್ಥೆಯು ತಮ್ಮ ಜವಾಬ್ದಾರಿಯ ಮೇಲೆ ಪೂರ್ವಭಾವಿ ಸಿದ್ಧತೆಯನ್ನು ಮಾಡಿಕೊಳ್ಳಲು ಸಂಕಲ್ಪನಾ ಪತ್ರ (ಐಜಾಣಜಾ ಔಜ ಖಟಿಣಜಟಿಜ)ನ್ನು ನೀಡಲಾಗಿರುತ್ತದೆ.

ಶಿಕ್ಷಣ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಗಳನ್ನು, ದಿನಾಂಕ:29.03.2011ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಅಧಿಕ ವಿಷಯದ ಸಂಖ್ಯೆ:1(285)ರನ್ವಯ ಸರ್ವಾನುಮತದಿಂದ ಅಂಗೀಕರಿಸಲಾಗಿರುತ್ತದೆ.

ನಂತರ, ಮಲ್ಟಿ ಮೀಡಿಯಾ ಆಧಾರಿತ ಶಿಕ್ಷಣದ ಒಂದು ವರ್ಷದ ಅಂದಾಜು ವೆಚ್ಚ ರೂ.4,91,23,436/-ಗಳು ಎಂಬುದರ ಬದಲಿಗೆ ಐದು ವರ್ಷಗಳ ಅಂದಾಜು ವೆಚ್ಚ ರೂ.4,91,23,436/-ಗಳು ಎಂದು ತಿದ್ದುಪಡಿ ಮಾಡಿ ಟಿಪ್ಪಣಿಯನ್ನು ಮಂಡಿಸಲಾಗಿ, ಸದರಿ ತಿದ್ದುಪಡಿ ಟಿಪ್ಪಣಿಯು ದಿನಾಂಕ:31.03.2011ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:297/10-11ರಲ್ಲಿ ಸರ್ವಾನುಮತದಿಂದ ಅಂಗೀಕಾರವಾಗಿರುತ್ತದೆ.

ಮುಂದುವರೆದಂತೆ, ಮೆ:ಕಿಯೋನಿಕ್ಸ್ ಸಂಸ್ಥೆಯು ದಿನಾಂಕ:13.05.2011ರಂದು ಮತ್ತು ದಿನಾಂಕ:29.07.2011ರಂದು ಮನವಿಗಳನ್ನು ಸಲ್ಲಿಸಿ, ಎರಡನೇ ವರ್ಷದಿಂದ ಪ್ರತಿ ಶೈಕ್ಷಣಿಕ ವರ್ಷಗಳಲ್ಲಿ ಸದರಿ ಕಾರ್ಯಕ್ರಮದ ಮುಂದುವರಿಕೆ ಕಾರ್ಯಾಚರಣೆ (Operation Charges) ಮತ್ತು ನಿರ್ವಹಣಾ ವೆಚ್ಚ (Maintenance Cost) ರೂ.75.00 ಲಕ್ಷಗಳನ್ನು (ಈ ವೆಚ್ಚವು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಬೆಲೆ ಪರಿವಿಡಿಯ ಆಧಾರದ ಮೇಲೆ ಶೇ.5 ರಿಂದ 10ರಷ್ಟು ವ್ಯತ್ಯಾಸವಾಗಬಹುದು) ಪಾಲಿಕೆಯ ಭರಿಸಬೇಕಾಗಿ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಮೆ: ಕಿಯೋನಿಕ್ಸ್ ಸಂಸ್ಥೆಯು ಸದರಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಯಂತ್ರ, ಸಲಕರಣೆ ಮತ್ತು ಪರಿಕರಗಳ ಅನುಷ್ಠಾನಿಸುವ ವೆಚ್ಚ ಮತ್ತು ಪ್ರಥಮ ವರ್ಷದ ನಿರ್ವಹಣಾ ವೆಚ್ಚವು ಸೇರಿದಂತೆ ಒಟ್ಟು ವೆಚ್ಚ ರೂ.4,91,23,436/-ಗಳು ಆಗುವುದರ ಜೊತೆಗೆ 2ನೇ ವರ್ಷದಿಂದ ಕಾರ್ಯಾಚರಣೆ (Operation Charges) ಮತ್ತು ನಿರ್ವಹಣಾ ವೆಚ್ಚವಾಗಿ

*(Maintenance Cost) ರೂ.75.00 ಲಕ್ಷಗಳನ್ನು (ಈ ವೆಚ್ಚವು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಬೆಲೆ ಪರಿವಿಡಿಯ ಆಧಾರದ ಮೇಲೆ ಶೇ.5 ರಿಂದ 10 ರಷ್ಟು ವ್ಯತ್ಯಾಸವಾಗಬಹುದು) ಪ್ರತಿ ಶೈಕ್ಷಣಿಕ ವರ್ಷಕ್ಕೂ ಈ ಮೊತ್ತವನ್ನು ಪಾಲಿಕೆಯು ಭರಿಸಬೇಕೆಂದು ಕೋರಿರುತ್ತಾರೆ.*

*ಮೇಲ್ಕಂಡ ಅಂಶಗಳ ಆಧಾರದ ಮೇಲೆ ಸದರಿ ಪ್ರಸ್ತಾವನೆಯ ಅನುಮೋದನೆಗಾಗಿ, ಶಿಕ್ಷಣ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ದಿನಾಂಕ:08.08.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

***<u>ವಿಷಯದ ಸಂಖ್ಯೆ:- ಶಿ.ಸ್ಥಾ.ಸ/12/11-12</u>***

*ವಿಷಯ: ಮಹಾನಗರ ಪಾಲಿಕೆಯ ಶಾಲೆ/ಕಾಲೇಜುಗಳಲ್ಲಿನ ಗ್ರಂಥಾಲಯಗಳಿಗೆ "ಕೈಲಾಸ ಮಾನಸ ಸರೋವರದ ಮಡಿಲಲ್ಲಿ" ಎಂಬ ಪುಸ್ತಕವನ್ನು ಖರೀದಿಸುವ ಬಗ್ಗೆ.*

***

*ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/45/11-12, ದಿನಾಂಕ:16.08.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಶ್ರೀ ಕಲ್ಲಹಳ್ಳಿ ಕೆಂಪೇಗೌಡ, ಸಿಂಧೂ ಪ್ರಕಾಶನ ರವರು **"ಕೈಲಾಸ ಮಾನಸ ಸರೋವರ ಮಡಿಲಲ್ಲಿ"** ಎಂಬ ಪುಸ್ತಕವನ್ನು ಬರೆದಿದ್ದು, ಸದರಿ ಪುಸ್ತಕಗಳನ್ನು ಪಾಲಿಕೆಯ ಶಾಲಾ/ಕಾಲೇಜುಗಳ ಗ್ರಂಥಾಲಯಗಳಿಗೆ ಖರೀದಿಸಬೇಕೆಂದು ಮನವಿಯನ್ನು ಸಲ್ಲಿಸಿದ್ದು, ಉಲ್ಲೇಖದ ರೀತ್ಯ ಉಪ ಮಹಾಪೌರರು ಸದರಿ ಪುಸ್ತಕಗಳನ್ನು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಖರೀದಿಸಿ ವಿದ್ಯಾರ್ಥಿಗಳಿಗೆ ಒದಗಿಸುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮತೆಗೆದುಕೊಳ್ಳಲು ಸೂಚಿಸಿರುತ್ತಾರೆ.*

*ಸದರಿ ಪುಸ್ತಕವು ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸಂಸ್ಕೃತಿ ಮತ್ತು ಸಾಹಿತ್ಯದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಉತ್ತಮ ಕೃತಿಯಾಗಿರುತ್ತದೆ. ತಲಾ ಒಂದು ಪುಸ್ತಕಕ್ಕೆ ರೂ.150/-ಗಳ ಮುಖಬೆಲೆ ಇದ್ದು, ಪಾಲಿಕೆಯ ಶಾಲಾ/ಕಾಲೇಜುಗಳಿಗೆ 300 ಪುಸ್ತಕಗಳನ್ನು ಖರೀದಿಸಲು ರೂ.45,000/-ಗಳು ವೆಚ್ಚವಾಗಲಿದೆ. ಸದರಿ ಪುಸ್ತಕವನ್ನು ಖರೀದಿಸಲು ಪಾಲಿಕೆಯ ಶಿಕ್ಷಣ ಇಲಾಖೆಯಲ್ಲಿ ಯಾವುದೇ ಆಯ-ವ್ಯಯ ನಿಗದಿಪಡಿಸದಿರುವ ಕಾರಣ, ಜಿ.ಎ.ಡಿ. ಶೀರ್ಷಿಕೆಯಡಿಯಲ್ಲಿ ಉಪ ಮಹಾಪೌರರು ನೀಡಿರುವ ಟಿಪ್ಪಣಿಯಾನ್ವಯ ಪುಸ್ತಕ ಖರೀದಿ ಮಾಡಬಹುದಾಗಿರುತ್ತದೆ.*

*ತತ್ಸಂಬಂಧವಾಗಿ, 2011-12ನೇ ಸಾಲಿನ ಆಯ-ವ್ಯಯದ ಲೆಕ್ಕ ಶೀರ್ಷಿಕೆ ಜೆ.ಎ.ಡಿ.ಯಲ್ಲಿ ಶ್ರೀ.ಕಲ್ಲಹಳ್ಳಿ ಕೆಂಪೇಗೌಡ, ಸಿಂಧೂ ಪ್ರಕಾಶನ ಬರೆದಿರುವ **"ಕೈಲಾಸ ಮಾನಸ ಸರೋವರದ ಮಡಿಲಲ್ಲಿ"** ಎಂಬ 300 ಪುಸ್ತಕಗಳನ್ನು ತಲಾ ರೂ.150/-ಗಳಂತೆ ಖರೀದಿಸಲು ತಗಲುವ ವೆಚ್ಚ ರೂ.45,000/-ಗಳನ್ನು ಮಂಜೂರು ಮಾಡುವ ಸಂಬಂಧ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: ದಿನಾಂಕ:16.08.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

*ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.*

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:14.09.2011ರಂದು ಬೆಳಿಗ್ಗೆ 11.00 ಘಂಟೆಗೆ ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಅಪರ ಆಯುಕ್ತರು(ಕಲ್ಯಾಣ ಮತ್ತು ಆಸ್ತಿಗಳು) |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿಗಳು |
| ಶ್ರೀ.ಕೆ.ರವೀಂದ್ರನ್ – ಸದಸ್ಯರು | ಎಲ್ಲಾ ಕಾರ್ಯಪಾಲಕ ಅಭಿಯಂತರರು(ಪ್ರಾಜೆಕ್ಟ್) |
| ಶ್ರೀ.ವಿ.ಕೃಷ್ಣ – ಸದಸ್ಯರು | ಕಾರ್ಯಪಾಲಕ ಅಭಿಯಂತರರು(ಪ) |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | ಸ.ಕಾ.ನಿ.ಅ |
| ಡಾ: ನಾಜಿನಿ ಬೇಗಂ – ಸದಸ್ಯರು | ತಾಂತ್ರಿಕ ಸಹಾಯಕರು ಇ.ಸಿ(ಕೇಂದ್ರ) |
| ಶ್ರೀಮತಿ.ಎಂ.ಶಕೀಲ – ಸದಸ್ಯರು | ಸ.ಕಾ.ನಿ.ಅ(ಯಲಹಂಕ) |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | ವಿಷಯ ನಿರ್ವಾಹಕರು |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಎಲ್ಲಾ ಕಾರ್ಯಪಾಲಕ ಅಭಿಯಂತರರು(ಪ್ರಾಜೆಕ್ಟ್) ಹಾಗೂ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ಮಾನ್ಯ ಅಪರ ಆಯುಕ್ತರು(ಅಭಿವೃದ್ಧಿ)ರವರುಗಳನ್ನು ಅಧ್ಯಕ್ಷರು ಸ್ವಾಗತಿಸುತ್ತಾ, ಈ ದಿನದ ಸಭೆಯನ್ನು ವಿಶೇಷವಾಗಿ ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳಲ್ಲಿರುವ ಆಟದ ಮೈದಾನಗಳನ್ನು ಗುರ್ತಿಸುವ ಸಲುವಾಗಿ ಕರೆಯಲಾಗಿದ್ದು, ಈಗಾಗಲೇ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ:ಹೆಚ್.ಡಿ/159/ಎಸ್.ಎಸ್.ಟಿ/2011, ಬೆಂಗಳೂರು ದಿನಾಂಕ:28.03.2011ರ ಪ್ರಕಾರ 149 ಆಟದ ಮೈದಾನಗಳನ್ನು ಗುರ್ತಿಸಿದ್ದು, ಇವುಗಳ ಪೈಕಿ ಈಗಾಗಲೇ ಅಪರ/ಜಂಟಿ ಆಯುಕ್ತರು(ಪೂರ್ವ/ಪಶ್ಚಿಮ ಹಾಗೂ ದಕ್ಷಿಣ) ವಲಯ ವ್ಯಾಪ್ತಿಯಲ್ಲಿ ಬರುವ ಆಟದ

ಮೈದಾನಗಳನ್ನು ಅಭಿವೃದ್ಧಿಪಡಿಸಿದ್ದು ಹೊರ ವಲಯದಲ್ಲಿ ಗುರ್ತಿಸಲಾಗಿರುವ ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂಬ ಅಂಶ ಸಮಿತಿಯ ಗಮನಕ್ಕೆ ಬಂದಿರುತ್ತದೆ.

ಸಭೆಯಲ್ಲಿ ಹಾಜರಿದ್ದ ಕಾರ್ಯಪಾಲಕ ಅಭಿಯಂತರರು(ಪ್ರಾಜೆಕ್ಟ್)ರವರುಗಳು ಅಭಿವೃದ್ಧಿಪಡಿಸುವ ಕಾಮಗಾರಿ ತಮ್ಮ ವ್ಯಾಪ್ತಿಗೆ ಬರುವುದಾಗಿ, ಆದರೆ, ಅವುಗಳ ನಿರ್ವಹಣೆಗೆ ಸಂಬಂಧಪಟ್ಟ ಆಯಾ ವಲಯಗಳ ಕಾರ್ಯಪಾಲಕ ಅಭಿಯಂತರರುಗಳಿಗೆ ಸೇರಿದ್ದಾಗಿರುತ್ತದೆ. ಅದರಲ್ಲೂ ರೂ.1/- ಕೋಟಿಗೆ ಮೀರದ ಬೃಹತ್ ಕಾಮಗಾರಿಗಳು ಮಾತ್ರ ನಾವುಗಳು ಮಾಡುತ್ತೇವೆ,

ಅಭಿವೃದ್ಧಿಪಡಿಸಿ ಅವುಗಳನ್ನು ಸಂಬಂಧಪಟ್ಟ ವಲಯ ಅಭಿಯಂತರರುಗಳಿಗೆ ಹಸ್ತಾಂತರಿಸುತ್ತೇವೆ, ನಂತರ ಅವುಗಳ ನಿರ್ವಹಣೆ ಕಾರ್ಯ ಅವರಿಗೆ ಸಂಬಂಧಿಸಿರುತ್ತದೆ ಎಂಬುದಾಗಿ ತಿಳಿಸುತ್ತಾರೆ. ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳಿಗೆ ದಿನಾಂಕ:28.03.2011ರ ಕರ್ನಾಟಕ ರಾಜ್ಯ ಪತ್ರದ ಪ್ರತಿಯನ್ನು ನೀಡಲಾಗಿದೆ.

ಆದ್ದರಿಂದ, ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು, ಈ ಕೂಡಲೆ ತಮ್ಮ ವ್ಯಾಪ್ತಿಯಲ್ಲಿ ಬರುವ ಆಟದ ಮೈದಾನಗಳನ್ನು ಗುರ್ತಿಸಿ, ಅಗತ್ಯವಿರುವ ಕಾಮಗಾರಿಯ ಪಟ್ಟಿಯನ್ನು ತಯಾರಿಸಿ ಅಂದಾಜು ಪಟ್ಟಿಯನ್ನು ಸಹ ತಯಾರಿಸಿ, ಟೆಂಡರ್ ಕರೆಯಲು ಅನುಮೋದನೆಗಾಗಿ ಸಮಿತಿಯ ಮುಂದೆ ಅಕ್ಟೋಬರ್ 15ರೊಳಗಾಗಿ ತಪ್ಪದೇ ಮಂಡಿಸುವುದು, ಬೇರೆ ಕಾಮಗಾರಿಗಳಿಗಿಂತ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಬೇಕು, ಇದರಲ್ಲಿ ಯಾವುದೇ ರಾಜಿಗೆ ಅವಕಾಶವಿರುದಿಲ್ಲ ಮುಂದುವರಿದಂತೆ, ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ, ಆಟದ ಮೈದಾನ ಅಭಿವೃದ್ಧಿ, ಶಾಲಾ ಕಟ್ಟಡ ನಿರ್ಮಾಣ ಒಳಾಂಗಣ ಹಾಗೂ ಹೊರಾಂಗಣ ಇವುಗಳ ಅಭಿವೃದ್ಧಿ ಹಾಗೂ ದುರಸ್ತಿಗೆ ಸಂಬಂಧಿಸಿದ ಕಾಮಗಾರಿ ಕಡತಗಳನ್ನು ಶಿಕ್ಷಣ ಸಮಿತಿ ಅನುಮೋದನೆಗೆ ಮಂಡಿಸದೇ, ಇತರೇ ಸಮಿತಿಯ ಅನುಮೋದನೆಗಾಗಿ ಕಳುಹಿಸುತ್ತಿರುವುದು ಸಮಿತಿ ಗಮನಕ್ಕೆ ಬಂದಿದ್ದು, ಇನ್ನು ಮುಂದೆ ಮೇಲ್ಕಂಡ ವಿಷಯಕ್ಕೆ ಕಾಮಗಾರಿಗೆ ಸಂಬಂಧಪಟ್ಟ ಕಡತಗಳನ್ನು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಚರ್ಚಿಸಿ ಅನುಮೋದನೆ ಪಡೆದ ನಂತರವೇ ಸಂಬಂಧಪಟ್ಟ ಸ್ಥಾಯಿ ಸಮಿತಿಗೆ ಮಂಡಿಸುವುದು ಕಡ್ಡಾಯವಾಗಿರುತ್ತದೆ.

ಈಗಾಗಲೇ ವಾರ್ಡ್‌ಗಳಿಗೆ ನೀಡುವ ಅನುದಾನದಲ್ಲಿ ಶೇ.10ರಷ್ಟು ಅನುದಾನವನ್ನು ಶಿಕ್ಷಣದ ಅಭಿವೃದ್ಧಿಗೆ ವಿನಿಯೋಗಿಸಲು ನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾಗಿದ್ದು, ಇದರ ಸದುಪಯೋಗ ಪಡೆಯಬೇಕಾಗಿದ್ದು ಕಾರ್ಯಪಾಲಕ ಅಭಿಯಂತರರು, ಅಪರ/ಜಂಟಿ ಆಯುಕ್ತರು(ಪೂರ್ವ/ಪಶ್ಚಿಮ ಮತ್ತು ದಕ್ಷಿಣ) ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲಾ/ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳಿಗೆ ಈ ಅನುದಾನವನ್ನು ಬಳಸಿಕೊಳ್ಳಲು ಅಗತ್ಯ ಕ್ರಮತೆಗೆದುಕೊಳ್ಳುವುದು ಹಾಗೂ ಈ ಬಗ್ಗೆ ಶಾಲಾ/ಕಾಲೇಜುಗಳ ಪರಿಶೀಲನೆ ಮಾಡಿ ಅಗತ್ಯವಿರುವ ಸೌಲಭ್ಯಗಳ ಪಟ್ಟಿ ತಯಾರಿಸಿ, ಈ ನಿಟ್ಟಿನಲ್ಲಿ ಈ ಕೂಡಲೇ ಕ್ರಮತೆಗೆದುಕೊಳ್ಳುವುದು ಶಿಕ್ಷಣ ಇಲಾಖೆಯ ಅಧಿಕಾರಿಯವರುಗಳು ಅಗತ್ಯವಿರುವ ಸೌಲಭ್ಯಗಳ ಪಟ್ಟಿ ತಯಾರಿಸಿದ್ದು, ಇದರ ಪ್ರತಿಯನ್ನು ಸಂಬಂಧಪಟ್ಟವರಿಗೆ ಕಳುಹಿಸಲಾಗಿದೆ.

ವಿಷಯ: ಹೊಸದಾಗಿ ರಚಿಸಲಾಗಿರುವ ಶಾಲಾಭಿವೃದ್ಧಿ ಸಮಿತಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಈ ಬಗ್ಗೆ ಸಮಿತಿಯಲ್ಲಿ ಸುಧೀರ್ಘವಾಗಿ ಚರ್ಚೆ ನಡೆದಿದ್ದು, ಶಾಲಾ/ಕಾಲೇಜುಗಳಲ್ಲಿ ಸಣ್ಣ ಪುಟ್ಟ ಕೆಲಸ ಕಾರ್ಯಗಳಿಗೆ(ಕೊಳಾಯಿ ರಿಪೇರಿ, ನೀರಿನ

ಪೈಪು ಹೊಡೆದು ಹೋಗಿದ್ದಲ್ಲಿ ಅದರ ರಿಪೇರಿ, ಶೌಚಾಲಯ ದುರಸ್ತಿ ನೀರಿನ ತೊಂದರೆ, ನೈರ್ಮಲ್ಯದ ಸ್ವಚ್ಚತೆ ಇತ್ಯಾದಿ) ಸಂಬಂಧಪಟ್ಟ ಅಭಿಯಂತರರನ್ನು ಆಶ್ರಯಿಸಬೇಕಾಗಿದ್ದು, ಸಕಾಲದಲ್ಲಿ ಆಗದೇ, ಇದರಿಂದ ಮಕ್ಕಳಿಗೆ ತೊಂದರೆಯಾಗುತ್ತಿದ್ದು ಶಾಲಾ/ಕಾಲೇಜುಗಳ ಉಸ್ತುವಾರಿಗೆ ಅಭಿವೃದ್ಧಿ ಹಾಗೂ ನಿರ್ವಹಣೆ ಹಾಗೂ ಇತರೇ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಮಾನ್ಯ ಪಾಲಿಕೆಯ ಸದಸ್ಯರ ಅಧ್ಯಕ್ಷತೆಯಲ್ಲಿ, ಶಾಲಾಭಿವೃದ್ಧಿ ಸಮಿತಿ ರಚಿಸಲಾಗಿದ್ದು, ಈಗಾಗಲೇ ಈ ಅಭಿವೃದ್ಧಿ ಸಮಿತಿಗಳ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಇದರಿಂದಾಗಿ ಸ್ವಲ್ಪ ಮಟ್ಟಿನ ಸುಧಾರಣೆಯಾಗಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಸಹಕಾರಿಯಾಗುವುದು, ಆದ್ದರಿಂದ, ಈ ಸಮಿತಿಗಳು ಸುಸೂತ್ರವಾಗಿ ನಡೆದು ಹೋಗಲು ಹಾಗೂ ಸಣ್ಣ ಪುಟ್ಟ ತೊಂದರೆಗಳ ನಿವಾರಣೆಗೆ ಹಣದ ಅವಶ್ಯಕತೆ ಇರುವುದು ಸಮಿತಿಯ ಗಮನಕ್ಕೆ ಬಂದಿದ್ದು ಅದಕ್ಕಾಗಿ, ನರ್ಸರಿ ಹಾಗೂ ಪ್ರಾಥಮಿಕ ಶಾಲೆ ಇರುವ ಕಡೆ ಬರುವ ಶಾಲಾಭಿವೃದ್ಧಿ ಸಮಿತಿಗೆ ವಾರ್ಷಿಕ ರೂ.25,000/-ಗಳನ್ನು ಪ್ರೌಢ ಶಾಲೆ/ಪದವಿ ಪೂರ್ವ ಕಾಲೇಜು ಬರುವ ಸಮಿತಿಗಳಿಗೆ ವಾರ್ಷಿಕ ರೂ.50,000/-ಗಳ ಅನುದಾನವನ್ನು ಬಿಡುಗಡೆ ಮಾಡಲು ಮಾನ್ಯ ಆಯುಕ್ತರವರನ್ನು ಕೋರಲು ತೀರ್ಮಾನಿಸಲಾಯ್ತು. ಈ ಬಗ್ಗೆ ವೆಚ್ಚಗಳ ಲೆಕ್ಕವನ್ನು ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು ನೋಡಿಕೊಳ್ಳುವರು.

ವಿಷಯ: ಶಿಕ್ಷಣ ಸ್ಥಾಯಿ ಸಮಿತಿ, ಅಧ್ಯಕ್ಷರು ಹಾಗೂ ಸದಸ್ಯರುಗಳ 10 ದಿನಗಳ ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಕುರಿತು.

***

ಇತರೇ ಮಹಾನಗರಗಳಲ್ಲಿನ ಶೈಕ್ಷಣಿಕ ಗುಣಮಟ್ಟ ಅಧ್ಯಯನ ಮಾಡಿ ಅದನ್ನು ಬಿ.ಬಿ.ಎಂ.ಪಿ. ಶಾಲಾ/ಕಾಲೇಜುಗಳಲ್ಲಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ, 10 ದಿನಗಳ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಲು ತೀರ್ಮಾನಿಸಲಾಗಿದ್ದು, ಅದರಂತೆ, ಮುಂಬೈ, ಅಹಮದಾಬಾದ, ಸೂರತ್, ಚಂಡಿಘಡ್, ಜೈಪುರ್ ಹಾಗೂ ದೆಹಲಿನಗರಗಳಿಗೆ ಭೇಟಿ ನೀಡುವುದೆಂದು, ಇದರಲ್ಲಿ ಅಧ್ಯಕ್ಷರು, ಸಮಿತಿ ಸದಸ್ಯರು 10, ಅಧಿಕ ಕೌನ್ಸಿಲ್ ಕಾರ್ಯದರ್ಶಿ, ಶಿಕ್ಷಣಾಧಿಕಾರಿ, ಸಾರ್ವಜನಿಕ ಸಂಪರ್ಕಾಧಿಕಾರಿ, ಸಮಿತಿಯ ಆಪ್ತ ಸಹಾಯಕರು ಸೇರಿದಂತೆ ಒಟ್ಟು 15 ಮಂದಿ ವಿಮಾನದಲ್ಲಿ ಪ್ರಯಾಣಿಸುವುದೆಂದು, ಇದಕ್ಕೆ ಸಂಬಂಧಪಟ್ಟಂತೆ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಹಾಗೂ ಮಹಾನಗರ ಪಾಲಿಕೆಯ ಅನುಮೋದನೆ ಪಡೆಯಲು ಟಿಪ್ಪಣಿಯನ್ನು ಮಂಡಿಸುವಂತೆ ಶಿಕ್ಷಣಾಧಿಕಾರಿಯವರಿಗೆ ಸೂಕ್ತ ಆದೇಶ ನೀಡಲು ಮಾನ್ಯ ಆಯುಕ್ತರವರನ್ನು ಕೋರಲಾಗಿದೆ.

ವಿಷಯ: ಪ್ರಶ್ನೆ ಪತ್ರಿಕೆ ತಯಾರಿಸಲು ಕೋರ್ ಕಮಿಟಿ ರಚಿಸುವ ಕುರಿತು.

***

ಹಾಲಿ ಸಂಭವನೀಯ ಪ್ರಶ್ನೆ ಪತ್ರಿಕೆಗಳನ್ನು ಆಯಾ ಶಾಲಾ/ಕಾಲೇಜುಗಳಲ್ಲಿ ಪ್ರತ್ಯೇಕವಾಗಿ ತಯಾರಿಸಿ, ಪ್ರಿಪ್ರೇಟರಿ ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಇದಕ್ಕಾಗಿ ಒಂದು ಕೋರ್ ಕಮಿಟಿ ಇರುವುದಾಗಿ ಸಭೆಯಲ್ಲಿ ಹಾಜರಿದ್ದ ಶಿಕ್ಷಣಾಧಿಕಾರಿಯವರು ತಿಳಿಸಿದ್ದು, ಈ ರೀತಿ ಮಾಡುವುದರಿಂದ, ವಿದ್ಯಾರ್ಥಿಗಳಿಗೆ ಗೊಂದಲಕ್ಕೆ ಕಾರಣವಾಗುವುದಲ್ಲದೇ, ಪರೀಕ್ಷೆಗೆ ತಯಾರಿ ನಡೆಸಲು ಸಹ ತೊಂದರೆಯಾಗಬಹುದು, ಈ ಬಗ್ಗೆ ಸಮತಿ ಸಭೆಯಲ್ಲಿ ಸುಧೀರ್ಘವಾದ ಚರ್ಚೆ ನಡೆದು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳಿಗೆ ಒಂದೇ ತೆರನಾದ ಸಂಭವನೀಯ ಪ್ರಶ್ನೆ ಪತ್ರಿಕೆ ತಯಾರಿಸುವುದರಿಂದ, ವಿದ್ಯಾರ್ಥಿಗಳಿಗೆ ಗೊಂದಲಕ್ಕೆ ಕಾರಣವಾಗದೆ ಹೆಚ್ಚಿನ

ಅನುಕೂಲವಾಗುವುದು, ಇತರೇ ತ್ರೈಮಾಸಿಕ ಪರೀಕ್ಷೆಗಳನ್ನು ನಡೆಸುವುದಕ್ಕೆ ವಲಯ ಮಟ್ಟದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಿ, ಅದರ ಆಧಾರದ ಮೇಲೆ ಪರೀಕ್ಷೆಗಳನ್ನು ನಡೆಸಿಕೊಂಡು ಹೋಗುವುದು. ಆದ್ದರಿಂದ, ಪಬ್ಲಿಕ್ ಪರೀಕ್ಷೆಗೆ ಪೂರಕವಾಗಿ ನಡೆಸುವ ಪ್ರಿಪ್ರೇಟರಿ ಪರೀಕ್ಷೆಗಳಿಗೆ ನಗರ ಪಾಲಿಕೆಯ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞ ಅಧ್ಯಾಪಕರುಗಳನ್ನು ಗುರ್ತಿಸಿ ಅವರುಗಳ ಹಾಗೂ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿನ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞ ಹಾಗೂ ಪ್ರಶ್ನೆ ಪತ್ರಿಕೆಗಳನ್ನು ತಯಾರಿಕೆಯಲ್ಲಿ ಪರಿಣತಿ ಹೊಂದಿರುವ ಹಿರಿಯ ಶಿಕ್ಷಕರುಗಳನ್ನೊಳಗೊಂಡ ಸಂಭವನೀಯ ಪ್ರಶ್ನೆ (ಖಿಾಜುಥಿ ಕಿಣಾಜಾಟಿ ಹಿಚಿರಿಜು) ಪತ್ರಿಕೆಗಳನ್ನು ತಯಾರಿಸಲು ಉನ್ನತ ಮಟ್ಟದ ಕೋರ್ ಕಮಿಟಿಯನ್ನು ರಚಿಸುವುದೆಂದು ತೀರ್ಮಾನಿಸಲಾಯ್ತು. ಈ ಸಮಿತಿಯು 5 ಜೊತೆ( 5 ,ಜಾ ಠಜಿ ಕಿಣಾಜಾಟಿ ಹಿಚಿರಿಜು) ಪತ್ರಿಕೆಗಳನ್ನು ತಯಾರಿಸುವುದು ಅದರಲ್ಲಿ 1 ಸೆಟ್ ಪ್ರಶ್ನೆ ಪತ್ರಿಕೆಯನ್ನು ಆಯ್ಕೆ ಮಾಡಿ ಪರೀಕ್ಷೆಯನ್ನು ನಡೆಸುವುದು, ಇದರಿಂದ ವಿದ್ಯಾರ್ಥಿಗಳಿಗೆ ಮುಂಬರುವ ಪಬ್ಲಿಕ್ ಪರೀಕ್ಷೆಯನ್ನು ಎದುರಿಸಲು ಸಹಕಾರಿಯಾಗುವುದು ಹಾಗೂ ಇದರಿಂದ ಉತ್ತಮ ಮಟ್ಟದ ಫಲಿತಾಂಶ ದೊರೆಯುವುದು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:21.09.2011ರಂದು ಬೆಳಿಗ್ಗೆ 11.00 ಘಂಟೆಗೆ ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಅಪರ ಆಯುಕ್ತರು(ಕಲ್ಯಾಣ ಮತ್ತು ಆಸ್ತಿಗಳು) |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿಗಳು |
| ಶ್ರೀ.ಕೆ.ರವೀಂದ್ರನ್ – ಸದಸ್ಯರು | ಎಲ್ಲಾ ಕಾರ್ಯಪಾಲಕ ಅಭಿಯಂತರರು(ಪೂರ್ವ) |
| ಶ್ರೀ.ವಿ.ಕೃಷ್ಣ – ಸದಸ್ಯರು | ಎಲ್ಲಾ ಸಹಾಯಕ ನಿರ್ವಾಹಕ ಅಭಿಯಂತರರು(ಪೂರ್ವ) |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಡಾ: ನಾಜಿನಿ ಬೇಗಂ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಶ್ರೀಮತಿ.ಎಂ.ಶಕೀಲ – ಸದಸ್ಯರು | ವಿಷಯ ಪರಿವೀಕ್ಷಕರು |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಸಭೆಯಲ್ಲಿ ಹಾಜರಿದ್ದ ಮಾನ್ಯ ಅಪರ ಆಯುಕ್ತರು(ಕಲ್ಯಾಣ ಮತ್ತು ಆಸ್ತಿಗಳು) ಎಲ್ಲಾ ಕಾರ್ಯಪಾಲಕ ಅಭಿಯಂತರರು(ಪೂರ್ವ) ಹಾಗೂ ಇತರೇ ಅಧಿಕಾರಿಗಳನ್ನು ಮಾನ್ಯ ಅಧ್ಯಕ್ಷರು ಸ್ವಾಗತಿಸುತ್ತಾ, ಈ ದಿನದ ಸಭೆಯನ್ನು ಮುಖ್ಯವಾಗಿ ಪೂರ್ವ ವಲಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲಾ/ಕಾಲೇಜುಗಳು, ಆಟದ ಮೈದಾನ ಹಾಗೂ ಕ್ರೀಡಾಂಗಣಗಳ ಅಭಿವೃದ್ಧಿ ಕುರಿತಂತೆ, ಚರ್ಚಿಸಲು ಸಭೆಯನ್ನು ಕರೆಯಲಾಗಿದ್ದು, ಹಾಜರಿದ್ದ ಅಧಿಕಾರಿಗಳು ಅವರುಗಳ ಪರಿಚಯ ಸಭೆಗೆ ಮಾಡಿಕೊಳ್ಳುತ್ತಾ, ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮೋರಿ, ರಸ್ತೆ, ಚರಂಡಿ ರಿಪೇರಿಯನ್ನು ಪ್ರತಿ ವರ್ಷವು ಮಾಡುತ್ತಿರುತ್ತೇವೆ, ಅದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಶಾಲಾ/ಕಾಲೇಜುಗಳ ಅಭಿವೃದ್ಧಿಗೆ ನೀಡಬೇಕು, ಇದರಿಂದ ಮುಂದಿನ ಪೀಳಿಗೆ ನಿಮ್ಮನ್ನು ಸ್ಮರಿಸಿಕೊಳ್ಳುತ್ತದೆ ಒಬ್ಬ ವಿದ್ಯಾರ್ಥಿ ಭವಿಷ್ಯ ಅವನ್ನು ಓದುವ ಶಾಲೆಯಿಂದ ಉತ್ತಮಗೊಳ್ಳುತ್ತದೆ, ವಿದ್ಯಾರ್ಥಿಗಳಿಗೆ ಓದಲು ಉತ್ತಮ ಪರಿಸರ ಇರಬೇಕು, ಶಾಲೆಗಳಿಗೆ ಮೂಲಭೂತ ಸೌಕರ್ಯ ಕುಡಿಯುವ ಶುದ್ಧ ನೀರು, ಶೌಚಾಲಯ ಸ್ವಚ್ಚತೆ ಹಾಗೂ ಉತ್ತಮ ಪರಿಸರ ನಿರ್ಮಾಣವಾಗಬೇಕು.

*ಆದ್ದರಿಂದ, ನಾವು ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳಿಗೆ ಮನವಿ ಮಾಡಿಕೊಳ್ಳುತ್ತಿದ್ದೇವೆ, ದಯವಿಟ್ಟು ನಿಮ್ಮಗಳ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಶಾಲಾ/ಕಾಲೇಜುಗಳಿಗೆ ಆಟದ ಮೈದಾನಗಳಿಗೆ, ಕ್ರೀಡಾಂಗಣಗಳಿಗೆ ಕನಿಷ್ಟ ಪಕ್ಷ ಒಂದು ತಿಂಗಳಿಗೆ ಒಮ್ಮೆಯಾದರು ಕಡ್ಡಾಯವಾಗಿ ಭೇಟಿ ನೀಡ ಅಲ್ಲಿಗೆ ಅವಶ್ಯಕತೆ ಇರುವ ಮೂಲಭೂತ ಸೌಕರ್ಯ ಕಲ್ಪಿಸಲು ಆದ್ಯತೆ ನೀಡಿ, ನಗರ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಬರುವ ಮಕ್ಕಳು ಬಡ ಕುಟುಂಬದಿಂದ ಬಂದವರಾಗಿರುತ್ತಾರೆ. ಅವರುಗಳು ಸೌಲಭ್ಯದಿಂದ ವಂಚಿತರಾಗಬಾರದು, ಸುಮಾರು ವರ್ಷಗಳಿಂದ ಶಾಲಾ/ಕಾಲೇಜು ಕಟ್ಟಡಗಳಿಗೆ ವಾರ್ಷಿಕ ದುರಸ್ತಿ ಕಾಮಗಾರಿಗಳು ನಡೆದಿರುವುದಿಲ್ಲ (೦/ಅ ಫಡಿಇ), ಈ ಕಡೆಗೆ ಗಮನ ನೀಡುವುದು ಅವಶ್ಯವಾಗಿದೆ.*

*ಕೆಲವು ಶಾಲಾ/ಕಾಲೇಜುಗಳಿಗೆ ಕೊಠಡಿಗಳ ಕೊರತೆ ಇದೆ, ಅಂತಹ ಕಡೆಗಳಲ್ಲಿ ಹೆಚ್ಚುವರಿಯಾಗಿ ಕಟ್ಟಡಗಳ ನಿರ್ಮಾಣ ಮಾಡಿ ಶಾಲಾ ಆವರಣದಲ್ಲಿ ಬಗೆ ಬಗೆಯ ಸಸಿಗಳನ್ನು ನೆಡಲು ಕ್ರಮ ತೆಗೆದುಕೊಳ್ಳುವುದು, ಶಾಲೆಗಳನ್ನು ಆಕರ್ಷಕವಾಗಿ ಕಾಣಲು ಉತ್ತಮ ಗುಣ ಮಟ್ಟದ ಬಣ್ಣಗಳನ್ನು ಬಳಿಯಲು ಕ್ರಮತೆಗೆದುಕೊಳ್ಳುವುದು ಹಾಗೂ ನಗರ ಪಾಲಿಕೆಯ ಎಲ್ಲಾ ಶಾಲಾ/ಕಾಲೇಜುಗಳಿಗೆ ಒಂದೇ ರೀತಿಯ ಬಣ್ಣವನ್ನು ಬಳಿಯುವುದು, ಇದಕ್ಕಾಗಿ ತಮ್ಮ ಸಲಹೆಗಳನ್ನು ಕೇಳಲಾಗಿದೆ. ಈ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವುದು, ಯಾವ ಬಣ್ಣವನ್ನು ಉಪಯೋಗಿಸಿದರೆ ಶಾಲಾ ಕಟ್ಟಡಗಳು ಆಕರ್ಷಕವಾಗಿ ಕಾಣುತ್ತದೆ ಎಂಬುದನ್ನು ಚರ್ಚಿಸಿ ಅಭಿಪ್ರಾಯ ನೀಡಿ, ಒಟ್ಟಾರೆ ಶೈಕ್ಷಣಿಕ ಅಭಿವೃದ್ಧಿ ಹೆಚ್ಚಿನ ಮಹತ್ವ ನೀಡುವುದು.*

*ಇದೇ ರೀತಿ ಸುಮಾರು ಕಡೆ ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸಿದ್ದು, ಆದರೆ, ಅವುಗಳ ನಿರ್ವಹಣೆಗೆ ಹೆಚ್ಚಿನ ಗಮನ ಹರಿಸಬೇಕಾಗಿದ್ದು, ಕ್ರೀಡಾಂಗಣಗಳು ನಿರ್ಮಾಣ ಮಾಡಿದ್ದು ಇವುಗಳು ಸಮರ್ಪಕವಾಗಿ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಈ ಬಗ್ಗೆ ಸ್ಥಳೀಯ ಸಂಘ/ಸಂಸ್ಥೆಯವರುಗಳು ಮುಂದೆ ಬಂದಲ್ಲಿ ಅವುಗಳ ನಿರ್ವಹಣೆಯನ್ನು ವಹಿಸಬಹುದಾಗಿದ್ದು, ಎಲ್ಲಿ ಸಾಧ್ಯವೊ ಅಂತಹ ಕಡೆ ಈ ರೀತಿ ನೀಡಬಹುದಾಗಿದೆ. ಆಟದ ಮೈದಾನಗಳಿಗೆ ಕೆಲವು ಕಡೆ ಕಾಂಪೌಂಡು ಇಲ್ಲದಿರುವುದರಿಂದ, ಇವುಗಳ ಒತ್ತುವರಿಗೆ ಸಾಧ್ಯವಿರುವುದರಿಂದ, ಇವುಗಳ ಸಂರಕ್ಷಣೆಗೆ ಕಾಂಪೌಂಡು ನಿರ್ಮಿಸಲು ಕ್ರಮ ತೆಗೆದುಕೊಳ್ಳುವುದು, ಮಾನ್ಯ ಉಪ ಮಹಾಪೌರರು ತಮ್ಮ ಅನುದಾನದಲ್ಲಿ ಶೇ.50ರಷ್ಟು ಶಿಕ್ಷಣದ ಅಭಿವೃದ್ಧಿ ನೀಡುವುದಾಗಿ ತಿಳಿಸಿರುತ್ತಾರೆ ಹಾಗೆ ವಾರ್ಡ್ ಕಾಮಗಾರಿಗಳ ಅನುದಾನದಲ್ಲಿ ಶೇ.10ರಷ್ಟು ಮೊತ್ತವನ್ನು ಶಿಕ್ಷಣದ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲು ನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾಗಿದ್ದು, ಇದಲ್ಲದೇ ಮಾನ್ಯ ಆಯುಕ್ತರವರ ಜೊತೆ ಅಷ್ಟೆ ಪ್ರಮಾಣದ ಒಚಿಣಛಿಟಿರ ಈಣುಜ ಸಹ ನೀಡುವುದಾಗಿ ತಿಳಿಸಿರುವುದರಿಂದ, ಹಣದ ಕೊರತೆ ಇರುವುದಿಲ್ಲ. ಆದ್ದರಿಂದ, ಎಲ್ಲಾ ಕಾರ್ಯಪಾಲಕ ಅಭಿಯಂತರವರುಗಳು ಹೆಚ್ಚಿನ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸಬೇಕಾಗಿದೆ.*

*ನಂತರ ಸಭೆಯಲ್ಲಿ ಹಾಜರಿದ್ದ ಎಲ್ಲಾ ಕಾರ್ಯಪಾಲಕ ಅಭಿಯಂತರರು ಅಕ್ಟೋಬರ್ 10ನೇ ತಾರೀಖಿನೊಳಗಾಗಿ ಅವರುಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲಾ/ಕಾಲೇಜುಗಳು, ಆಟದ ಮೈದಾನಗಳು ಹಾಗೂ ಕ್ರೀಡಾಂಗಣಗಳಿಗೆ ಭೇಟಿ ನೀಡುವುದಲ್ಲದೇ, ಅಗತ್ಯವಿರುವ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆಗಾಗಿ ಸಮಿತಿಗೆ ಮಂಡಿಸುವುದಾಗಿ ಆಶ್ವಾಸನೆ ನೀಡಿರುತ್ತಾರೆ.*

ಸಭೆಯಲ್ಲಿ ಹಾಜರಿದ್ದ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾನ್ಯ ಅಪರ ಆಯುಕ್ತರು ಸ್ಪಷ್ಟ ಆದೇಶ ನೀಡುತ್ತಾ, ಸಂಬಂಧಪಟ್ಟ ಶಾಲಾ/ಕಾಲೇಜುಗಳ ಮುಖ್ಯೋಪಾಧ್ಯಾಯರುಗಳು ಹಾಗೂ ಪ್ರಾಂಶುಪಾಲರುಗಳಿಂದ ಅವಶ್ಯಕತೆ ಇರುವ ಕಾಮಗಾರಿಗಳ ಹಾಗೂ ಇತರೇ ಕುಂದುಕೊರತೆಗಳ ಬಗ್ಗೆ ವರದಿಯನ್ನು ತರಿಸಿಕೊಂಡು ಅವುಗಳನ್ನು ಕ್ರೂಢೀಕರಿಸಿ ಅಕ್ಟೋಬರ್ 10ರೊಳಗಾಗಿ ತಮಗೆ ನೀಡುವಂತೆ ತಿಳಿಸಿರುತ್ತಾರೆ.

ಇದೇ ಸಮಯದಲ್ಲಿ ಸಭೆಯಲ್ಲಿ ಹಾಜರಿದ್ದ ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರು ತಮ್ಮ ಅನುಭವಗಳನ್ನು ಹಾಗೂ ಅಭಿಪ್ರಾಯವನ್ನು ತಿಳಿಸುತ್ತಾ, ಎಲ್ಲಾ ಅಧಿಕಾರಿ ವರ್ಗದವರು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ, ಖಂಡಿತ ನಗರ ಪಾಲಿಕೆಯ ಎಲ್ಲಾ ಶಾಲಾ/ಕಾಲೇಜುಗಳು ಖಾಸಗಿ ಶಾಲೆಗಳಿಗಿಂತ ಉತ್ತಮ ರೀತಿಯಲ್ಲಿ ನಡೆಸಬಹುದಾಗಿದ್ದು, ಶಿಕ್ಷಣದ ಬಗ್ಗೆ ಹೆಚ್ಚಿನ ಕಳಕಳಿ ಇರುವ ಅಧ್ಯಕ್ಷರಿದ್ದಾರೆ, ಮಾನ್ಯ ಸಮಿತಿಯ ಸದಸ್ಯರುಗಳಿದ್ದಾರೆ ಇವರುಗಳು ಎಲ್ಲಾ ರೀತಿಯಲ್ಲಿ ಸಹಕಾರ ನೀಡುತ್ತಿರುವುದರಿಂದ, ಉತ್ತಮ ಕೆಲಸ ಮಾಡಿ ಪಾಲಿಕೆಗೆ ಒಳ್ಳೆಯ ಹೆಸರು ತನ್ನಿ ಎಂಬುದಾಗಿ ಮನವಿ ಮಾಡಿರುತ್ತಾರೆ.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:24.09.2011ರಂದು ಬೆಳಿಗ್ಗೆ 11.00 ಘಂಟೆಗೆ ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಅಪರ ಆಯುಕ್ತರು(ಕಲ್ಯಾಣ ಮತ್ತು ಆಸ್ತಿಗಳು) |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿಗಳು |
| ಶ್ರೀ.ಕೆ.ರವೀಂದ್ರನ್ – ಸದಸ್ಯರು | ಎಲ್ಲಾ ಕಾರ್ಯಪಾಲಕ ಅಭಿಯಂತರರು(ದಕ್ಷಿಣ) |
| ಶ್ರೀ.ವಿ.ಕೃಷ್ಣ – ಸದಸ್ಯರು | ಎಲ್ಲಾ ಸಹಾಯಕ ನಿರ್ವಾಹಕ ಅಭಿಯಂತರರು(ದಕ್ಷಿಣ) |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಡಾ: ನಾಜಿನಿ ಬೇಗಂ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಶ್ರೀಮತಿ.ಎಂ.ಶಕೀಲ – ಸದಸ್ಯರು | ವಿಷಯ ಪರಿವೀಕ್ಷಕರು |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | ಆರೋಗ್ಯ ಪರಿವೀಕ್ಷಕರುಗಳು |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಸಭೆಯಲ್ಲಿ ಹಾಜರಿದ್ದ ಎಲ್ಲಾ ಕಾಮಗಾರಿ ಇಲಾಖೆಯ ಅಭಿಯಂತರರುಗಳನ್ನು, ಮಾನ್ಯ ಅಪರ ಆಯುಕ್ತರು(ಕಲ್ಯಾಣ ಮತ್ತು ಆಸ್ತಿಗಳು), ಆರೋಗ್ಯ ಇಲಾಖೆಯ ಆರೋಗ್ಯ ಪರಿವೀಕ್ಷಕರುಗಳನ್ನು ಹಾಗೂ ಇತರೇ ಅಧಿಕಾರಿಯವರುಗಳನ್ನು, ಮಾನ್ಯ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಈ ದಿನ ಬಿ.ಬಿ.ಎಂ.ಪಿ. ಯ ಎಲ್ಲಾ ಶಾಲಾ/ಕಾಲೇಜುಗಳ ಶಿಕ್ಷಣ ಅಭಿವೃದ್ಧಿ, ಮೂಲಭೂತ ಸೌಕರ್ಯ ಕಲ್ಪಿಸುವ ಬಗ್ಗೆ ಆಟದ ಮೈದಾನಗಳು ಹಾಗೂ ಕ್ರೀಡಾಂಗಣಗಳು ಮತ್ತು ನೈರ್ಮಲ್ಯ ವಿಶೇಷವಾಗಿ ಅಪರ/ಜಂಟಿ ಆಯುಕ್ತರು(ದಕ್ಷಿಣ) ಮತ್ತು (ಪಶ್ಚಿಮ) ವಲಯ ವ್ಯಾಪ್ತಿಯಲ್ಲಿ ಬರುವ ಮೇಲ್ಕಂಡ ಶಿಕ್ಷಣ ಅಭಿವೃದ್ಧಿ ಬಗ್ಗೆ ಚರ್ಚಿಸಲು ಸಭೆಯನ್ನು ಕರೆಲಾಗಿದ್ದು, ಆದರೆ, **ಮುಂಚಿತವಾಗಿ ಸಭೆಯ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಪಶ್ಚಿಮ ವಲಯದ ಅಧಿಕಾರಿಗಳು ಸಭೆಗೆ ಗೈರುಹಾಜರಾಗಿದ್ದು,** ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಪರ ಆಯುಕ್ತರವರ ಗಮನಕ್ಕೆ ತರಲಾಗಿದೆ.

ಮುಂದುವರಿದಂತೆ, ಮೊದಲನೆಯದಾಗಿ ಸಭೆಯಲ್ಲಿ ಹಾಜರಿದ್ದ ಕಾಮಗಾರಿ ಇಲಾಖೆಯ ಅಭಿಯಂತರರುಗಳು ಹಾಗೂ ಆರೋಗ್ಯ ಇಲಾಖೆಯ ಹಿರಿಯ ಆರೋಗ್ಯ ಪರಿವೀಕ್ಷಕರುಗಳು ಅವರುಗಳ ಪರಿಚಯವನ್ನು ಸಭೆಗೆ ಮಾಡಿಕೊಟ್ಟು, ಶಿಕ್ಷಣ ಸ್ಥಾಯಿ ಸಮಿತಿಯು ತಪಾಸಣಾ ಸಮಯದಲ್ಲಿ ಶಾಲಾ/ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯನ್ನು ಗಮನಿಸಿದ್ದು, ಮಕ್ಕಳ ಶಿಕ್ಷಣದ ಅಭಿವೃದ್ಧಿ ಶಾಲಾ/ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯ ಅತ್ಯವಶ್ಯವಾಗಿದ್ದು, ಇದರಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯ ಹಾಗೂ ಪರಿಸರ ಪ್ರಮುಖ ಪಾತ್ರ ವಹಿಸುತ್ತದೆ, ನಗರ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಬರುವ ಮಕ್ಕಳು ಬಡ ಕುಟುಂಬಗಳಿಂದ ಬಂದವರಾಗಿದ್ದು, ಮಕ್ಕಳು ಶಾಲೆಗೆ ಬರಲು ಶಾಲಾ ಕಟ್ಟಡಗಳು ಆಕರ್ಷಕವಾಗಿರಬೇಕು, ಸುಮಾರು ಶಾಲೆಗಳಲ್ಲಿ ಕೊಠಡಿ ಕೊರತೆ ಇದ್ದು, ಪ್ರಮುಖವಾಗಿ ಮಾಗಡಿ ರಸ್ತೆ ಶಾಲೆಯಲ್ಲಿ ಎರಡು ಪಾಳೆಯದಲ್ಲಿ ಶಾಲೆ ನಡೆಸುವಂತ ಪರಿಸ್ಥಿತಿ ಇದೆ. ಬೆಳಿಗ್ಗೆ ಪ್ರೌಢ ಶಾಲೆ ನಡೆದರೆ ಅಪರಾಹ್ನ ಪದವಿ ಪೂರ್ವ ಕಾಲೇಜು ತರಗತಿಗಳನ್ನು ನಡೆಸಲಾಗುತ್ತಿದೆ. ಇದರಿಂದ, ಮಕ್ಕಳಿಗೆ ಪೂರ್ಣ ಪ್ರಮಾಣದ ತರಗತಿಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ, ಸಂಬಂಧಪಟ್ಟ ಅಭಿಯಂತರರು, ಈ ಬಗ್ಗೆ ಕೂಡಲೇ ಗಮನ ಹರಿಸಿ ಅಗತ್ಯವಿರುವ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳುವುದು.

ಪ್ರತಿ ವರ್ಷವು ನಗರ ಪಾಲಿಕೆಯ ವತಿಯಿಂದ ಮೋರಿ, ರಸ್ತೆ ಕಾಮಗಾರಿಯನ್ನು ಮಾಡುವುದು ಮುಖ್ಯವಲ್ಲ, ಶಿಕ್ಷಣದ ಅಭಿವೃದ್ಧಿ ಹೆಚ್ಚಿನ ಆದ್ಯತೆ ನೀಡಬೇಕು, ಮಕ್ಕಳಿಗೆ ಶಿಕ್ಷಣ ಎಷ್ಟು ಮುಖ್ಯವೋ, ಅದೇ ರೀತಿ ಆಟದ ಕಡೆ ಗಮನ ಕೊಡಬೇಕು, ಇದಕ್ಕಾಗಿ ಉತ್ತಮ ಸೌಕರ್ಯ ಇರುವ ಆಟದ ಮೈದಾನಗಳು ಮುಖ್ಯ, ಆದ್ದರಿಂದ, ಕಾರ್ಯಪಾಲಕ ಅಭಿಯಂತರರುಗಳು, ಈ ದಿನ ಸಭೆಗೆ ಬಂದಿದ್ದೀರಿ, ದಯ ಮಾಡಿ ಕನಿಷ್ಟ ಪಕ್ಷ ತಿಂಗಳಿಗೆ ಒಮ್ಮೆಯಾದರು ನಿಮ್ಮ ವ್ಯಾಪ್ತಿಯಲ್ಲಿ ಬರುವ ಶಾಲಾ/ಕಾಲೇಜುಗಳಿಗೆ ಭೇಟಿ ನೀಡಿ, ಅಲ್ಲಿರುವ ಕುಂದು ಕೊರತೆಗಳ ಬಗ್ಗೆ ಗಮನ ಹರಿಸಿ, ಅವುಗಳನ್ನು ಸರಿಪಡಿಸಿ ಹಾಗೂ ಮಕ್ಕಳ ಹಾಜರಾಗಿ ಶಿಕ್ಷಕರ ಹಾಜರಾತಿ ಹಾಗೂ ಶಾಲಾ/ಕಾಲೇಜುಗಳ ನೈರ್ಮಲ್ಯದ ಬಗ್ಗೆ ಗಮನ ಕೊಡಿ, ಇದರಿಂದ ಶಾಲಾ/ಕಾಲೇಜುಗಳಲ್ಲಿ ಶಿಸ್ತು ಹಾಗೂ ಪಾಠ-ಪ್ರವಚನಗಳಿಗೆ ಅನುಕೂಲವಾಗುವುದು.

ಸಭೆಯಲ್ಲಿ ಹಾಜರಿದ್ದ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು ಇದುವರೆವಿಗೂ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಗೆ ಕರೆದು, ಈ ರೀತಿ ನಮ್ಮಗಳನ್ನು ಯಾರು ಮಾತನಾಡಿಸಿರುವುದಿಲ್ಲ. ಈ ಸ್ಥಾಯಿ ಸಮಿತಿಯು ಸಭೆಗೆ ಕರೆದಿರುವುದರಿಂದ, ಬಹಳ ಸಂತೋಷವಾಗಿದೆ, ನಾವುಗಳು ಖಂಡಿತ ಶಾಲಾ/ಕಾಲೇಜುಗಳಿಗೆ ಭೇಟಿ ನೀಡುವುದಲ್ಲದೇ, ಅಭಿವೃದ್ಧಿಗೆ ಅಗತ್ಯವಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳವುದಾಗಿ ತಿಳಿಸಿರುತ್ತಾರೆ. ಇದೇ ರೀತಿ ಸಭೆಯಲ್ಲಿ ಹಾಜರಿದ್ದ ಆರೋಗ್ಯ ಪರಿವೀಕ್ಷಕರುಗಳು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದು, ಇದಕ್ಕಾಗಿ ಸ್ಥಾಯಿ ಸಮಿತಿಗೆ ಅಭಿನಂದನೆಗಳನ್ನು ತಿಳಿಸುವುದಾಗಿ ಹೇಳಿದರು.

ಮುಂದುವರಿದಂತೆ, ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಕಳೆದ ವರ್ಷಗಳಲ್ಲಿ ಆಯ-ವ್ಯಯ ಸಾಕಷ್ಟು ಅನುದಾನ ನೀಡಿದ್ದರೂ ಸಮರ್ಪಕವಾಗಿ ಬಳಕೆಯಾಗಿಲ್ಲ. ಈ ವರ್ಷದಲ್ಲಿ ಹಾಗೇ ಆಗಬಾರದು, ವಾರ್ಡ್ ಕಾಮಗಾರಿಗಳಿಗೆ ನೀಡುವ ಅನುದಾನದಲ್ಲಿ ಶೇ.10ರಷ್ಟು ಅನುದಾನವನ್ನು ಶಿಕ್ಷಣ ಅಭಿವೃದ್ಧಿಗೆ ಮೀಡಲಿಟ್ಟಿದ್ದು ಹಾಗೂ ಅಗತ್ಯ ಬಿದ್ದರೆ ಅಷ್ಟೆ ಪ್ರಮಾಣದ ಒಚಿಣಛಿಱಟಿ ಈಣಟಿಜ ನೀಡುವುದಾಗಿ ಮಾನ್ಯ ಆಯುಕ್ತರು ತಿಳಿಸಿರುತ್ತಾರೆ ಹಾಗೂ ಮಾನ್ಯ ಉಪ

*ಮಹಾಪೌರರು ತಮ್ಮ ಅನುದಾನದಲ್ಲಿ ಶೇ.50ರಷ್ಟು ಹಣವನ್ನು ಶಿಕ್ಷಣದ ಅಭಿವೃದ್ಧಿಗೆ ನೀಡುವುದಾಗಿ ಸಂತೋಷದಿಂದ ಒಪ್ಪಿರುತ್ತಾರೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ತಾವುಗಳು ಕಾರ್ಯನಿರ್ವಹಿಸಬೇಕಾಗಿದೆ. ಶಿಕ್ಷಣದ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಿ ಇದರಿಂದ, ಮಕ್ಕಳ ಭವಿಷ್ಯ ಉತ್ತಮವಾಗುತ್ತದೆ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಕಾರ್ಯಪಾಲಕ ಅಭಿಯಂತರವರುಗಳು, ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲಾ/ಕಾಲೇಜುಗಳು ಆಟದ ಮೈದಾನಗಳು ಹಾಗೂ ಕ್ರೀಡಾಂಗಣಗಳಿಗೆ ಭೇಟಿ ನೀಡುವುದಲ್ಲದೇ ಅಕ್ಟೋಬರ್ 10ನೇ ತಾರೀಖಿನೊಳಗಾಗಿ ಅಗತ್ಯವಿರುವ ಕಾಮಗಾರಿಗಳ ಪಟ್ಟಿಯನ್ನು ತಯಾರಿಸಿ, ಅಂದಾಜು ಪಟ್ಟಿಯನ್ನು ಸಹ ತಯಾರಿಸಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸುವುದಾಗಿ ಆಶ್ವಾಸನೆ ನೀಡಿರುತ್ತಾರೆ.*

*ಸಭೆಯಲ್ಲಿ ಹಾಜರಿದ್ದ ಮಾನ್ಯ ಅಪರ ಆಯುಕ್ತರು ಮಾತನಾಡುತ್ತಾ, ನೋಡಿ ನಿಮ್ಮಗಳಿಗೆ ಒಳ್ಳೆಯ ಅಧ್ಯಕ್ಷರು ಹಾಗೂ ಸದಸ್ಯರುಗಳು ಸಿಕ್ಕಿದ್ದಾರೆ ಅವರುಗಳ ಒಳ್ಳೆಯ ಸಹಕಾರ ನೀಡುತ್ತಾರೆ. ಆದ್ದರಿಂದ, ಉತ್ತಮ ಕೆಲಸ ಮಾಡಿ ಪಾಲಿಕೆಗೆ ಒಳ್ಳೆ ಹೆಸರು ತನ್ನಿ ಹಾಗೂ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಿ, ಮಾನ್ಯ ಅಧ್ಯಕ್ಷರು ಹೇಳಿದ ಹಾಗೇ ಬರುವ ಅಕ್ಟೋಬರ್ 10ನೇ ತಾರೀಖಿನೊಳಗಾಗಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ, ತನ್ನಿ ಕೂಡಲೇ ಅನುಮೋದನೆ ದೊರೆಯುತ್ತದೆ, ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು ಎಂಬುದಾಗಿ ಸ್ಪಷ್ಟ ಆದೇಶ ನೀಡಿದರು.*

*ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರು ಮಾತನಾಡುತ್ತಾ, ಶಿಕ್ಷಣದ ಅಭಿವೃದ್ಧಿಗೆ ಆದ್ಯತೆ ನೀಡಿ, ಈ ಸಮಯದಲ್ಲಿ ಶಿಕ್ಷಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ, ತಮ್ಮ ಅನುಭವಗಳನ್ನು ಹಾಗೂ ಕೆಲವು ಸೂಚನೆಗಳನ್ನು ನೀಡಿದ್ದು, ಒಳ್ಳೆಯ ಅಧ್ಯಕ್ಷರಿದ್ದಾರೆ ಶಿಕ್ಷಣದ ಬಗ್ಗೆ ಕಳಕಳಿ ಇರುವ ಮಾನ್ಯ ಸದಸ್ಯರು ಶಿಕ್ಷಣ ಸಮಿತಿಯಲ್ಲಿ ಇದ್ದಾರೆ. ಆದ್ದರಿಂದ, ಅವರುಗಳ ಸಹಕಾರ ನಿಮಗೆ ಖಂಡಿತ ಇದೆ. ಆದ್ದರಿಂದ, ಒಳ್ಳೆ ಕೆಲಸ ಮಾಡಿ ನಗರ ಪಾಲಿಕೆಯ ಶಾಲಾ/ಕಾಲೇಜುಗಳು ಖಾಸಗಿ ಶಾಲೆಗಳಿಗಿಂತ ಉತ್ತಮ ಎಂಬ ಹೆಸರು ಬರುವಂತೆ ಮಾಡಿ, ಇದು ನಿಮ್ಮಗಳ ಕೈಯಲ್ಲಿ ಇದೇ ನೀವುಗಳ ಮನಸ್ಸು ಮಾಡಿದರೇ ಖಂಡಿತ ಕೆಲಸಗಳು ಆಗುತ್ತದೆ ಎಂಬುದಾಗಿ ಮನವಿ ಮಾಡುತ್ತಿರುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಸಮಿತಿಯ ಎಲ್ಲಾ ಮಾನ್ಯ ಸದಸ್ಯರುಗಳು ಸಭೆಯಲ್ಲಿ ಹಾಜರಿದ್ದ ಅಭಿಯಂತರರುಗಳಿಗೆ ಅವರುಗಳ ವಾರ್ಡ್ ವ್ಯಾಪ್ತಿಯಲ್ಲಿನ ಶಾಲಾ/ಕಾಲೇಜುಗಳ ಕುಂದು ಕೊರತೆಗಳ ಬಗ್ಗೆ ಗಮನ ಸೆಳೆಯುತ್ತಾ, ಇವುಗಳ ನಿವಾರಣೆಗೆ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.*

*ಸಭೆಯನ್ನು ಮತ್ತೆ ಅಪರಾಹ್ನ 2.30 ಘಂಟೆಗೆ ಸಮಾವೇಶಗೊಂಡಿದ್ದು, ಈ ಸಭೆಯಲ್ಲಿ ಎಲ್ಲಾ ಶಾಲೆಯ ಮುಖ್ಯೋಪಾಧ್ಯಾಯರುಗಳು ಹಾಗೂ ಕಾಲೇಜುಗಳ ಪ್ರಾಂಶುಪಾಲರು ಹಾಜರಿದ್ದು, ಶಾಲಾ/ಕಾಲೇಜುಗಳ ಕುಂದು ಕೊರತೆ ಹಾಗೂ ಪಾಠ–ಪ್ರವಚನಗಳ ಬಗ್ಗೆ ಪರಾಮರ್ಶೆ ನಡೆಸಲಾಗಿದ್ದು, ಅವರುಗಳು ಮಾಸಿಕ ಪರೀಕ್ಷೆಯಲ್ಲಿ ಶಾಲಾ ಮಕ್ಕಳು ಯಾವ ರೀತಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಹಾಗೂ ಅವರುಗಳು ಪಡೆಯುತ್ತಿರುವ ಅಂಕಗಳನ್ನು ಆಧರಿಸಿ, ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಮುತುವರ್ಜಿ ವಹಿಸುವ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಾಗುತ್ತಿದೆ ಎಂಬುದರ ಬಗ್ಗೆ ಸುಧೀರ್ಘವಾದ ಚರ್ಚೆ ನಡೆಸಲಾಯ್ತು. ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದ್ದು, ಇಂಗ್ಲೀಷ್ ಮಾಧ್ಯಮದ ಶಾಲೆಗಳ ಹೆಚ್ಚುವರಿ ಮಾಡಲು ಅಗತ್ಯವಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ*

ತಂದಿದ್ದು, ಈ ಬಗ್ಗೆ ಪರಿಶೀಲಿಸಿ, ಅಗತ್ಯ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ಹಾಜರಿದ್ದ, ಶಿಕ್ಷಣಾಧಿಕಾರಿಯವರುಗಳಿಗೆ ಸೂಚಿಸಲಾಯ್ತು ಹಾಗೆ ಶಾಲಾ/ಕಾಲೇಜುಗಳ ಕುಂದು ಕೊರತೆಗಳ ಬಗ್ಗೆ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡು ಅವರ ಸಹಕಾರದೊಂದಿಗೆ ಇವುಗಳ ನಿವಾರಣೆಗೆ ಕ್ರಮ ತೆಗೆದುಕೊಳ್ಳುವುದು, ನೈರ್ಮಲ್ಯದ ಬಗ್ಗೆ ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರ ಗಮನ ತಂದಲ್ಲಿ ಅವುಗಳನ್ನು ಸರಿಪಡಿಸಲು ಅವರುಗಳು ಸಹಕಾರ ನೀಡುವರು, ಈ ಬಗ್ಗೆ ಅವರಿಂದ ಉತ್ತಮ ಪ್ರತಿ ಕ್ರಿಯೆ ಬಂದಿದ್ದು, ಆದ್ದರಿಂದ, ಎಲ್ಲರು ಒಟ್ಟಾಗಿ ಕೆಲಸ ಮಾಡಿದ್ದಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ. ಆದ್ದರಿಂದ, ಎಲ್ಲಾ ಮುಖ್ಯೋಪಾಧ್ಯಾಯರುಗಳು ಹಾಗೂ ಪ್ರಾಂಶುಪಾಲರುಗಳು **"ಇದು ನಮ್ಮ ಶಾಲೆ"** ಎಂಬ ಭಾವನೆಯಿಂದ ಕೆಲಸ ಮಾಡಿ ಎಂಬುದಾಗಿ ಮಾನ್ಯ ಅಧ್ಯಕ್ಷರು ವಿನಂತಿ ಮಾಡುತ್ತಿರುವುದಾಗಿ ತಿಳಿಸಿದ್ದು, ಯಾವುದೇ ಸಮಸ್ಯೆ ಇದ್ದರೆ ನನ್ನ ಗಮನಕ್ಕೆ ಅಥವಾ ಸಮಿತಿಯ ಮಾನ್ಯ ಸದಸ್ಯರುಗಳ ಗಮನಕ್ಕೆ ತಂದಲ್ಲಿ ಈ ಬಗ್ಗೆ ಗಮನ ಹರಿಸಲಾಗುವುದು.

ಮುಂದುವರಿದಂತೆ, ಎಲ್ಲಾ ಶಾಲಾ/ಕಾಲೇಜುಗಳ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು ಗಳಿಗೆ ಶಾಲಾ/ಕಾಲೇಜುಗಳಲ್ಲಿ ಆಗಬೇಕಾಗಿರುವ ಮೂಲಭೂತ ಸೌಕರ್ಯ ಹಾಗೂ ಇತರೇ ಕುಂದು-ಕೊರತೆಗಳ ಬಗ್ಗೆ ಪಟ್ಟಿ ತಯಾರಿಸಿ ಕೊಡಿ, ಅವುಗಳ ಕ್ರೂಢೀಕರಿಸಿ ಸಂಬಂಧಪಟ್ಟ ಅಭಿಯಂತರರುಗಳಿಗೆ ಕಳುಹಿಸಿಕೊಟ್ಟು, ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಕೋರಲಾಗುವುದು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:11.11.2011ರಂದು ಬೆಳಿಗ್ಗೆ 11.00 ಘಂಟೆಗೆ ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಅಪರ ಆಯುಕ್ತರು(ಕಲ್ಯಾಣ ಮತ್ತು ಆಸ್ತಿಗಳು) |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿಗಳು |
| ಶ್ರೀ.ಕೆ.ರವೀಂದ್ರನ್ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಡಾ: ನಾಜಿನಿ ಬೇಗಂ – ಸದಸ್ಯರು | ವಿಷಯ ಪರಿವೀಕ್ಷಕರು |
| ಶ್ರೀಮತಿ.ಎಂ.ಶಕೀಲ – ಸದಸ್ಯರು | |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

**ವಿಷಯದ ಸಂಖ್ಯೆ:– ಶಿ.ಸ್ಥಾ.ಸ/13/11–12**

ವಿಷಯ: 2011–12ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆ/ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಕ್ರೀಡಾ ಕೂಟ ಮತ್ತು ಮಕ್ಕಳ ಮೇಳವನ್ನು ಆಯೋಜಿಸುವ ಬಗ್ಗೆ.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ಪಿ.ಎ.ಓ/ಪಿಆರ್/18/11–12, ದಿನಾಂಕ:29.10.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 11–12ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕ್ರೀಡಾ ಕೂಟ ಮತ್ತು ಮಕ್ಕಳ ಮೇಳದ ಅಂಗವಾಗಿ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಿ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲು ದಿನಾಂಕ:23.11.2011 ರಿಂದ

26.11.2011ರವರೆಗೆ ಕ್ರೀಡೆಗಳನ್ನು ನಡೆಸಲು ಮತ್ತು ಮುಕ್ತಾಯ ಸಮಾರಂಭವನ್ನು ನಡೆಸಲು ಉದ್ದೇಶಿಸಲಾಗಿದ್ದೆ. ಸದರಿ ಕ್ರೀಡೆಗಳು ನಡೆಯುವ ದಿನಾಂಕಗಳಂದು ತಗಲುವ ಅಂದಾಜು ವೆಚ್ಚದ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸ. | ವಿವರ | ಒಟ್ಟು ಮೊತ್ತ ರೂ. |
|---|---|---|
| 1 | ಕ್ರೀಡೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ತಲಾ ಒಬ್ಬರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ದಿನ ಒಂದಕ್ಕೆ ರೂ.75/–ಗಳಂತೆ 1,175 ವಿದ್ಯಾರ್ಥಿಗಳಿಗೆ 5 ದಿವಸಗಳಿಗೆ ತಗಲುವ ವೆಚ್ಚ ಮತ್ತು ವ್ಯವಸ್ಥಾಪಕರುಗಳಿಗೆ ತಲಾ ಒಬ್ಬರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ಒಂದು ದಿನಕ್ಕೆ ರೂ.75/–ಗಳಂತೆ 92 ಜನರಿಗೆ ಒಟ್ಟು 5 ದಿವಸಗಳಿಗೆ ತಗಲುವ ಅಂದಾಜು ವೆಚ್ಚ (ಕ್ರಮವಾಗಿ ರೂ.4,40,625+34,500) | 4,75,125–00 |
| 2 | ಸಾಮೂಹಿಕ ಕವಾಯಿತಿ ಮತ್ತು ಪಥಸಂಚಲನದಲ್ಲಿ ಭಾಗಹಿಸುವ 950 ವಿದ್ಯಾರ್ಥಿಗಳಿಗೆ ತಲಾ ಒಬ್ಬರಿಗೆ ದಿನ ಒಂದಕ್ಕೆ ರೂ.50/–ಗಳಂತೆ ದಿನ ಭತ್ಯೆ ಹಾಗೂ ಪ್ರಯಾಣ ಭತ್ಯೆ 2 ದಿವಸಗಳಿಗೆ ತಗಲುವ ಅಂದಾಜು ವೆಚ್ಚ. | 95,000–00 |
| 3 | ಕ್ರೀಡೆಗಳನ್ನು ನಡೆಸುವ 38 ಜನ ತೀರ್ಪುಗಾರರಿಗೆ ಮತ್ತು 4 ಮಾರ್ಕರ್‌ಗಳಿಗೆ ದಿನ ಭತ್ಯೆ ಹಾಗೂ ಪ್ರಯಾಣ ಭತ್ಯೆ ಒಟ್ಟು 5 ದಿವಸಗಳಿಗೆ ತಗಲುವ ಅಂದಾಜು ವೆಚ್ಚ. | 15,750–00 |
| 4 | ಪಾಲಿಕೆಯ ಶಿಶುವಿಹಾರ 6 ಶಾಲೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುವಂತಹ 1 ಶಾಲೆಗೆ ರೂ.5,000/–ಗಳಂತೆ ವೇಷ ಭೂಷಣ, ಪ್ರಯಾಣ ಭತ್ಯೆ ಹಾಗೂ ಲಘು ಉಪಹಾರ ನೀಡಲು ತಗಲುವ ಅಂದಾಜು ವೆಚ್ಚ. | 30,000–00 |
| 5 | ಕ್ರೀಡೆಗಳು ನಡೆಯುವ ಸ್ಥಳಗಳಲ್ಲಿ ಬ್ಯಾನರ್‌ಗಳು, ಬಣ್ಣ ಬಣ್ಣದ ಬಾವುಟಗಳು ಮತ್ತು ಕಂಬಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ. | 10,000–00 |
| 6 | ಪ್ರೌಢ ಶಾಲೆಯ 500 ಮಕ್ಕಳಿಂದ ಯೋಗ ಕಾರ್ಯಕ್ರಮವನ್ನು ನೀಡಲು ತಲಾ ಒಬ್ಬರಿಗೆ ರೂ.50/–ಗಳಂತೆ ಒಟ್ಟು 2 ದಿನಗಳಿಗೆ ದಿನ ಭತ್ಯೆ ಮತ್ತು ಪ್ರಯಾಣ ಭತ್ಯೆಗೆ ತಗಲುವ ಅಂದಾಜು ವೆಚ್ಚ. | 50,000–00 |
| 7 | ಸಮಾರಂಭದ ದಿನ ಮುಖ್ಯ ಅತಿಥಿಗಳಿಗೆ ಹೂವಿನ ಹಾರಗಳು, ಹಣ್ಣಿನ ಬುಟ್ಟಿಗಳು, ಬಿಸ್ಲೇರಿ ನೀರಿನ ಬಾಟಲುಗಳು, ಕಾಫಿ, ಬಿಸ್ಕೆಟ್ ಮತ್ತು ಸಿಡಿ ಮದ್ದುಗಳು, ಗ್ಯಾಸ್ ಬಲೂನುಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ. | 30,000–00 |
| 8 | ಪಂದ್ಯಾವಳಿಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನದ ಪಾರಿತೋಷಕ ಹಾಗೂ ಪದಕಗಳನ್ನು ಖರೀದಿಸಲು ಪ್ರತಿಷ್ಠಿತ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ತಗಲುವ ಅಂದಾಜು ವೆಚ್ಚ. | 56,000–00 |
| 9 | ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಹಾಗೂ ಆಹ್ವಾನ ಪತ್ರಗಳನ್ನು ಮುದ್ರಿಸಿಕೊಡಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ. | 15,000–00 |

| | | |
|---|---|---|
| 10 | ಕ್ರೀಡೆಗಳು ನಡೆಯುವ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಪ್ರಥಮ ಚಿಕಿತ್ಸಾ ಉಪಕರಣಗಳನ್ನು, ಔಷಧಿಗಳು, ಗ್ಲೂಕೋಸ್ ಪುಡಿಗಳಿಗೆ ತಗಲುವ ಮೊತ್ತವನ್ನು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 5,000–00 |
| 11 | ಕ್ರೀಡೆಗಳನ್ನು ನಡೆಸಲು ಮೈದಾನಗಳನ್ನು ಗುರುತು ಮಾಡಲು ರಂಗೋಲೆ ಪುಡಿಯನ್ನು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 10,000–00 |
| 12 | ಕ್ರೀಡೆಗಳು ನಡೆಯುವ ಸಮಯದಲ್ಲಿ ಛಾಯ ಚಿತ್ರಗಳನ್ನು ತೆಗೆಯಲು ಮತ್ತು ಆಲ್ಬಂ ಖರೀದಿಸಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 10,000–00 |
| 13 | ಕ್ರೀಡೆಗಳು ನಡೆಯುವ ಸಮಯದಲ್ಲಿ ಶಾಮಿಯಾನ, ಖುರ್ಚಿಗಳು, ಧ್ವನಿವರ್ಧಕ, ಕಾರ್ಡ್‌ಲೇಸ್ ಪೋನ್, ಟೆಬಲ್ ಮತ್ತು ಟೆಬಲ್ ಕ್ಲಾತ್ ಹಾಗೂ ಬ್ಯಾಟರಿಗಳನ್ನು ಬಾಡಿಗೆಗೆ ಪಡೆಯಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಈ ಮೂಲಕ ಕಾರ್ಯಕೈಗೊಳ್ಳಲು (ಒಟ್ಟು 5 ದಿವಸಗಳಿಗೆ) ತಗಲುವ ಅಂದಾಜು ವೆಚ್ಚ. | 95,000–00 |
| 14 | ಆಟೋಟಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಪಾರಿತೋಷಕ ಹಾಗೂ ಪದಕಗಳನ್ನು ಖರೀದಿಸಲು ಪ್ರತಿಷ್ಠಿತ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು, ತಗಲುವ ಅಂದಾಜು ವೆಚ್ಚ. | 42,000–00 |
| 15 | ಕ್ರೀಡೆಗಳನ್ನು ನಡೆಸಲು ಕ್ರೀಡಾ ಸಾಮಗ್ರಿಗಳಾದ ಥ್ರೋಬಾಲ್, ಥ್ರೋಬಾಲ್ ನೆಟ್, ವಾಲಿಬಾಲ್, ವಾಲಿಬಾಲ್ ನೆಟ್, ಖೋ–ಖೋ(2 ಜೊತೆ) ಕಂಬಗಳು, ವಾಲಿಬಾಲ್ (2 ಜೊತೆ) ಕಂಬಗಳು ಅಳತೆ ಟೇಪು, ರಿಲೆ ಬ್ಯಾಟ್‌ಗಳು, ವಿಕ್ಟರಿ ಸ್ಟ್ಯಾಂಡ್ ಮತ್ತು ಸ್ಕೋರ್ ಪುಸ್ತಕಗಳನ್ನು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 35,000–00 |
| 16 | ಕ್ರೀಡೆಗಳನ್ನು ನಡೆಸಿ ಕೊಡುವ 38 ತೀರ್ಪುದಾರರಿಗೆ ತಲಾ ಒಬ್ಬರಿಗೆ ಉತ್ತಮ ಗುಣಮಟ್ಟದ ಒಂದು ಟೀ ಶರ್ಟ್ ಮತ್ತು ಒಂದು ಟೋಪಿ ಖರೀದಿಸಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 20,000–00 |
| | **ಒಟ್ಟು ಮೊತ್ತ ರೂ.** | **9,93,875–00** |

## ಘೋಷ್ವಾರೆ – 1

| | | |
|---|---|---|
| 1 | ಕ್ರೀಡೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ತಲಾ ಒಬ್ಬರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ದಿನ ಒಂದಕ್ಕೆ ರೂ.75/–ಗಳಂತೆ 1,175 ವಿದ್ಯಾರ್ಥಿಗಳಿಗೆ 5 ದಿವಸಗಳಿಗೆ ತಗಲುವ ವೆಚ್ಚ ಮತ್ತು ವ್ಯವಸ್ಥಾಪಕರುಗಳಿಗೆ ತಲಾ ಒಬ್ಬರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ಒಂದು ದಿನಕ್ಕೆ ರೂ.75/–ಗಳಂತೆ 92 ಜನರಿಗೆ ಒಟ್ಟು 5 ದಿವಸಗಳಿಗೆ ತಗಲುವ ಅಂದಾಜು ವೆಚ್ಚ (ಕ್ರಮವಾಗಿ ರೂ.4,40,625+34,500) | 4,75,125–00 |
| 2 | ಸಾಮೂಹಿಕ ಕವಾಯಿತಿ ಮತ್ತು ಪಥಸಂಚಲನದಲ್ಲಿ ಭಾಗಹಿಸುವ 950 ವಿದ್ಯಾರ್ಥಿಗಳಿಗೆ ತಲಾ ಒಬ್ಬರಿಗೆ ದಿನ ಒಂದಕ್ಕೆ ರೂ.50/–ಗಳಂತೆ ದಿನ ಭತ್ಯೆ ಹಾಗೂ ಪ್ರಯಾಣ ಭತ್ಯೆ 2 ದಿವಸಗಳಿಗೆ ತಗಲುವ ಅಂದಾಜು | 95,000–00 |

| | | |
|---|---|---|
| | ವೆಚ್ಚ. | |
| 3 | ಕ್ರೀಡೆಗಳನ್ನು ನಡೆಸುವ 38 ಜನ ತೀರ್ಪುಗಾರರಿಗೆ ಮತ್ತು 4 ಮಾರ್ಕರ್‌ಗಳಿಗೆ ದಿನ ಭತ್ಯೆ ಹಾಗೂ ಪ್ರಯಾಣ ಭತ್ಯೆ ಒಟ್ಟು 5 ದಿವಸಗಳಿಗೆ ತಗಲುವ ಅಂದಾಜು ವೆಚ್ಚ. | 15,750–00 |
| 4 | ಪಾಲಿಕೆಯ ಶಿಶುವಿಹಾರ 6 ಶಾಲೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುವಂತಹ 1 ಶಾಲೆಗೆ ರೂ.5,000/–ಗಳಂತೆ ವೇಷ ಭೂಷಣ, ಪ್ರಯಾಣ ಭತ್ಯೆ ಹಾಗೂ ಲಘು ಉಪಹಾರ ನೀಡಲು ತಗಲುವ ಅಂದಾಜು ವೆಚ್ಚ. | 30,000–00 |
| 5 | ಕ್ರೀಡೆಗಳು ನಡೆಯುವ ಸ್ಥಳಗಳಲ್ಲಿ ಬ್ಯಾನರ್‌ಗಳು, ಬಣ್ಣ ಬಣ್ಣದ ಬಾವುಟಗಳು ಮತ್ತು ಕಂಬಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ. | 10,000–00 |
| 6 | ಪ್ರೌಢ ಶಾಲೆಯ 500 ಮಕ್ಕಳಿಂದ ಯೋಗ ಕಾರ್ಯಕ್ರಮವನ್ನು ನೀಡಲು ತಲಾ ಒಬ್ಬರಿಗೆ ರೂ.50/–ಗಳಂತೆ ಒಟ್ಟು 2 ದಿನಗಳಿಗೆ ದಿನ ಭತ್ಯೆ ಮತ್ತು ಪ್ರಯಾಣ ಭತ್ಯೆಗೆ ತಗಲುವ ಅಂದಾಜು ವೆಚ್ಚ. | 50,000–00 |
| 7 | ಸಮಾರಂಭದ ದಿನ ಮುಖ್ಯ ಅತಿಥಿಗಳಿಗೆ ಹೂವಿನ ಹಾರಗಳು, ಹಣ್ಣಿನ ಬುಟ್ಟಿಗಳು, ಬಿಸ್ಲೇರಿ ನೀರಿನ ಬಾಟಲುಗಳು, ಕಾಫಿ, ಬಿಸ್ಕೆಟ್ ಮತ್ತು ಸಿಡಿ ಮದ್ದುಗಳು, ಗ್ಯಾಸ್ ಬಲೂನುಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ. | 30,000–00 |
| | **ಒಟ್ಟು ಮೊತ್ತ ರೂ.** | **7,05,875–00** |

## ಘೋಷ್ವಾರೆ – 2

| | | |
|---|---|---|
| 1 | ಪಂದ್ಯಾವಳಿಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನದ ಪಾರಿತೋಷಕ ಹಾಗೂ ಪದಕಗಳನ್ನು ಖರೀದಿಸಲು ಪ್ರತಿಷ್ಠಿತ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ತಗಲುವ ಅಂದಾಜು ವೆಚ್ಚ. | 56,000–00 |
| 2 | ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಹಾಗೂ ಆಹ್ವಾನ ಪತ್ರಗಳನ್ನು ಮುದ್ರಿಸಿಕೊಡಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ. | 15,000–00 |
| 3 | ಕ್ರೀಡೆಗಳು ನಡೆಯುವ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಪ್ರಥಮ ಚಿಕಿತ್ಸಾ ಉಪಕರಣಗಳನ್ನು ಔಷಧಿಗಳು, ಗ್ಲೂಕೋಸ್ ಪುಡಿಗಳಿಗೆ ತಗಲುವ ಮೊತ್ತವನ್ನು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 5,000–00 |
| 4 | ಕ್ರೀಡೆಗಳನ್ನು ನಡೆಸಲು ಮೈದಾನಗಳನ್ನು ಗುರುತು ಮಾಡಲು ರಂಗೋಲೆ ಪುಡಿಯನ್ನು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 10,000–00 |
| 5 | ಕ್ರೀಡೆಗಳು ನಡೆಯುವ ಸಮಯದಲ್ಲಿ ಛಾಯ ಚಿತ್ರಗಳನ್ನು ತೆಗೆಯಲು ಮತ್ತು ಆಲ್ಬಂ ಖರೀದಿಸಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 10,000–00 |

| | | |
|---|---|---|
| 6 | ಕ್ರೀಡೆಗಳು ನಡೆಯುವ ಸಮಯದಲ್ಲಿ ಶಾಮಿಯಾನ, ಖುರ್ಚಿಗಳು, ಧ್ವನಿವರ್ಧಕ, ಕಾರ್ಡ್‌ಲೇಸ್ ಪೋನ್, ಟೇಬಲ್ ಮತ್ತು ಟೇಬಲ್ ಕ್ಲಾತ್ ಹಾಗೂ ಬ್ಯಾಟರಿಗಳನ್ನು ಬಾಡಿಗೆಗೆ ಪಡೆಯಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಈ ಮೂಲಕ ಕಾರ್ಯಕೈಗೊಳ್ಳಲು (ಒಟ್ಟು 5 ದಿವಸಗಳಿಗೆ) ತಗಲುವ ಅಂದಾಜು ವೆಚ್ಚ. | 95,000–00 |
| 7 | ಆಟೋಟಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಪಾರಿತೋಷಕ ಹಾಗೂ ಪದಕಗಳನ್ನು ಖರೀದಿಸಲು ಪ್ರತಿಷ್ಠಿತ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ತಗಲುವ ಅಂದಾಜು ವೆಚ್ಚ. | 42,000–00 |
| 8 | ಕ್ರೀಡೆಗಳನ್ನು ನಡೆಸಲು ಕ್ರೀಡಾ ಸಾಮಗ್ರಿಗಳಾದ ಥ್ರೋಬಾಲ್, ಥ್ರೋಬಾಲ್ ನೆಟ್, ವಾಲಿಬಾಲ್, ವಾಲಿಬಾಲ್ ನೆಟ್, ಖೋ–ಖೋ(2 ಜೊತೆ) ಕಂಬಗಳು, ವಾಲಿಬಾಲ್ (2 ಜೊತೆ) ಕಂಬಗಳು ಅಳತೆ ಟೇಪು, ರಿಲೆ ಬ್ಯಾಟ್‌ಗಳು, ವಿಕ್ಟರಿ ಸ್ಟ್ಯಾಂಡ್ ಮತ್ತು ಸ್ಕೋರ್ ಪುಸ್ತಕಗಳನ್ನು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 35,000–00 |
| 9 | ಕ್ರೀಡೆಗಳನ್ನು ನಡೆಸಿ ಕೊಡುವ 38 ತೀರ್ಪುದಾರರಿಗೆ ತಲಾ ಒಬ್ಬರಿಗೆ ಉತ್ತಮ ಗುಣಮಟ್ಟದ ಒಂದು ಟೀ ಶರ್ಟ್ ಮತ್ತು ಒಂದು ಟೋಪಿ ಖರೀದಿಸಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿ, ಖರೀದಿಸಲು ತಗಲುವ ಅಂದಾಜು ವೆಚ್ಚ. | 20,000–00 |
| | **ಒಟ್ಟು ಮೊತ್ತ ರೂ.** | **2,88,000–00** |

ಮೇಲೆ ನಮೂದಿಸಿರುವ ಮೊತ್ತದಲ್ಲಿ ಮೇಲ್ಕಂಡ ಕಾರ್ಯಕ್ರಮಗಳನ್ನು ಕಾರ್ಯಕ್ರಮದ ಘೋಷ್ವಾರೆ (1) ಕ್ರ.ಸಂ. 1 ರಿಂದ 8 ರವರೆಗೆ ಮತ್ತು ಘೋಷ್ವಾರೆ (2)ರಲ್ಲಿ ಕ್ರ.ಸಂ. 1 ರಿಂದ 9 ರವರೆಗೆ ಸೂಚಿಸಿರುವ ಅಂಶಗಳ ಆಧಾರದ ಮೇರೆ, **"ಮೆರವಣಿಗೆ ಮತ್ತು ಕ್ರೀಡೆಗಳು"** ನಡೆಯುವ ಕಾರ್ಯಕ್ರಮಕ್ಕೆ ಸಮಗ್ರ ಮೊತ್ತ ರೂ.9,94,965/–ಗಳು ವೆಚ್ಚವಾಗುವ ಸಂಭವವಿರುವುದರಿಂದ, ಸದರಿ ಅಂದಾಜು ವೆಚ್ಚವನ್ನು **ಆಯ–ವ್ಯಯದ ಪುಸ್ತಕದ ಪುಟದ ಸಂಖ್ಯೆ:165 "24"** ಸಂಸ್ಕೃತಿ ಮತ್ತು ಕ್ರೀಡೆಗಳಲ್ಲಿ **"ಮೆರವಣಿಗೆ ಮತ್ತು ಕ್ರೀಡೆಗಳು"** ವರ್ಕ್ ಕೋಡ್ ಔ267ರಲ್ಲಿ **ನಿಗದಿಗೊಳಿಸಿರುವ ಮೊತ್ತ ರೂ.10.00ಲಕ್ಷಗಳಲ್ಲಿ** ಮೇಲ್ಕಂಡ ವೆಚ್ಚವನ್ನು ಭರಿಸಬಹುದಾಗಿರುತ್ತದೆ. ಸದರಿ ಕಾರ್ಯಕ್ರಮಗಳ ಘೋಷ್ವಾರೆ (1)ರಲ್ಲಿನ ಮೊತ್ತ ರೂ.7,05,875/–ಗಳನ್ನು ಮುಂಗಡ ಹಣ ಮಂಜೂರು ಮಾಡಲು ಹಾಗೂ ಘೋಷ್ವಾರೆ (2)ರಲ್ಲಿನ ಕಾರ್ಯಕ್ರಮಗಳನ್ನು ಪ್ರತ್ಯೇಕ ವೆಚ್ಚಗಳಿಗೆ ಅನುಗುಣವಾಗಿ ಪ್ರತಿಷ್ಠಿತ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ತಗಲುವ ವೆಚ್ಚ ರೂ.2,88,000/–ಗಳನ್ನು ಮಂಜೂರು ಮಾಡಲು ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ದಿನಾಂಕ:29.10.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ. ಮುಂದುವರಿದು ಸಂಬಂಧಪಟ್ಟ ಇಲಾಖೆಯು ನಿಯಮಾನುಸಾರ ಕ್ರಮವಹಿಸಲು ಸಮಿತಿಯು ತೀರ್ಮಾನಿಸಿತು.**

ಅಧ್ಯಕ್ಷರ ಅಪ್ಪಣೆ ಮೇರೆಗೆ, ಇತರೇ ವಿಷಯಗಳ ಬಗ್ಗೆ ಚರ್ಚೆಯಲ್ಲಿ, ಶಿಕ್ಷಣಾಧಿಕಾರಿಯವರು ದಿನಾಂಕ:28.11.2011ರಿಂದ 02.12.2011ರವರೆಗೆ ಎಲ್ಲಾ ಪ್ರೌಢ ಶಾಲಾ ಮಕ್ಕಳಿಗೆ ಕ್ರೀಡಾ ಮೇಳವನ್ನು ಆಯೋಜಿಸಲಾಗಿದ್ದು, ಈ ಮೇಳವನ್ನು ಯಶಸ್ವಿಯಾಗಿ ನಡೆಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ಸಭೆಗೆ ವಿವರಿಸಿದ್ದು, ಸಭೆಯಲ್ಲಿ ಹಾಜರಿದ್ದ ಮಾನ್ಯ ಎಲ್ಲಾ ಸದಸ್ಯರು

*ತಮ್ಮ ತಮ್ಮ ಸಲಹೆಗಳನ್ನು ನೀಡಿದ್ದು ಮಾನ್ಯ ಸದಸ್ಯರಾದ ಶ್ರೀ.ಟಿ.ತಿಮ್ಮೇ ಗೌಡ ರವರು ಮಾತನಾಡುತ್ತಾ, ಮಕ್ಕಳಲ್ಲಿ ಕ್ರೀಡಾ ಮನೋಭಾವ ಹೆಚ್ಚಿಸುವ ಹಾಗೂ ಕ್ರೀಡೆಗಳನ್ನು ಪ್ರೋತ್ಸಾಹಿಸುವ ಇಂತಹ ಕ್ರೀಡಾ ಸ್ಪರ್ಧೆ ಹಾಗೂ ಮೇಳವನ್ನು ನಡೆಸುತ್ತಿರುವುದು ನಿಜಕ್ಕೂ ಉತ್ತಮ ಬೆಳವಣಿಗೆಯಾಗಿದ್ದು, ಅದ್ದರಿಂದ ಹಾಲಿ ನೀವುಗಳು ಮೇಳ ನಡೆಸುತ್ತಿರುವುದು ನಿಜಕ್ಕೂ ಒಳ್ಳೆಯದು. ಆದರೆ, ಈ ಮೇಳವನ್ನು ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ ಶಿಸ್ತುಬದ್ಧವಾಗಿ ನಡೆಸಿ, ಇದಕ್ಕೂ ಎಲ್ಲಾ ದೈಹಿಕ ಶಿಕ್ಷಕರುಗಳನ್ನು ಶಾಲೆಯ ಮುಖ್ಯೋಪಾಧ್ಯಾಯರುಗಳ ಸಹಕಾರದಿಂದ ಅವರುಗಳಿಗೂ ಸಹ ಹೊಣೆಗಾರಿಕೆಯನ್ನು ನೀಡಿ ಹಾಗೂ ಯಾವುದೇ ಕಾರಣಕ್ಕೂ ಶಿಷ್ಟಾಚಾರದ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು. ಈ ಮೇಳಕ್ಕೆ ಪೂಜ್ಯ ಮಹಾಪೌರರನ್ನು, ಉಪ ಮಹಾಪೌರರವರನ್ನು, ಆಯುಕ್ತರವರನ್ನು, ಆಡಳಿತ ಪಕ್ಷದ ನಾಯಕರನ್ನು, ವಿರೋಧ ಪಕ್ಷದ ನಾಯಕರನ್ನು, ಜೆ.ಡಿ.ಎಸ್. ಪಕ್ಷದ ನಾಯಕರನ್ನು, ಎಲ್ಲಾ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರುಗಳನ್ನು, ಶಿಕ್ಷಣ ಸ್ಥಾಯಿ ಸಮಿತಿಯ, ಎಲ್ಲಾ ಸದಸ್ಯರುಗಳನ್ನು, ಈ ಮೇಳದಲ್ಲಿ ಭಾಗವಹಿಸುವಂತೆ ಆಹ್ವಾನವನ್ನು ನೀಡುವುದು, ಇವರೊಂದಿಗೆ ಪ್ರಮುಖವಾಗಿ ಸ್ಥಳೀಯ ಮಹಾನಗರ ಪಾಲಿಕೆ ಸದಸ್ಯರನ್ನು ಹಾಗೂ ಮಾನ್ಯ ವಿಧಾನಸಭಾ ಸದಸ್ಯರ ನೇತೃತ್ವದಲ್ಲಿ ನಡೆಸುವುದು, ಮೇಳವನ್ನು ಅಚ್ಚುಕಟ್ಟಾಗಿ ಯಾವುದೇಗೊಂದಲಕ್ಕೂ ಅವಕಾಶ ನೀಡದಂತೆ, ಎಲ್ಲರ ಮೆಚ್ಚುಗೆಗೆ ಪಾತ್ರವಾಗುವಂತೆ, ಉತ್ತಮ ರೀತಿಯಲ್ಲಿ ನಡೆಸುವಂತೆ, ಸಮಿತಿಯ ಒಟ್ಟಾರೆ ಅಭಿಪ್ರಾಯವಾಗಿರುತ್ತದೆ. ಕ್ರೀಡೆಗಳಲ್ಲಿ ಭಾಗವಹಿಸುವ ಮಕ್ಕಳಿಗೆ ಹಾಗೂ ಸಮಾರಂಭಕ್ಕೆ ಆಗಮಿಸುವ ಮಕ್ಕಳಿಗೆ ಊಟದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ವೈದ್ಯಕೀಯ ವ್ಯವಸ್ಥೆಗಳನ್ನು ಮಾಡುವುದು, ಸಮಾರೋಪ ಸಮಾರಂಭವನ್ನು ಬಹಳ ಅಚ್ಚುಕಟ್ಟಾಗಿ ನಡೆಸುವುದು, ಇದಕ್ಕೆ ಸಂಬಂಧಪಟ್ಟಂತೆ, ಮತ್ತೊಮ್ಮೆ ಚರ್ಚಿಸುವ ಅಗತ್ಯವಿದ್ದು ದಿನಾಂಕ:16.11.2011ರಂದು ಸಭೆಯನ್ನು ಕರೆಯಲು ತೀರ್ಮಾನಿಸಿದ್ದು, ಆ ದಿನದ ಸಭೆಗೆ ಎಲ್ಲಾ ದೈಹಿಕ ಶಿಕ್ಷಕರುಗಳು ಹಾಗೂ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು ಇವರುಗಳ ಹಾಜರಾಗುವಂತೆ, ಸೂಚಿಸುವಂತೆ, ಸಭೆಯಲ್ಲಿ ಹಾಜರಿದ್ದ ಶಿಕ್ಷಣಾಧಿಕಾರಿಯವರಿಗೆ ತಿಳಿಸಲಾಯ್ತು.*

*ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.*

*ಅಧ್ಯಕ್ಷರು,*
*ಶಿಕ್ಷಣ ಸ್ಥಾಯಿ ಸಮಿತಿ,*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:16.11.2011ರಂದು ಬೆಳಿಗ್ಗೆ 11.00 ಘಂಟೆಗೆ ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಅಪರ ಆಯುಕ್ತರು(ಕಲ್ಯಾಣ ಮತ್ತು ಆಸ್ತಿಗಳು) |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿಗಳು |
| ಶ್ರೀ.ಕೆ.ರವೀಂದ್ರನ್ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಡಾ: ನಾಜಿನಿ ಬೇಗಂ – ಸದಸ್ಯರು | ಪ್ರಾಂಶುಪಾಲರು |
| ಶ್ರೀಮತಿ.ಎಂ.ಶಕೀಲ – ಸದಸ್ಯರು | ಮುಖ್ಯೋಪಾಧ್ಯಾಯರು |
| ಶ್ರೀಮತಿ.ಕೆ.ಪೂರ್ಣಿಮ – ಸದಸ್ಯರು | ದೈಹಿಕ ಶಿಕ್ಷಕರು |
| ಶ್ರೀಮತಿ.ದೇವಿಕಾರಾಣಿ ಶ್ರೀಧರ್ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು.

ಈ ಸಭೆಯು ದಿನಾಂಕ:11.11.2011ರ ಮುಂದುವರೆದ ಸಭೆಯಾಗಿದ್ದು, ಆ ದಿನದ ಸಭೆಗೆ ದೈಹಿಕ ಶಿಕ್ಷಕರು, ಮುಖ್ಯೋಪಾಧ್ಯಾಯರು ಹಾಗೂ ಪ್ರಾಂಶುಪಾಲರು ಹಾಜರಾಗದ ಕಾರಣ, ಕ್ರೀಡಾ ಕೂಟ ಹಾಗೂ ಮಕ್ಕಳ ಮೇಳವನ್ನು ಬಹಳ ಅಚ್ಚುಕಟ್ಟಾಗಿ ನಡೆಸಬೇಕೆಂಬ ಉದ್ದೇಶದಿಂದ ಇದರಲ್ಲಿ ಎಲ್ಲಾ ಶಿಕ್ಷಕರು, ದೈಹಿಕ ಶಿಕ್ಷಕರು, ಮುಖ್ಯೋಪಾಧ್ಯಾಯರುಗಳು ಹಾಗೂ ಪ್ರಾಂಶುಪಾಲರವರುಗಳು ಸಕ್ರಿಯ ಭಾಗವಹಿಸಬೇಕೆಂಬ ಉದ್ದೇಶದಿಂದ ಹಾಗೂ ಎಲ್ಲರಿಗೂ ಜವಾಬ್ದಾರಿಯನ್ನು ವಹಿಸಬೇಕೆಂಬ ಉದ್ದೇಶ ಹಾಗೂ ಕಾರ್ಯಕ್ರಮವನ್ನು ಯಾವ ರೀತಿಯಲ್ಲಿ ನಡೆಸಬೇಕು ಇದರ ಬಗ್ಗೆ ಎಲ್ಲರ ಅಭಿಪ್ರಾಯ ಯಾರು ಯಾವ ಕರ್ತವ್ಯ ವಹಿಸಬೇಕು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶಿಕ್ಷಣಾಧಿಕಾರಿಯವರು, ದೈಹಿಕ ಶಿಕ್ಷಣಾಧಿಕಾರಿ, ಸಹಾಯಕ ಶಿಕ್ಷಣಾಧಿಕಾರಿಯವರು ತಮ್ಮ ತಮ್ಮ ಅಭಿಪ್ರಾಯ ಸಲಹೆಗಳನ್ನು ನೀಡಿದ್ದು, ಈ ಸಮಾರಂಭಕ್ಕೆ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸುವ, ಪ್ರಶಸ್ತಿಗಳನ್ನು ಖರೀದಿಸಿ, ಯಾವ ಯಾವ ಕ್ರೀಡೆಗಳಿಗೆ ಪ್ರಶಸ್ತಿ/ಮೊತ್ತ,

ಫಲಕ, ಮೆಡಲ್ ಇತ್ಯಾಧಿಗಳ ಬಗ್ಗೆ ಮಾನ್ಯ ಸಮಿತಿ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ನೀಡಿದ್ದು, ಆಟೋಟ ಸ್ಪರ್ಧೆಯಲ್ಲಿ ಭಾಗವಹಿಸುವ ಮಕ್ಕಳಿಗೆ ಕ್ರೀಡೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ, ಉತ್ತಮ ಗುಣಮಟ್ಟದ ಪ್ರಶಸ್ತಿ ಫಲಕ, ಟ್ರೋಫಿ, ಮೆಡಲ್, ಕ್ರೀಡೆಗಳ ದರ್ಜೆಗೆ ಅನುಗುಣ ನೀಡುವುದೆಂದು ತೀರ್ಮಾನಿಸಲಾಯ್ತು. ಈಗಾಗಲೇ ಸಮಿತಿಯು ದಿನಾಂಕ:11.11.2011ರ ಸಭೆಯಲ್ಲಿ ಈ ಕ್ರೀಡಾ ಕೂಟಕ್ಕೆ ಹಾಗೂ ಮಕ್ಕಳ ಮೇಳಕ್ಕೆ ತಗಲುವ ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ. ಅದರಂತೆ, ಸಮಾರಂಭವನ್ನು ಉತ್ತಮ ರೀತಿಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ, ಶಿಸ್ತುಬದ್ಧವಾಗಿ ನಡೆಸುವುದೆಂದು ಸಮಿತಿಯ ಸದಸ್ಯರೆಲ್ಲರೂ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಲು ಕೋರಲಾಯ್ತು ಹಾಗೂ ಮೇಳಕ್ಕೆ ಆಗಮಿಸುವ ಮಕ್ಕಳಿಗೆ ವಾಹನ ವ್ಯವಸ್ಥೆ ಊಟ, ತಿಂಡಿ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆಗಳನ್ನು ಮಕ್ಕಳಿಗೆ ತೊಂದರೆಯಾಗದಂತೆ, ನೋಡಿಕೊಳ್ಳವುದು, ಒಟ್ಟಾರೆ ಸಮಾರಂಭವನ್ನು ಚೆನ್ನಾಗಿ ನಡೆಸುವಂತೆ ಇಲಾಖೆ ಅಧಿಕಾರಿಗೆಳಿಗೆ ಸೂಚಿಸಲಾಯ್ತು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ದಿನಾಂಕ:21.12.2011ರಂದು ಬೆಳಿಗ್ಗೆ 11.00 ಘಂಟೆಗೆ ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು. |
|---|---|
| ಶ್ರೀ.ಕೆ.ರಮೇಶ್ ರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು ಹಾಗೂ ಜಂಟಿ ಆಯುಕ್ತರು(ಕಲ್ಯಾಣ ಮತ್ತು ಆಸ್ತಿಗಳು) |
| ಶ್ರೀಮತಿ.ಚೇತನಾ ಗೌಡ – ಸದಸ್ಯರು | ಶಿಕ್ಷಣಾಧಿಕಾರಿ |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಶ್ರೀಮತಿ.ಸವಿತಾ ರಮೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿ |
| ಡಾ: ನಾಜಿನಿ ಬೇಗಂ – ಸದಸ್ಯರು | |
| **ಖಾಲಿ** | |
| **ಖಾಲಿ** | |
| **ಖಾಲಿ** | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |

ಸಭೆಯು ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು.

**ವಿಷಯದ ಸಂಖ್ಯೆ:– ಶಿ.ಸ್ಥಾ.ಸ/14/11–12**

ವಿಷಯ: ವಾರ್ಡ್–127ರ ಮೂಡಲಪಾಳ್ಯ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಹೊಸದಾಗಿ ಶಿಶುವಿಹಾರ ಪ್ರಾರಂಭಿಸುವ ಕುರಿತು.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(4ಎ)ಪಿಆರ್/137/11–12, ದಿನಾಂಕ:16.11.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ.ಎನ್.ಶಾಂತಕುಮಾರಿ, ಮಾನ್ಯ ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್–127, ಮೂಡಲಪಾಳ್ಯ ರವರು ವಿಳಾಸ ಮಾಡಿರುವ ಪತ್ರದಲ್ಲಿ ವಾರ್ಡ್–127ರ ಮೂಡಲಪಾಳ್ಯ ವ್ಯಾಪ್ತಿಗೆ ಸೇರುವ ಬೈರವೇಶ್ವರನಗರ, ಕಲ್ಯಾಣನಗರ ಮತ್ತು ಪಂಚಶೀಲನಗರಗಳಲ್ಲಿ ಬಡವರು, ಕೂಲಿ ಕಾರ್ಮಿಕರು ಹೆಚ್ಚಾಗಿ ವಾಸಿಸುತ್ತಿದ್ದು, ಜೀವನ ನಿರ್ವಹಣೆ ನಿಮಿತ್ತ, ಕೆಲಸ ಕಾರ್ಯಗಳಿಗೆ ಹೋಗಬೇಕಾಗುವುದು ಅನಿವಾರ್ಯವಾಗಿದ್ದು, ಈ ಸಮಯದಲ್ಲಿ ಮಕ್ಕಳನ್ನು ಮನೆಯಲ್ಲೇ ಬಿಟ್ಟು ಹೋಗುತ್ತಿದ್ದು, ಸದರಿ, ಮಕ್ಕಳನ್ನು ನೋಡಿಕೊಳ್ಳುವವರು ಯಾರು ಇಲ್ಲದ ಕಾರಣ, ಈ ಮಕ್ಕಳು ರಸ್ತೆಯಲ್ಲಿ, ಮೈದಾನದಲ್ಲಿ ಆಟವಾಡುವುದು, ಓಡಾಡುವುದು ಸಾಮಾನ್ಯವಾಗಿರುತ್ತದೆ. ಮಕ್ಕಳು ಹೀಗೆ ಎಲ್ಲೆಂದರಲ್ಲಿ ಓಡಾಡುವುದರಿಂದ, ಅನಾಹುತಗಳು ಸಂಭವಿಸುವುದು ಖಚಿತವಾಗಿರುತ್ತದೆ.

ಆದ್ದರಿಂದ, ಇಂತಹ ಮಕ್ಕಳನ್ನು ಶಿಶುವಿಹಾರದಲ್ಲಿ ಲಾಲನೆ/ಪಾಲನೆ ಮಾಡಲು ಬಿಟ್ಟು ಹೋಗುವುದರಿಂದ, ಮಕ್ಕಳಿಗೂ ಹಾಗೂ ಪೋಷಕರಿಗೂ ಅನುಕೂಲವಾಗಿರುತ್ತದೆ. ಆದ್ದರಿಂದ, ಈ ಪ್ರದೇಶ ವ್ಯಾಪ್ತಿಯ ಬೈರವೇಶ್ವರನಗರ, ಕಲ್ಯಾಣನಗರ ಮತ್ತು ಪಂಚಶೀಲನಗರಗಳಲ್ಲಿ ಶಿಶುವಿಹಾರ ಕೇಂದ್ರಗಳನ್ನು ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಪತ್ರಕ್ಕೆ ಅನುಗುಣವಾಗಿ, ಕೂಡಲೇ ಪ್ರಕ್ರಿಯೆ ಪ್ರಾರಂಭ ಮಾಡಬೇಕಿರುವ, ಹಿನ್ನೆಲೆಯಲ್ಲಿ ಬಿ.ಬಿ.ಎಂ.ಪಿ. ವಾರ್ಡ್–127, ಮೂಡಲಪಾಳ್ಯ ರವರು ವಿಳಾಸ ಮಾಡಿರುವ ಪತ್ರದಲ್ಲಿ ವಾರ್ಡ್–127ರ ಮೂಡಲಪಾಳ್ಯ ವ್ಯಾಪ್ತಿಗೆ ಸೇರುವ ಬೈರವೇಶ್ವರನಗರ, ಕಲ್ಯಾಣನಗರ ಮತ್ತು ಪಂಚಶೀಲನಗರಗಳಲ್ಲಿ

**ನಿರ್ಣಯ: ದಿನಾಂಕ:16.11.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**ವಿಷಯದ ಸಂಖ್ಯೆ:– ಶಿ.ಸ್ಥಾ.ಸ/15/11–12**

ವಿಷಯ: 2011–12ನೇ ಸಾಲಿಗೆ ಬೃ.ಬೆ.ಮ.ಪಾ. ವ್ಯಾಪ್ತಿಯ ಆಟದ ಮೈದಾನ/ ಉದ್ಯಾನವನಗಳಲ್ಲಿ ಹೊಸದಾಗಿ ತಯಾರಿಸಿದ ಮಕ್ಕಳ ಆಟದ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕುರಿತು, "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸುವುದರ ಕುರಿತು.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ಎಸ್.ಪಿ/ಪಿಆರ್/55/11–12, ದಿನಾಂಕ:22.11.2011ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2011–12ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಆಟದ ಮೈದಾನ/ಉದ್ಯಾನವನಗಳಲ್ಲಿ ಹೊಸದಾಗಿ ತಯಾರಿಸಿದ ಮಕ್ಕಳ ಆಟದ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಬಗ್ಗೆ, ನಗರ ಪಾಲಿಕೆ ಸದಸ್ಯರು, ವಿಧಾನಸಭಾ ಸದಸ್ಯರು ಹಾಗೂ ಸ್ಥಳೀಯ ನಾಗರೀಕರು, ಅಪರ ಆಯುಕ್ತರು(ಕಲ್ಯಾಣ)ರವರಿಗೆ ದೂರವಾಣಿ ಕರೆ ಮೂಲಕ ತಮ್ಮ ಬೇಡಿಕೆಗಳನ್ನು ಸಲ್ಲಿಸಿತ್ತಿದ್ದು, ಸ್ಥಳೀಯ ನಾಗರೀಕರ ಮಕ್ಕಳು ಹಾಗೂ ಶಾಲಾ ಮಕ್ಕಳ ಹಿತದೃಷ್ಟಿಯಿಂದ ಬಿಡುವಿನ ವೇಳೆಯಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯಾನವನಗಳಿಗೆ ಆಟವಾಡಲು ಬರುತ್ತಿರುವುದರಿಂದ, ತುರ್ತಾಗಿ ಮಕ್ಕಳ ಆಟದ ಉಪಕರಣಗಳನ್ನು ಅಳವಡಿಸಬೇಕೆಂದು ದೂರನ್ನು ನೀಡಿರುತ್ತಾರೆ.

ಮಾನ್ಯ ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ ಹಾಗೂ ಸದಸ್ಯರು ರವರ ಕೋರಿಕೆ ಮೇರೆಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ವಾರ್ಡುಗಳಲ್ಲಿನ ಉದ್ಯಾನವನಗಳು ಹಾಗೂ ಆಟದ ಮೈದಾನಗಳನ್ನು ತಪಾಸಣೆ ಮಾಡಿ ಪಟ್ಟಿ ಸಿದ್ಧಪಡಿಸಿ ಕಡತದಲ್ಲಿ ಲಗತ್ತಿಸಿದೆ.

11–12ನೇ ಸಾಲಿಗೆ ಸದರಿ ಕಾರ್ಯಕ್ಕೆ ಅಂಗೀಕೃತ ಆಯವ್ಯಯ ಪುಸ್ತಕದಲ್ಲಿ 24 ಸಂಸ್ಕೃತಿ ಮತ್ತು ಕ್ರೀಡೆ, ಆಡಳಿತ ವೆಚ್ಚಗಳು, ಕ್ರೀಡಾಭಿವೃದ್ಧಿ ಚಟುವಟಿಕೆಗಳು, ಮಕ್ಕಳ ಆಟೋಪಕರಣಗಳ ಖರೀದಿ ಶೀರ್ಷಿಕೆಯಡಿ, ಸದರಿ, ಕಾರ್ಯಕ್ಕೆ ರೂ.250.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ (ವರ್ಕ್ ಕೋಡ್ ಸಂಖ್ಯೆ:251) ಮೇಲೆ ಸೂಚಿಸಿರುವ ಅಂಶಗಳ ಆಧಾರದ ಮೇಲೆ ಕರ್ನಾಟಕ ಪಾರದರ್ಶಕ ಕಾಯ್ದೆ ನಿಯಮಾವಳಿ ರೀತ್ಯ, ಸದರಿ ಕಾರ್ಯದಲ್ಲಿ ಪರಿಣಿತಿ ಹೊಂದಿರುವ ಕರ್ನಾಟಕದಲ್ಲಿ ನೋಂದಾಯಿತ ಪ್ರತಿಷ್ಟಿತ ತಯಾರಿಕಾ ಘಟಕ ಹೊಂದಿರುವುದರಿಂದ, ಮಾತ್ರ "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸುವುದರ ಮೂಲಕ ಕಾರ್ಯ ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

*ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ಹಾಗೂ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ:* ದಿನಾಂಕ:22.11.2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

*ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.*

*ಅಧ್ಯಕ್ಷರು,*
*ಶಿಕ್ಷಣ ಸ್ಥಾಯಿ ಸಮಿತಿ,*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:04.01.2012ರಂದು ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಕೆಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀ. ಕೆ.ರಮೇಶ್ ರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು ಹಾಗೂ ಜಂಟಿ ಆಯುಕ್ತರು(ಕಲ್ಯಾಣ ಮತ್ತು ಶಿಕ್ಷಣ) |
| ಶ್ರೀ. ಚೇತನಾ ಗೌಡ – ಸದಸ್ಯರು | ಕಾರ್ಯಪಾಲಕ ಅಭಿಯಂತರರು-ಪ್ರಾಜೆಕ್ಟ್ (ಪೂರ್ವ/ಪಶ್ಚಿಮ ಮತ್ತು ದಕ್ಷಿಣ) |
| ಶ್ರೀ. ರವೀಂದ್ರನ್ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು – ಪ್ರಾಜೆಕ್ಟ್ |
| ಶ್ರೀಮತಿ. ಸವಿತಾ ರಮೇಶ್ – ಸದಸ್ಯರು | ಶಿಕ್ಷಣಾಧಿಕಾರಿಗಳು |
| ಶ್ರೀ.ಎಂ.ವೆಂಕಟೇಶ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಶ್ರೀ.ವಿ.ಕೃಷ್ಣ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿಗಳು |
| ಶ್ರೀಮತಿ. ಪೂರ್ಣಿಮ – ಸದಸ್ಯರು | |
| ಶ್ರೀಮತಿ. ಗಂಗಾಂಬಿಕೆ – ಸದಸ್ಯರು | |
| ಶ್ರೀಮತಿ.ಕವಿತಾ ಬಾಬುರಾಜ್ – ಸದಸ್ಯರು | |
| ಡಾ: ನಾಜಿನಿ ಬೇಗಂ – ಸದಸ್ಯರು | |
| ಶ್ರೀ.ಟಿ.ತಿಮ್ಮೇಗೌಡ – ಸದಸ್ಯರು | |

ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು.

ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಮಾನ್ಯ ಅಧ್ಯಕ್ಷರು ಸಭೆಗೆ ಸ್ವಾಗತ್ತಿಸುತ್ತಾ, ಈ ದಿನದ ಸಭೆಯನ್ನು ಮುಖ್ಯವಾಗಿ ಬಿ.ಬಿ.ಎಂ.ಪಿ ಶಾಲಾ/ಕಾಲೇಜು ಕಟ್ಟಡಗಳನ್ನು ದುರಸ್ತಿ ಹಾಗೂ ನಿರ್ವಹಣೆ, ಹೊಸದಾಗಿ ಕಟ್ಟಡ ನಿರ್ಮಾಣ, ಮೂಲಭೂತ ಸೌಲಭ್ಯ ಒದಗಿಸುವ ಹಾಗೂ ಆಟದ ಮೈದಾನಗಳ ಹಾಗೂ ಕ್ರೀಡಾಂಗಣಗಳ ಅಭಿವೃದ್ಧಿ ಮತ್ತು ದುರಸ್ತಿ ಕುರಿತಂತೆ ಚರ್ಚಿಸಲು ಎಲ್ಲಾ ಕಾರ್ಯಪಾಲಕ ಅಭಿಯಂತರರು-ಪ್ರಾಜೆಕ್ಟ್(ಪೂರ್ವ/ಪಶ್ಚಿಮ ಹಾಗೂ ದಕ್ಷಿಣ) ಇವರುಗಳಿಗೆ ಸಭೆಯನ್ನು ಕರೆಯಲಾಗಿದ್ದು, ಪ್ರಮುಖವಾಗಿ 2011-12ನೇ ಸಾಲಿನ ಆಯವ್ಯಯದಲ್ಲಿ ಶಿಕ್ಷಣ ಅಭಿವೃದ್ಧಿಗೆ ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ಪ್ರಾಜೆಕ್ಟ್ ವಿಭಾಗದ ಪಾತ್ರ ಹಾಗೂ ಕಾರ್ಯಕ್ರಮ ಪಟ್ಟಿ ತಯಾರಿಸಿ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ನಡೆದ ಸಭೆಯಲ್ಲಿ ಹಾಜರಿದ್ದ ಕಾರ್ಯಪಾಲಕ ಅಭಿಯಂತರರುಗಳು ಅವರುಗಳ ವ್ಯಾಪ್ತಿಯಲ್ಲಿ ಹೊಸದಾಗಿ ಅಭಿವೃದ್ಧಿ ಪಡಿಸಬೇಕಾದ ಆಟದ ಮೈದಾನ ಹಾಗೂ ಕ್ರೀಡಾಂಗಣದ ಬಗ್ಗೆ ಸರ್ವೆ

ಕಾರ್ಯ ನಡೆಸಿ ಕಾಮಗಾರಿಗಳ ಬಗ್ಗೆ ಕ್ರಿಯಾ ಯೋಜನೆ ಸಿದ್ಧಪಡಿಸಿ ಟೆಂಡರ್ ಕರೆದು ಸ್ಥಾಯಿ ಸಮಿತಿ ಅನುಮೋದನೆಗಾಗಿ ಮಂಡಿಸಲು ಸೂಚಿಸಲಾಯ್ತು.

ಅದರಂತೆ, ಪ್ರತಿಯೊಬ್ಬ ಕಾರ್ಯಪಾಲಕ ಅಭಿಯಂತರರುಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲಾ/ಕಾಲೇಜು ಕಟ್ಟಡಗಳಿಗೆ ಭೇಟಿ ನೀಡಿ, ಶೌಚಾಲಯ ಕುಡಿಯುವ ನೀರು, ಸ್ವಚ್ಛತಾ ಹಾಗು ಅಗತ್ಯವಿರುವ ದುರಸ್ತಿ ಬಗ್ಗೆ ಗಮನಹರಿಸಲು ಸೂಚಿಸಲಾಗಿದ್ದು, ಈ ಬಗ್ಗೆ ಪಟ್ಟಿಯನ್ನು ತಯಾರಿಸಿ ವೈಯಕ್ತಿಕ ಗಮನ ಹರಿಸಲು ತಿಳಿಸಲಾಯ್ತು. ಮುಂದಿನ ಸಭೆಗೆ ಎಲ್ಲಾ ಮಾಹಿತಿಗಳನ್ನು ನೀಡುವುದಾಗಿ ಕಾರ್ಯಪಾಲಕ ಅಭಿಯಂತರರುಗಳು ಸಭೆಗೆ ತಿಳಿಸಿರುತ್ತಾರೆ ಹಾಗೂ ಅವರುಗಳ ವ್ಯಾಪ್ತಿಯಲ್ಲಿ ಬರುವ ಆಟದ ಮೈದಾನಗಳ ಹಾಗೂ ಕ್ರೀಡಾಂಗಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಲು ಸೂಚಿಸಲಾಗಿದ್ದು, ಆದ್ಯತೆ ಮೇರೆಗೆ, ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ, ಸೂಚಿಸಲಾಗಿದ್ದು, ಇದಕ್ಕೆ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುವಂತೆ, ತಿಳಿಸಲಾಗಿದ್ದು ಹಾಗೂ ಮೂಲಭೂತ ಸೌಕರ್ಯಗಳ ಬಗ್ಗೆ, ಪಟ್ಟಿ ತಯಾರಿಸಿ, ಇದನ್ನು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರವರುಗಳಿಗೆ ತಪ್ಪದೇ ಕಳುಹಿಸುವುದು ಹಾಗೂ ಕಾಲ ಕಾಲಕ್ಕೆ ಅವರಿಗೆ ಅಗತ್ಯವಿರುವ ಎಲ್ಲಾ ಸಹಕಾರ ನೀಡುವುದು.

ಮೇಲ್ಕಂಡ ಚರ್ಚೆಯನ್ನು ಪೂರ್ಣಗೊಳಿಸಿ, ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯ್ತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:01.02.2012ರಂದು ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಕೆಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀ. ಕೆ.ರಮೇಶ್ ರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು ಹಾಗೂ ಜಂಟಿ ಆಯುಕ್ತರು(ಕಲ್ಯಾಣ ಮತ್ತು ಶಿಕ್ಷಣ) |
| ಶ್ರೀಮತಿ. ಚೇತನಾ ಗೌಡ – ಸದಸ್ಯರು | ಕಾರ್ಯಪಾಲಕ ಅಭಿಯಂತರರು-ಪ್ರಾಜೆಕ್ಟ್ (ಪೂರ್ವ/ಪಶ್ಚಿಮ ಮತ್ತು ದಕ್ಷಿಣ) |
| ಶ್ರೀ. ರವೀಂದ್ರನ್ – ಸದಸ್ಯರು | ಶಿಕ್ಷಣಾಧಿಕಾರಿಗಳು |
| ಶ್ರೀಮತಿ. ಸವಿತಾ ರಮೇಶ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಶ್ರೀ. ಎಂ.ವೆಂಕಟೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿಗಳು |
| ಶ್ರೀ. ವಿ.ಕೃಷ್ಣ – ಸದಸ್ಯರು | |
| ಶ್ರೀಮತಿ. ಪೂರ್ಣಿಮ – ಸದಸ್ಯರು | |
| ಶ್ರೀಮತಿ. ಗಂಗಾಂಬಿಕೆ – ಸದಸ್ಯರು | |
| ಶ್ರೀಮತಿ. ಕವಿತಾ ಬಾಬುರಾಜ್ – ಸದಸ್ಯರು | |
| ಡಾ: ನಾಜಿನಿ ಬೇಗಂ – ಸದಸ್ಯರು | |
| ಶ್ರೀ.ಟಿ. ತಿಮ್ಮೇಗೌಡ – ಸದಸ್ಯರು | |

ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು.

ಮಾನ್ಯ ಉಪ ಮಹಾಪೌರರ ಉಪಸ್ಥಿತಿಯಲ್ಲಿ ಹಾಗೂ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರ, ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿದ್ದು, ಸಭೆಯಲ್ಲಿ ಹಾಜರಿದ್ದ ಮಾನ್ಯ ಉಪ ಮಹಾಪೌರರನ್ನು, ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಮಾನ್ಯ ಉಪ ಮಹಾಪೌರರು, ಕಾರ್ಯಪಾಲಕ ಅಭಿಯಂತರರು-ಪ್ರಾಜೆಕ್ಟ್ ಹಾಗೂ ಕಾರ್ಯಪಾಲಕ ಅಭಿಯಂತರರುಗಳು (ಎಂ.ಪಿ.ಐ.ಡಿ)ರವರನ್ನು ಉದ್ದೇಶಿಸಿ ಮಾತನಾಡುತ್ತಾ, ಸುಮಾರು ವರ್ಷಗಳಿಂದ ಶಾಲಾ/ಕಾಲೇಜು ಕಟ್ಟಡಗಳ ವಾರ್ಷಿಕ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದಿಲ್ಲ. ಇದರಿಂದಾಗಿ, ಕಟ್ಟಡಗಳ ಛಾವಣಿ ಸೋರುತ್ತಿದು, ಗೋಡೆಗಳ ಆರ್.ಸಿ.ಸಿ, ಕಿತ್ತು ಹೋಗಿರುತ್ತದೆ. ಅನೇಕ ಶಾಲಾ/ಕಾಲೇಜು ಕಟ್ಟಡಗಳ ಕಾಂಪೌಂಡ್ ಬಿದ್ದು ಹೋಗಿದ್ದು, ಇದರಿಂದ ಒತ್ತುವರಿಗೆ ಅವಕಾಶ ಮಾಡಿಕೊಟ್ಟಂತಾಗಿದೆ. ಕಟ್ಟಡಗಳಿಗೆ ಹಾಕಿರುವ ಬಣ್ಣ ಹಾಳಾಗಿದ್ದು, ಈ ವರ್ಷದಲ್ಲಿ ಎಲ್ಲಾ ಶಾಲಾ/ಕಾಲೇಜು ಕಟ್ಟಡಗಳಿಗೆ ಬಣ್ಣ ಹಾಕುವ ಕೆಲಸವು ತುರ್ತಾಗಿ ಆಗಬೇಕಾಗಿದ್ದು, ಈ ಕಾಮಗಾರಿಗೆ ಅಗತ್ಯವಿರುವ ಹಣವನ್ನು ಉಪ ಮಹಾಪೌರರ ಅನುದಾನದಲ್ಲಿ ನೀಡಲಾಗುವುದು ಎಂಬುದಾಗಿ ತಿಳಿಸುತ್ತಾ, ಅದಕ್ಕಾಗಿ, ಅಗತ್ಯವಿರುವ ಅಂದಾಜು ಪಟ್ಟಿಯನ್ನು

ತಯಾರಿಸಿ ಮಂಡಿಸುವಂತೆ, ಸೂಚಿಸಿದ್ದಲ್ಲದೇ ಕಟ್ಟಡಗಳ ವಿನ್ಯಾಸ ಹಾಗೂ ಬಿ.ಬಿ.ಎಂ.ಪಿ. ಯ ಎಲ್ಲಾ ಶಾಲಾ/ಕಾಲೇಜುಗಳಿಗೆ ಒಂದೇ ರೀತಿಯ ಬಣ್ಣ ಹಾಕುವುದಕ್ಕೆ ಕ್ರಮತೆಗೆದುಕೊಳ್ಳುವಂತೆ, ಆಕರ್ಶಕವಾಗಿ ಕಾಣುವಂತ ಬಣ್ಣವನ್ನು ಪ್ರಸ್ತಾವಿಸುವಂತೆ ತಿಳಿಸುತ್ತಾ, ಇದಕ್ಕಾಗಿ ಮೂರು ಜನ ಕಾರ್ಯಪಾಲಕ ಅಭಿಯಂತರರು-ಪ್ರಾಜೆಕ್ಟ್, ಇವರುಗಳು ಸಭೆ ಸೇರಿ ಬಣ್ಣವನ್ನು ಗುರ್ತಿಸಲು ತಿಳಿಸುತ್ತಾ, ಮುಂದಿನ ಸಭೆಗೆ ಎಲ್ಲಾ ಮಾಹಿತಿಗಳನ್ನು ನೀಡುವಂತೆ ನಿರ್ದೇಶನ ನೀಡಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಸುಧೀರ್ಘವಾದ ಚರ್ಚೆ ನಡೆದಿದ್ದು, **ಬಿ.ಬಿ.ಎಂ.ಪಿ ಶಾಲೆ ನಮ್ಮ ಶಾಲೆ** ಎಂಬ ಭಾವನೆ ಎಲ್ಲರಿಗೂ ಬರಬೇಕು, ವಿದ್ಯಾರ್ಥಿಗಳಿಗೆ, ಪೋಷಕರಿಗೆ ಹೆಚ್ಚಿನ ಆಕರ್ಷಣೆ ಬರುವಂತಾಗಬೇಕು, ಮೂರು ಬಣ್ಣಗಳ ಪ್ರಸ್ತಾವನೆಯನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ, ಸೂಚಿಸಲಾಯ್ತು ಹಾಗೂ ಇದೇ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಬಿ.ಬಿ.ಎಂ.ಪಿ. ಶಾಲಾ/ಕಾಲೇಜು ಕಟ್ಟಡಗಳ ದುರಸ್ತಿ ಹಾಗೂ ನಿರ್ವಹಣೆ ಹೊಣೆಗಾರಿಕೆಯನ್ನು ಎಂ.ಪಿ.ಇ.ಡಿ ಸೆಲ್ ವಹಿಸಿರುವುದರಿಂದ, ಕಾರ್ಯಪಾಲಕ ಅಭಿಯಂತರರುಗಳು ಪ್ರಾಜೆಕ್ಟ್ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಹಾಗೂ ಉತ್ತಮ ಗುಣಮಟ್ಟದ ಕಾಮಗಾರಿ ಕೈಗೆತ್ತಿಕೊಳ್ಳುವಂತೆಯು ಹಾಗೂ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ತಿಳಿಸಲಾಯ್ತು. ಇದೇ ಸಂದರ್ಭದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಎಲ್ಲಾ ಶಾಲಾ/ಕಾಲೇಜುಗಳಲ್ಲಿ ಮಾಡುವಂತೆ ತಿಳಿಸಲಾಗಿದೆ.

ಮುಂದುವರಿದಂತೆ, ನಗರ ಪಾಲಿಕೆಯ ಎಲ್ಲಾ ಶಾಲಾ/ಕಾಲೇಜುಗಳಿಗೆ ಮರು ನಾಮಕರಣ ಮಾಡುವ ಹಾಗೂ ಎಲ್ಲಾ ಕಟ್ಟಡಗಳು ಒಂದೇ ಮಾದರಿನಲ್ಲಿ ಕಾಣುವಂತೆ, ಕ್ರಮಕೈಗೊಳ್ಳುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ನಂತರ ನಗರ ಪಾಲಿಕೆಯ ಎಲ್ಲಾ ಶಾಲಾ/ಕಾಲೇಜು ಕಟ್ಟಡಗಳಿಗೆ ಒಂದೇ ಮಾದರಿಯ ಬಣ್ಣ ಬಳಿಯುವಂತೆ ಹಾಗೂ ಎಲ್ಲಾ ಶಾಲಾ/ಕಾಲೇಜುಗಳಿಗೆ ಕೆಂಪೇಗೌಡ ಬಿ.ಬಿ.ಎಂ.ಪಿ ನರ್ಸರಿ ಶಾಲೆ, ಕೆಂಪೇಗೌಡ ಬಿ.ಬಿ.ಎಂ.ಪಿ.ಪ್ರಾಥಮಿಕ ಶಾಲೆ, ಕೆಂಪೇಗೌಡ ಬಿ.ಬಿ.ಎಂ.ಪಿ.ಹಿರಿಯ ಪ್ರಾಥಮಿಕ ಶಾಲೆ, ಕೆಂಪೇಗೌಡ ಬಿ.ಬಿ.ಎಂ.ಪಿ. ಪ್ರೌಢಶಾಲೆ, ಕೆಂಪೇಗೌಡ ಬಿ.ಬಿ.ಎಂ.ಪಿ.ಪದವಿ ಪೂರ್ವ ಕಾಲೇಜು ಹಾಗೂ ಕೆಂಪೇಗೌಡ ಬಿ.ಬಿ.ಎಂ.ಪಿ. ಪ್ರಥಮ ದರ್ಜೆ ಕಾಲೇಜು ಎಂಬುದಾಗಿ ಮರು ನಾಮಕರಣ ಮಾಡಿ ನಾಮಫಲಕಗಳನ್ನು ಅಳವಡಿಸುವಂತೆ ನಿರ್ಣಯಿಸುತ್ತಾ, ಅದರಂತೆ, ನಗರ ಪಾಲಿಕೆಯ ಸಭೆಯ ಮುಂದೆ ಅನುಮೋದನೆಗಾಗಿ ಟಿಪ್ಪಣಿ ಮಂಡಿಸುವಂತೆ, ಸಂಬಂಧಪಟ್ಟ ಶಿಕ್ಷಣಾಧಿಕಾರಿಯವರಿಗೆ ಆದೇಶಿಸಲು ಆಯುಕ್ತರನ್ನು ಕೋರಲು ತೀರ್ಮಾನಿಸಲಾಯ್ತು. ತದನಂತರ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಯ್ತು.

**ವಿಷಯದ ಸಂಖ್ಯೆ:ಶಿ.ಸ್ಥಾ.ಸ/16/11-12**

ವಿಷಯ: ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆ ಮಾಡುವ ಕುರಿತು.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/14/10-11, ದಿನಾಂಕ:01.12.2011 ಹಾಗೂ 2011-12ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರಿಂದ ತಲಾ ವಿದ್ಯಾರ್ಥಿಗಳಿಗೆ ರೂ.4.50ರ ದರದಂತೆ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆ ಮಾಡಲಾಗಿರುತ್ತದೆ.

ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರು ಕಳೆದ 6 ವರ್ಷಗಳಿಂದ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಒದಗಿಸುತ್ತಾ ಬಂದಿರುತ್ತಾರೆ. ದಿನಾಂಕ: 09.05.2010ರಂದು ಕಳೆದ ಸಾಲಿನ ದರದಂತೆ ತಲಾ ಒಂದು ಊಟಕ್ಕೆ ರೂ.4.50ರಂತೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸುವುದಾಗಿ ಪತ್ರವನ್ನು ನೀಡಿರುವ ಮೇರೆಗೆ, ಶಿಕ್ಷಣ ಸ್ಥಾಯಿ ಸಮಿತಿಯನ್ನು ಅನುಮೋದನೆ ದೊರೆತಿರುತ್ತದೆ. ತದನಂತರ, ಸಾಗಾಣಿಕೆ ವೆಚ್ಚ ಮತ್ತು ಪರಿವರ್ತನಾ ವೆಚ್ಚಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ತಲಾ ಊಟಕ್ಕೆ ರೂ.8.00 ನೀಡುವಂತೆ ಕೋರಿ ದಿನಾಂಕ: 30.08.2011ರಂದು ಪತ್ರ ನೀಡಿದ್ದರು. ಸದರಿ ಪತ್ರಕ್ಕನುಗುಣವಾಗಿ ಮಾನ್ಯ ಆಯುಕ್ತರವರು ಪ್ರಸಕ್ತ ಸಾಲಿನಲ್ಲಿ ರೂ.4.50ಕ್ಕೆ ಅನುಮೋದನೆ ದೊರೆಯುತ್ತಿರುವುದರಿಂದ, ಸದರಿ ಯವರ ಮನವಿಯನ್ನು ಮುಂದಿನ ಶೈಕ್ಷಣಿಕ ವರ್ಷಕ್ಕೆ ಪರಿಗಣಿಸಬಹುದಾಗಿರುತ್ತದೆ ಎಂಬುದಾಗಿ ತಿಳಿಸಿ ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ಪತ್ರವನ್ನು ವಿಳಾಸ ಮಾಡಲಾಗಿರುತ್ತದೆ.

ತದನಂತರ, ದಿನಾಂಕ: 22.11.2011ರಂದು ಮತ್ತೊಮ್ಮೆ ಪತ್ರವನ್ನು ವಿಳಾಸ ಮಾಡಿ ಪಾಲಿಕೆಯಲ್ಲಿ ಪರಿಹಾರ ಬೋಧನೆಯನ್ನು ಪ್ರಾರಂಭ ಮಾಡಬೇಕಾದಲ್ಲಿ, ಮಧ್ಯಾಹ್ನದ ಬಿಸಿಯೂಟಕ್ಕೆ ಅಕ್ಟೋಬರ್ 2011 ರಿಂದ ಈಚೆಗೆ ಕನಿಷ್ಟ ರೂ.6.50ರಂತೆ ಒದಗಿಸಿದ್ದಲ್ಲಿ ಪರಿಹಾರ ಬೋಧನೆಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆಂದು ತಿಳಿಸಿ ಪತ್ರವನ್ನು ವಿಳಾಸ ಮಾಡಿರುತ್ತಾರೆ.

ಈಗಾಗಲೇ ಸದರಿ ಸಂಸ್ಥೆಯವರೊಂದಿಗೆ ಚರ್ಚಿಸಿರುವ ಮೇರೆಗೆ, ಅಕ್ಟೋಬರ್ 2011ರಿಂದ ಮುಂದಿನ ತಿಂಗಳುಗಳಿಗೆ ಊಟಕ್ಕೆ ರೂ.6.50ರಂತೆ ಪಾವತಿಸುವ ಸಂಬಂಧ ಅನುಮೋದನೆ ಕೋರಿ, ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ:07.01.2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

**ವಿಷಯದ ಸಂಖ್ಯೆ:ಶಿ.ಸ್ಥಾ.ಸ/17/11-12**

ವಿಷಯ: ಪಾಲಿಕೆಯ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಉಲ್ಲನ್ ಸ್ವೆಟರ್‌ಗಳನ್ನು ಸರಬರಾಜು ಮಾಡುವ ಬಗ್ಗೆ.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/108/11-12, ದಿನಾಂಕ:24.01.2011 ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 87 ಶಿಶುವಿಹಾರಗಳು, 12 ಪ್ರಾಥಮಿಕ ಶಾಲೆಗಳು ಮತ್ತು 34 ಪ್ರೌಢ ಶಾಲೆಗಳು ಹಾಗೂ 13 ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಉಲ್ಲನ್

ಸ್ವೆಟರ್‌ಗಳ ಖರೀದಿಗಾಗಿ 2011-12ನೇ ಸಾಲಿನ ಆಯವ್ಯಯ 25 ಶಿಕ್ಷಣ, ಇತರೇ ವೆಚ್ಚಗಳು, ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಸ್ವೆಟರ್‌ಗಳ ಸೌಲಭ್ಯಕ್ಕಾಗಿ ನಿಗದಿಪಡಿಸಿರುವ ಮೊತ್ತ ರೂ.200.00ಲಕ್ಷಗಳಲ್ಲಿ ಸಮವಸ್ತ್ರ ಖರೀದಿಗಾಗಿ ರೂ.96,13,085.00 ಖರ್ಚಾಗಿದ್ದು, ಉಳಿಕೆಯಾಗಿರುವ ಮೊತ್ತದಲ್ಲಿ ಉಲ್ಲನ್ ಸ್ವೆಟರ್‌ಗಳನ್ನು ಖರೀದಿಸಲು ದಿನಾಂಕ:15.11.2011ರಂದು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ದಿನಾಂಕ:21.11.2011ರಂದು ಕೊನೆಯ ದಿನವಾಗಿದ್ದು, ದಿನಾಂಕ:23.11.2011ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಮೆ: ಎಕ್ಸೆಲ್ ಸ್ಪೋರ್ಟ್ಸ್, #1, ಮೆಜೆಸ್ಟಿಕ್ ಸರ್ಕಲ್, ಬೆಂಗಳೂರು-1 ರವರು ಏಕೈಕ ಟೆಂಡರ್‌ದಾರರಾಗಿ ಭಾಗವಹಿಸಿರುತ್ತಾರೆ. ಇವರು Technical bidನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ಟೆಂಡರ್ ನಿಯಮ ನಿಬಂಧನೆಗಳ ಪ್ರಕಾರ ಎಲ್ಲಾ ದಾಖಲಾತಿ ಪ್ರತಿಗಳನ್ನು ದೃಢೀಕರಿಸಿ ಸಲ್ಲಿಸಿರುವುದು ಕಂಡ ಬಂದಿರುವುದರಿಂದ, ಇವರ ಟೆಕ್ನಿಕಲ್ ಬಿಡ್‌ನ್ನು ಅಂಗೀಕರಿಸಲಾಯಿತು ಮತ್ತು ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹತೆ ಹೊಂದಿರುವ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರ Financil bidನ್ನು ದಿನಾಂಕ:02.12.2011ರಂದು ತೆರೆಯಲಾಯಿತು. ಸದರಿಯವರು ಸಲ್ಲಿಸಿರುವ ಮಾದರಿ ಉಲ್ಲನ್ ಸ್ವೆಟರ್‌ಗಳನ್ನು ದಿನಾಂಕ:08.12.2011ರಂದು ವಿದ್ಯಾಧಿಕಾರಿ, ಸಹಾಯಕ ವಿದ್ಯಾಧಿಕಾರಿ, ವಿಷಯ ಪರಿವೀಕ್ಷಕರು, ದೈಹಿಕ ಶಿಕ್ಷಣಾಧಿಕಾರಿ ಮತ್ತು ವ್ಯವಸ್ಥಾಪಕರು ಇವರುಗಳ ಸಮ್ಮುಖದಲ್ಲಿ ಟೆಂಡರ್‌ನಲ್ಲಿ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ: ಎಸ್.ಜಿ.ಎಸ್.ಇಂಡಿಯಾ ಲಿ.ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿವಫಿಕೇಷನ್ ಕಂ., ಬಿ.ಟಿ.ಎಂ. ಲೇಔಟ್, ಬೆಂಗಳೂರು ರವರು ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ಸಲ್ಲಿಸಿರುವ ತಲಾ ಒಂದು ಸ್ವೆಟರ್‌ನ ದರಗಳು ಈ ಕೆಳಕಂಡಂತೆ ಇರುತ್ತದೆ.

| *Sl. No.* | *Particulars* | *"V" neck border line best quality woolen sweater for boys without buttons (each)* | | *"V" neck border line best quality woolen sweater for girls buttons (each)* | |
|---|---|---|---|---|---|
| | | *Sleeveless* | *Full arm* | *Sleeveless* | *Full arm* |
| *1* | *Nursery(3 years to 5 years)* | *219.00* | *248.00* | *221.00* | *258.00* |
| *2* | *Primary 1st to 4th standard (5years to 9 years)* | *215.00* | *258.00* | *220.00* | *264.00* |
| *3* | *Primary 5th to 7th Standard (9 years to 12 years)* | *275.00* | *294.00* | *286.00* | *280.00* |
| *4* | *High Schools 8th to 10th standard (12 years to 15 years)* | *308.00* | *369.00* | *329.00* | *379.00* |

ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ ರವರ ಪತ್ರದ ಸಂಖ್ಯೆ:ಶಿ.ಸ್ಥಾ.ಸ/ಪಿಆರ್/166/11-12, ದಿನಾಂಕ: 30.11.2011ರಂತೆ ಪ್ರಸಕ್ತ ಸಾಲಿನಲ್ಲಿ ಕಾಲೇಜು ವಿದ್ಯಾರ್ಥಿಗಳು ಸಹ ಉಲ್ಲನ್ ಸ್ವೆಟರ್‌ಗಳನ್ನು ವಿತರಿಸುವಂತೆ ಸೂಚಿಸಿರುವುದರಿಂದ, ಪ್ರಸಕ್ತ ಸಾಲಿನ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೂ ಸಹ ಉಲ್ಲನ್ ಸ್ವೆಟರ್‌ಗಳನ್ನು ವಿತರಿಸಬಹುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರಿಗೆ ದಿನಾಂಕ:05.12.2011ರಂದು ಪತ್ರವನ್ನು ಬರೆದು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಒದಗಿಸುವ ಉಲ್ಲನ್ ಸ್ವೆಟರ್‌ಗಳಿಗೆ ಸೂಚಿಸಿರುವ ದರಗಳಂತೆ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೂ ಸಹ ಅದೇ ದರಗಳಲ್ಲಿ ಸಹ ಅದೇ ದರಗಳಲ್ಲಿ ಉತ್ತಮ ಗುಣಮಟ್ಟದ ಉಲ್ಲನ್ ಸ್ವೆಟರ್‌ಗಳನ್ನು ಒದಗಿಸುವಂತೆ ಒಪ್ಪಿಗೆ ಕೇಳಲಾಗಿದ್ದು, ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ಪಿ.ಯು. ತರಗತಿ ವಿದ್ಯಾರ್ಥಿಗಳಿಗೂ ಸಹ ವಿದ್ಯಾರ್ಥಿಗಳ ಅಳತೆಗೆ ತಕ್ಕಂತೆ ಸ್ವೆಟರ್‌ಗಳನ್ನು ಹೈಸ್ಕೂಲ್ ವಿದ್ಯಾರ್ಥಿಗಳ ಸ್ವೆಟರ್‌ಗಳಿಗೆ ನೀಡಿರುವ ದರಗಳಂತೆ ಸರಬರಾಜು ಮಾಡಲು ಒಪ್ಪಿರುವ ಕಾರಣ (ಪತ್ರ ಲಗತ್ತಿಸಿದೆ), 2011-12ನೇ ಸಾಲಿನಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಉಲ್ಲನ್ ಸ್ವೆಟರ್‌ಗಳನ್ನು ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ನೀಡಿರುವ ಟೆಂಡರ್‌ನ ಕಡಿಮೆ ದರದಲ್ಲಿ ಖರೀದಿಸಲು ಖರೀದಿ ವೆಚ್ಚದ ಒಟ್ಟು ಮೊತ್ತ, ಈ ಕೆಳಕಂಡಂತೆ ಇರುತ್ತದೆ.

| Sl. No. | Particulars | Quantity Nos. | Rates Rs. | Total Amount Rs. |
|---|---|---|---|---|
| 1 | Nursery boys (3 years to 5 years) full Arm only | 2283 | 248.00 | 5,66,184.00 |
| 2 | Nursery (Girls) (3years to 5years) full Arm only | 2317 | 258.00 | 5,97,786.00 |
| 3 | Primary (boys) 1st to 4th Standard (5 years to 9years)full arm only | 545 | 258.00 | 1,40,610.00 |
| 4 | Primary (Girls) 1st to 4th standard (5 years to 9 years) full arm only | 452 | 264.00 | 1,19,328.00 |
| 5 | Primary (boys) 5th to 7th Standard (9 years to 12 years) full arm only | 448 | 294.00 | 1,31,712.00 |
| 6 | Primary (Girls) 5th to 7th standard (9 years to 12 years) full arm only | 373 | 280.00 | 1,04,440.00 |
| 7 | High Schools (boys) 8th to 10th standard (12 years to 15 years) sleevless | 2694 | 308.00 | 8,29,752.00 |

| | | | | |
|---|---|---|---|---|
| 8 | *High Schools (boys) 8th to 10th standard (12 years to 15 years) full arm* | *2694* | *308.00* | *8,29,752.00* |
| 9 | *High Schools (Girls) 8th to 10th standard (12 years to 15 years) sleevless* | *4646* | *329.00* | *15,28,534.00* |
| 10 | *High Schools (Girls) 8th to 10th standard (12 years to 15 years) full arm* | *4646* | *379.00* | *17,60,834.00* |
| 11 | *PU Colleges (boys) 1st and 2nd PU Sleevless* | *1013* | *308.00* | *3,12,004.00* |
| 12 | *PU Colleges (boys) 1st & 2nd PU full arm* | *1013* | *369.00* | *3,73,797.00* |
| 13 | *PU Colleges (Girls) 1st & 2nd PU Sleevless* | *3759* | *329.00* | *12,36,711.00* |
| 14 | *PU Colleges (Girls) 1st & 2nd PU full arm* | *3759* | *379.00* | *14,24,661.00* |
| **Total** | | **30642** | | **1,01,20,439.00** |

ಮೇಲ್ಕಂಡ ಖರೀದಿ ವೆಚ್ಚದ ಒಟ್ಟು ಮೊತ್ತ ರೂ.1,01,20,439.00ಗಳನ್ನು 2011-12ನೇ ಸಾಲಿನ ಆಯವ್ಯಯ 25 ಶಿಕ್ಷಣ, ಇತರೇ ವೆಚ್ಚಗಳು, ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಸ್ವೆಟರ್‌ಗಳ ಸೌಲಭ್ಯಕ್ಕಾಗಿ ನಿಗದಿಪಡಿಸಿರುವ ಮೊತ್ತ ರೂ.200.00ಲಕ್ಷಗಳಲ್ಲಿ(ಪಿ243) ಸಮವಸ್ತ್ರ ಖರೀದಿಗಾಗಿ ರೂ.96,13,085.00ಗಳು ಖರ್ಚಾಗಿದ್ದು, ಉಳಿಕೆಯಾಗಿರುವ ಮೊತ್ತ ರೂ.1,03,86,915.00ಗಳಲ್ಲಿ ಭರಿಸಬಹುದಾಗಿರುತ್ತದೆ.

ಪ್ರಸ್ತುತ ಟೆಂಡರ್‌ನಲ್ಲಿ ಟೆಂಡರ್‌ದಾರರಾಂತದಹ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ಏಕೈಕ ಟೆಂಡರ್‌ದಾರರಾಗಿ ಭಾಗವಹಿಸಿರುವ ಕಾರಣ, ನಿಯಮಾನುಸಾರ ಮರು ಟೆಂಡರ್ ಕರೆಯಬೇಕಿರುತ್ತದೆ. ಆದ್ದರಿಂದ, ಈ ಕೆಳಕಂಡ ಅಂಶಗಳನ್ನು ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಸೂಕ್ತ ಆದೇಶವನ್ನು ಕೋರಿದೆ.

ಅ) ಪಾರದರ್ಶಕ ಕಾಯ್ದೆ ಅನ್ವಯ ಮೆ: ಎಕ್ಸೆಲ್ ಸ್ಪೋರ್ಟ್ಸ್ ಇವರು ಏಕೈಕ ಬಿಡ್ಡುದಾರರಾಗಿರುವ ಪ್ರಯುಕ್ತ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಿ ಮರು ಟೆಂಡರ್ ಪ್ರಕ್ರಿಯೆ ನಡೆಸಲು ಆದೇಶಿಸುವುದು.

**ಅಥವಾ**

ಆ) ಈಗ ಚಳಿಗಾಲ ಮುಗಿದಿರುವ ಪ್ರಯುಕ್ತ ಮಕ್ಕಳಿಗೆ ಉಲ್ಲನ್ ಸ್ವೆಟರ್‌ಗಳ ಅಗತ್ಯತೆ ಈ ಸಾಲಿನಲ್ಲಿ ಅಷ್ಟೊಂದು ಅವಶ್ಯಕತೆ ಕಂಡು ಬರದಿರುವ ಕಾರಣ ಪ್ರಸಕ್ತ ಸಾಲಿನಲ್ಲಿ ಪ್ರಸ್ತಾವನೆಯನ್ನು ಕೈಬಿಡುವುದು.

ತತ್ಸಂಬಂಧವಾಗಿ, ಮೇಲ್ಕಂಡ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ಹಾಗೂ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :** ಆಯುಕ್ತರ ಟಿಪ್ಪಣಿ ದಿನಾಂಕ:24.01.2012 ಅನ್ನು ಭಾಗಶಃ ಒಪ್ಪುತ್ತಾ ಮಾರ್ಪಾಟಿನೊಂದಿಗೆ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು Technical bid ನ್ನು ಅರ್ಹತೆ ಹೊಂದಿದ್ದು, ವಿನ್ಯಾಸ ಮತ್ತು ಗುಣ ಮಟ್ಟದ ಬಗ್ಗೆ ಮೆ: ಎಸ್.ಜಿ.ಎಸ್.ಇಂಡಿಯಾ ಲಿ.ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂ. ಬಿ.ಟಿ.ಎಂ. ಲೇಔಟ್, ಬೆಂಗಳೂರು ರವರು ನೀಡಿರುವ ಪ್ರಮಾಣ ಪತ್ರ ಇವುಗಳ ಆಧಾರದ ಮೇಲೆ ಹಾಗೂ ಕಾಲಾವಕಾಶ ಕಡಿಮೆ ಇರುವುದರಿಂದ, ಶಾಲಾ/ಕಾಲೇಜು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರಿಂದ ಸ್ವೆಟರ್‌ಗಳನ್ನು ಖರೀದಿಸಲು ತೀರ್ಮಾನಿಸಲಾಯ್ತು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯ್ತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 08.02.2012ರಂದು ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಕೆಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀ. ಕೆ.ರಮೇಶ್ ರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು ಹಾಗೂ ಜಂಟಿ ಆಯುಕ್ತರು(ಕಲ್ಯಾಣ ಮತ್ತು ಶಿಕ್ಷಣ) |
| ಶ್ರೀಮತಿ. ಚೇತನಾ ಗೌಡ – ಸದಸ್ಯರು | ಶಿಕ್ಷಣಾಧಿಕಾರಿಗಳು |
| ಶ್ರೀ. ರವೀಂದ್ರನ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಶ್ರೀಮತಿ. ಸವಿತಾ ರಮೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿಗಳು |
| ಶ್ರೀ. ಎಂ.ವೆಂಕಟೇಶ್ – ಸದಸ್ಯರು | |
| ಶ್ರೀ. ವಿ.ಕೃಷ್ಣ – ಸದಸ್ಯರು | |
| ಶ್ರೀಮತಿ. ಪೂರ್ಣಿಮ – ಸದಸ್ಯರು | |
| ಶ್ರೀಮತಿ. ಗಂಗಾಂಬಿಕೆ – ಸದಸ್ಯರು | |
| ಶ್ರೀಮತಿ. ಕವಿತಾ ಬಾಬುರಾಜ್ – ಸದಸ್ಯರು | |
| ಡಾ: ನಾಜಿನಿ ಬೇಗಂ – ಸದಸ್ಯರು | |
| ಶ್ರೀ.ಟಿ. ತಿಮ್ಮೇಗೌಡ – ಸದಸ್ಯರು | |

ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು.

**ವಿಷಯ: ಶಿ.ಸ್ಥಾ.ಸ/18/11-12**

ವಿಷಯ: ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಹೊರಗುತ್ತಿಗೆ ಆಧಾರದ ಮೇರೆಗೆ, ಶಿಕ್ಷಕರು/ಉಪನ್ಯಾಸಕರ ಸೇವೆಯನ್ನು ಪಡೆಯುವ ಕುರಿತು.

★★★

ವಿಶೇಷ ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(6)ಪಿಆರ್/29/11-12, ದಿನಾಂಕ:20.01.2012 ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರು/ಉಪನ್ಯಾಸಕರ ಹುದ್ದೆಗಳಿಗೆ 2011-12ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ. ನವೆಂಬರ್ ಮಾಹೆಯಲ್ಲಿ ಹಾಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು/ಉಪನ್ಯಾಸಕರುಗಳು ವೇತನ ಹೆಚ್ಚಿಸಬೇಕೆಂದು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ, ಪೂಜ್ಯ ಮಹಾಪೌರರು ಹಾಗೂ ಮಾನ್ಯ ಆಯುಕ್ತ ರವರು ಸಭೆಯಲ್ಲಿ ವೇತನ ಹೆಚ್ಚಿಸುವ ಸಲುವಾಗಿ, ಟೆಂಡರ್ ಕರೆದು ಪ್ರಕ್ರಿಯೆ ಪ್ರಾರಂಭಿಸಲು ಮೌಖಿಕವಾಗಿ ಆದೇಸಿಸಿರುವ ಮೇರೆಗೆ, ದಿನಾಂಕ:12.12.2011ರಂದು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇದೇ ದಿನದಂದು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲಾಗಿದೆ ಹಾಗೂ ದಿನಾಂಕ:12.12.2011ರಂದು ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ. ದಿನಾಂಕ:13.12.2011ರಂದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಬ್ಲಿಷ್ ಮಾಡಲಾಗಿರುತ್ತದೆ. ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ

ಕರೆಯಲಾಗಿರುವ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:19.12.2011ರಂದು ಆಗಿದ್ದು, ದಿನಾಂಕ:21.12.2011ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಮೆ:ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ಸ್ ಅಂಡ್ ಸರ್ವೀಸಸ್, ನಂ:538/ಎ, ಡಾ:ರಾಜ್‌ಕುಮಾರ್ ರಸ್ತೆ, "ಎ" ಬ್ಲಾಕ್, 2ನೇ ಹಂತ, ರಾಜಾಜಿನಗರ, ಬೆಂಗಳೂರು-10 ರವರು ಏಕೈಕ ಟೆಂಡರ್‌ದಾರರು ಮಾತ್ರ ಭಾಗವಹಿಸಿರುತ್ತಾರೆ.

ಮೆ:ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ಸ್ ಅಂಡ್ ಸರ್ವೀಸಸ್ ರವರು ಟೆಂಡರ್‌ನ ನಿಯಮ ನಿಬಂಧನೆಗಳಂತೆ, ಟೆಕ್ನಿಕಲ್ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಆನ್‌ಲೈನ್ ಮುಖಾಂತರ ಪಡೆದು ಪರಿಶೀಲಿಸಲಾಗಿ, ಸದರಿ ಸಂಸ್ಥೆಯವರು ಟೆಂಡರ್‌ನ ನಿಯಮ ನಿಬಂಧನೆಗಳಂತೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸಿರುವುದರಿಂದ, ಸದರಿಯವರ ಟೆಕ್ನಿಕಲ್ ಬಿಡ್‌ನ್ನು ಅಂಗೀಕರಿಸಬಹುದಾಗಿರುತ್ತದೆ. ಈ ಬಗ್ಗೆ ನಡೆದ ಸಭೆಯ ನಡವಳಿಕೆಯನ್ನು ಕಡತದಲ್ಲಿ ಲಗತ್ತಿಸಿದೆ.

ಸದರಿ ಟೆಂಡರ್‌ನಲ್ಲಿ ಮೆ:ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ಸ್ ಅಂಡ್ ಸರ್ವೀಸಸ್ ರವರು ಏಕೈಕ ಟೆಂಡರ್‌ದಾರರಾಗಿ ಭಾಗವಹಿಸಿದ್ದು, ಇವರು ಸಲ್ಲಿಸಿರುವ ಟೆಕ್ನಿಕಲ್ ಬಿಡ್‌ನ್ನು ಅಂಗೀಕರಿಸಿ ಅರ್ಹ ಟೆಂಡರ್‌ದಾರರೆಂದು ಪರಿಗಣಿಸಬಹುದಾಗಿರುತ್ತದೆ ಹಾಗೂ ಮೆ:ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ಸ್ ಅಂಡ್ ಸರ್ವೀಸಸ್ ರವರು ಸಲ್ಲಿಸಿರುವ ಫೈನಾನ್ಷಿಯಲ್ ಬಿಡ್‌ನ್ನು ತೆರವುಗೊಳಿಸಬಹುದಾಗಿದೆ.

ದಿನಾಂಕ:23.12.2011ರಂದು ಫೈನಾನ್ಷಿಯಲ್ ಬಿಡ್‌ನ್ನು ತೆರೆಯಲಾಯಿತು. ಸದರಿ ಫೈನಾನ್ಷಿಯಲ್ ಬಿಡ್‌ನಲ್ಲಿ ಏಕೈಕ ಟೆಂಡರ್‌ದಾರರಾದ ಮೆ:ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ಸ್ ಅಂಡ್ ಸರ್ವೀಸಸ್ ರವರು ಸಲ್ಲಿಸಿರುವ ಸಂಭಾವನೆ ಮತ್ತು ಸರ್ವೀಸಸ್ ಛಾರ್ಜ್, ಈ ಕೆಳಕಂಡಂತೆ ಇರುತ್ತದೆ.

*Salary structure for Teachers & Lecturers to B.B.M.P and Colleges.*

*The salary components per month for each designation as per market rates.*

| *Designation* | *Salary Component/Month at prevailing market rates in Rs.* | | | | | | | *Service Charges for (g) (h)* | *Total (i) =(g)+(h)* | *No. of post* | *Grand (k)=(g)X (j)* |
|---|---|---|---|---|---|---|---|---|---|---|---|
| | *Basic (a)* | *Allowance (b)* | *Gross (c)* | *Employer PF @ 3.61 % on Basic(d)* | *ESI(if applicable) @ 4.75 on Gross ((e)* | *P.F (f)* | *Total Salary(g)= (c) (d)+(e) +(f)* | | | | |
| *Nursery School Teacher* | *3500* | *1800* | *5300* | *476.35* | *251.75* | *NA* | *6028.10* | *850* | *6878.10* | *61* | *367714* |
| *Primary School Teacher* | *3500* | *1800* | *5300* | *476.35* | *251.75* | *NA* | *6028.10* | *850* | *6878.10* | *52* | *313461* |

| | | | | | | | | | | | |
|---|---|---|---|---|---|---|---|---|---|---|---|
| *High School Teacher* | *4500* | *3700* | *8200* | *612.45* | *175.75* | *NA* | *8988.20* | *1170* | *10158.20* | *196* | *1761687* |
| *Craft/Drawing/Horti culture Teacher* | *4000* | *2500* | *6500* | *544.40* | *308.75* | *NA* | *7353.15* | *850* | *8203.15* | *06* | *44119* |
| *PU College Lecturers* | *6200* | *4000* | *10200* | *844* | *484.50* | *150* | *11678.50* | *1700* | *13378.50* | *52* | *607282* |
| *Degree College Lecturers* | *6500* | *4300* | *10800* | *884.65* | *513.00* | *150* | *12347.65* | *1700* | *14047.65* | *01* | *12348* |
| *Degree College Ledturers (Phd)* | *8500* | *4500* | *13000* | *NA* | *617.50* | *150* | *13767.50* | *1700* | *15467.50* | *02* | *27535* |
| ***Total*** | | | | | | | ***66191.20*** | ***8820*** | ***75011.20*** | ***370*** | ***3134146*** |

*Note: The above amount indicates the monthly salary and service charge only. But does not include service tax component. The applicable service tax (10.3%) will be claimed in the monthly invoice as per prevailing rates. Service Charges include SP's administrative operative and any other cost associated for providing the above services.*

ಮೇಲ್ಕಂಡ ಸೇವೆಗೆ ತಗಲುವ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯ 25 ಶಿಕ್ಷಣ, ಸಿಬ್ಬಂದಿ ವೇತನಕ್ಕಾಗಿ (ಪಿ0243) ನಿಗದಿಪಡಿಸಿರುವ ಮೊತ್ತ ರೂ.1200.00 ಲಕ್ಷಗಳಲ್ಲಿ ಭರಿಸಬಹುದಾಗಿರುತ್ತದೆ.

ಪ್ರಸ್ತುತ ಟೆಂಡರ್‌ನಲ್ಲಿ ಟೆಂಡರ್‌ದಾರರಾದಂತಹ ಮೆ:ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ಸ್ ಅಂಡ್ ಸರ್ವಿಸಸ್ ರವರು ಏಕೈಕ ಟೆಂಡರ್‌ದಾರರಾಗಿ ಭಾಗವಹಿಸಿರುವ ಕಾರಣ, ನಿಯಮಾನುಸಾರ ಮರು ಟೆಂಡರ್ ಕರೆಯಬಹುದಾಗಿರುತ್ತದೆ. ಆದರೆ, ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ್ ಕರೆದು ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಹೆಚ್ಚಿನ ಕಾಲಾವಕಾಶ ಬೇಕಾಗಿದ್ದು, ವಿದ್ಯಾರ್ಥಿಗಳ ಪರೀಕ್ಷಾ

ಹಿತದೃಷ್ಟಿಯಿಂದಾ ಈಗಾಗಲೇ ಅವಶ್ಯಕತೆ ಇರುವ ಶಿಕ್ಷಕರು/ಉಪನ್ಯಾಸಕರ ಸೇವೆಯನ್ನು ಪಡೆದಿರುವುದರಿಂದ, ಏಕೈಕ ಟೆಂಡರ್‌ದಾರರಾದಂತಹ ಮೆ:ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ಸ್ ಅಂಡ್ ಸರ್ವಿಸಸ್ ರವರ ದರಗಳನ್ನು ಅಂಗೀಕರಿಸಿ, ಸದರಿ ಸೇವೆಗೆ ತಗಲುವ ವೆಚ್ಚವನ್ನು ಮೇಲ್ಕಂಡ ಶೀರ್ಷಿಕೆಯಲ್ಲಿ ಮಂಜೂರು ಮಾಡಲು ಮತ್ತು ಸದರಿಯವರಿಗೆ ಸರಬರಾಜು ಆದೇಶ ನೀಡಲು ಅನುಮೋದಿಸುವ ಬಗ್ಗೆ ಅಥವಾ ಮರು ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ:20.01.2012ರ ವಿಶೇಷ ಆಯುಕ್ತರ ಟಿಪ್ಪಣಿ ಒಪ್ಪಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ, ಇತರೇ ವಿಷಯಗಳು ಚರ್ಚೆಯಲ್ಲಿ ಪಾಲಿಕೆಯ ಶಾಲಾ/ಕಾಲೇಜು ಕಟ್ಟಡಗಳಿಗೆ ಸುಮಾರು 5-6 ವರ್ಷಗಳಿಂದ ವಾರ್ಷಿಕ ದುರಸ್ತಿ ಕಾಮಗಾರಿ ತೆಗೆದುಕೊಳ್ಳದೇ ಇರುವ ಕಾರಣ, ಕಟ್ಟಡಗಳು ಶಿಥಿಲಗೊಳ್ಳುವಂತಾಗಿದ್ದು, ಸುಮಾರು ಕಟ್ಟಡಗಳಿಗೆ ಮೇಲ್ ಛಾವಣಿ ಕಿತ್ತು ಹೋಗಿದ್ದು, ಕಟ್ಟಡಗಳು ಸೋರುತ್ತಿವೆ, ಗೋಡೆಗಳಲ್ಲಿ ಬಿರುಕು, ಆರ್.ಸಿ.ಸಿ. ಕಿತ್ತು ಹೋಗಿದ್ದು, ಇನ್ನು ಕೆಲವು ಕಡೆಗಳಲ್ಲಿ ಕಾಂಪೌಂಡ್ ಬಿದ್ದು ಹೋಗಿರುವ ಪ್ರಕರಣ ಇವೆ. ಆಟದ ಮೈದಾನಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ, ಆಟದ ಮೈದಾನದಲ್ಲಿ ಗುಂಡಿಗಳಾಗಿ ಮಕ್ಕಳಿಗೆ ಆಟವಾಡಲು ತೊಂದರೆಯಾಗುತ್ತಿದೆ. ಕೆಲವು ಕಟ್ಟಡಗಳಲ್ಲಿ ನೆಲ ಕಿತ್ತು ಹೋಗಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಈಗಾಗಲೇ ಈ ವಿಷಯವನ್ನು ಸಂಬಂಧಪಟ್ಟ ಕಾರ್ಯಪಾಲಕ, ಅಭಿಯಂತರ ಗಮನಕ್ಕೆ ತಂದಿದ್ದರು ಯಾವುದೇ ಪ್ರಯೋಜನವಾಗಿರುವುದಿಲ್ಲ. ದಿನಾಂಕ:04.01.2012ರಂದು ನಡೆದ ಸಭೆಯಲ್ಲಿ ಚರ್ಚಿತವಾಗಿದ್ದು, ಆದರೆ, ಇದುವರೆವಿಗೂ, ಈ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಮುಂದಿನ ಶೈಕ್ಷಣಿಕ ವರ್ಷದ ಆರಂಭಕ್ಕೆ ಮುನ್ನ, ಈ ಕಾಮಗಾರಿಗಳು ಮುಕ್ತಾಯಗೊಳ್ಳಬೇಕಾಗಿರುವುದರಿಂದ, ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ವೈಯಕ್ತಿ ಗಮನ ಹರಿಸಬೇಕಾಗಿರುತ್ತದೆ. ಹಾಲಿ ಶಾಲಾ/ಕಾಲೇಜು ಕಟ್ಟಡಗಳ ದುರಸ್ತಿ ಹಾಗೂ ನಿರ್ವಹಣೆಯನ್ನು ಎಂ.ಪಿ.ಇ.ಡಿ. ವಿಭಾಗಕ್ಕೆ ವಹಿಸಲಾಗಿದ್ದು, ಸಂಬಂಧಪಟ್ಟ ಅಭಿಯಂತರರುಗಳು ಅವರುಗಳ ವ್ಯಾಪ್ತಿಯಲ್ಲಿ ಬರುವ ಶಾಲಾ/ಕಾಲೇಜುಗಳಿಗೆ ಭೇಟಿ ಮಾಡಿ ಆಗಬೇಕಾಗಿರುವ ಕಾಮಗಾರಿಗಳ ಬಗ್ಗೆ ಕಾರ್ಯಕ್ರಮ ಪಟ್ಟಿ ತಯಾರಿಸಿ ಟೆಂಡರ್ ಕರೆಯಲು ಸೂಕ್ತ ಕ್ರಮತೆಗೆದುಕೊಳ್ಳುವುದು.

ಮಾನ್ಯ ಉಪ ಮಹಾಪೌರರು ತಮ್ಮ ಅನುದಾನದಲ್ಲಿ ಶಾಲಾ/ಕಾಲೇಜು ಕಟ್ಟಡಗಳಿಗೆ ಸಣ್ಣ ಪುಟ್ಟ ದುರಸ್ತಿ ಹಾಗೂ ಬಣ್ಣ ಹಾಕಲು ಹಣವನ್ನು ನೀಡುವುದಾಗಿ ತಿಳಿಸಿದ್ದು, ಅದರಂತೆ, ಎಲ್ಲಾ ಕಾರ್ಯಪಾಲಕ ಅಭಿಯಂತರರು ಪ್ರಾಜೆಕ್ಟ್ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯ ಇವರುಗಳ ಸಭೆ ಕರೆದು, ಈ ಅಂದಾಜು ಪಟ್ಟಿಯನ್ನು ತಯಾರಿಸಿ ಮಾನ್ಯ ಉಪ ಮಹಾಪೌರರ ಅನುಮೋದನೆಗಾಗಿ ಮಂಡಿಸಲು ಸೂಚಿಸಲಾಗಿರುತ್ತದೆ.

ಈ ಬಗ್ಗೆ ಶಿಕ್ಷಣಾಧಿಕಾರಿಯವರು ಆಗ್ಗಿಂದಾಗ್ಗೆ ಭೇಟಿ ಮಾಡಿ ಆದಷ್ಟು ಶೀಘ್ರವಾಗಿ ಅಂದಾಜುಪಟ್ಟಿ ತಯಾರಿಸಲು ಒತ್ತಡ ತರಲು ತಿಳಿಸಲಾಗಿದೆ. ಆದ್ದರಿಂದ, ಯಾವುದೇ ಕಾರಣಕ್ಕೂ ವಿಳಂಬ ಮಾಡದೇ ಮಾರ್ಚ್-2012ರ ಒಳಗಾಗಿ, ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಳ್ಳುವಂತೆ ನೋಡಿಕೊಳ್ಳಲು ಸೂಚಿಸಲಾಗಿದೆ.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯ್ತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## ದಿನಾಂಕ: 16.04.2012ರಂದು ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಯ ನಡವಳಿಕೆಗಳು

| ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀ. ಕೆ.ರಮೇಶ್ ರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು ಹಾಗೂ ಜಂಟಿ ಆಯುಕ್ತರು(ಕಲ್ಯಾಣ ಮತ್ತು ಶಿಕ್ಷಣ) |
| ಶ್ರೀಮತಿ. ಚೇತನಾ ಗೌಡ – ಸದಸ್ಯರು | ಶಿಕ್ಷಣಾಧಿಕಾರಿಗಳು |
| ಶ್ರೀ. ರವೀಂದ್ರನ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| ಶ್ರೀಮತಿ. ಸವಿತಾ ರಮೇಶ್ – ಸದಸ್ಯರು | ದೈಹಿಕ ಶಿಕ್ಷಣಾಧಿಕಾರಿಗಳು |
| ಶ್ರೀ. ಎಂ.ವೆಂಕಟೇಶ್ – ಸದಸ್ಯರು | |
| ಶ್ರೀ. ವಿ.ಕೃಷ್ಣ – ಸದಸ್ಯರು | |
| ಶ್ರೀಮತಿ. ಪೂರ್ಣಿಮ – ಸದಸ್ಯರು | |
| ಶ್ರೀಮತಿ. ಗಂಗಾಂಬಿಕೆ – ಸದಸ್ಯರು | |
| ಶ್ರೀಮತಿ. ಕವಿತಾ ಬಾಬುರಾಜ್ – ಸದಸ್ಯರು | |
| ಡಾ: ನಾಜಿನಿ ಬೇಗಂ – ಸದಸ್ಯರು | |
| ಶ್ರೀ.ಟಿ. ತಿಮ್ಮೇಗೌಡ – ಸದಸ್ಯರು | |

ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು.

**ವಿಷಯ ಸಂಖ್ಯೆ: ಶಿ.ಸ್ಥಾ.ಸ/ 01/11–12**

ವಿಷಯ: ವಾರ್ಡ್– 156ರಲ್ಲಿ ಶ್ರೀ ರಾಜೀವ್ ಗಾಂಧಿ ಕ್ರೀಡಾ ಸಂಕೀರ್ಣದ ಹೊರಗುತ್ತಿಗೆಯನ್ನು ಹಿಂಪಡೆಯುವ ಬಗ್ಗೆ.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ಇಇ/ಪಿ–ಎಸ್/ಪಿಆರ್/250/10–11, ದಿನಾಂಕ:09.03.2011ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್–156ರಲ್ಲಿನ ಶ್ರೀ.ರಾಜೀವ್ ಗಾಂಧಿ ಕ್ರೀಡಾ ಸಂಕೀರ್ಣವನ್ನು ಹೊರಗುತ್ತಿಗೆ ಆಧಾರದ ಮೇಲೆ M/s.Arka Eduserve Pvt., Ltd., ರವರಿಗೆ ವಹಿಸಲಾಗಿರುತ್ತದೆ. ಸದರಿ ಕ್ರೀಡಾ ಸಂಕೀರ್ಣದ ನಿರ್ವಹಣೆಯ ಕಾರ್ಯವು ಅಸಮರ್ಪಕವಾಗಿರುತ್ತದೆ. ಈ ಬಗ್ಗೆ ಸದರಿ ಗುತ್ತಿಗೆದಾರರಿಗೆ ಹಲವು ಬಾರಿ ನೋಟಿಸ್ ಮುಖಾಂತರ ತಿಳಿಸಲಾಗಿರುತ್ತದೆ. ಗುತ್ತಿಗೆದಾರರ ಕಾರ್ಯವೈಖರಿ ಬಗ್ಗೆ ಸ್ಥಳೀಯ ಪಾಲಿಕೆ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಅಸಮರ್ಪಕ ನಿರ್ವಹಣೆ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಸದರಿ ಕ್ರೀಡಾಂಗಣವನ್ನು ದಿನಾಂಕ:17.12.2010ರಂದು ಪರಿವೀಕ್ಷಿಸಲಾಗಿದ್ದು, ಕ್ರೀಡಾ ಸಂಕೀರ್ಣದ ಸ್ಥಿತಿಗತಿಗಳನ್ನು ವಿಡಿಯೋಗ್ರಾಫ್ ಮಾಡಿಸಿ ಮತ್ತು ಛಾಯಾ ಚಿತ್ರಗಳನ್ನು ತೆಗೆಸಿ ಹೊರಗುತ್ತಿಗೆಯನ್ನು ಹಿಂಪಡೆಯಲು ಸೂಚಿಸಲಾಗಿರುತ್ತದೆ.

Office of the I T A...sor
No. 50
Date 25/4/12
Bangalore M...nagara Palike

ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

→ 2

ಶ್ರೀ.ರಾಜೀವ್ ಗಾಂಧಿ ಕ್ರೀಡಾ ಸಂಕೀರ್ಣದ ಹೊರಗುತ್ತಿಗೆಯನ್ನು M/s.Arka Eduserve Pvt., Ltd. ರವರಿಂದ ಹಿಂಪಡೆಯಲು ಅನುಮೋದನೆಗಾಗಿ ಕ್ರೀಡಾ ಮತ್ತು ಶಿಕ್ಷಣ ಸ್ಥಾಯಿ ಸಮಿತಿಗೆ ಮಂಡಿಸಲಾದ ಟಿಪ್ಪಣಿ. **ದಿನಾಂಕ: 15.04.2011ರಂದು ಸ್ಥಳ ಪರಿಶೀಲನೆಗಾಗಿ ಮುಂದೂಡಿದ ಬಗ್ಗೆ ತೀರ್ಮಾನಕ್ಕಾಗಿ.**

ನಿರ್ಣಯ: ಸ್ಥಳ ಪರಿಶೀಲನೆ ಮಾಡಲಾಗಿದೆ, ನಿರ್ವಹಣೆ ಸಮರ್ಪಕವಾಗಿರುವುದಿಲ್ಲ. ಆದ್ದರಿಂದ, ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಹೊರಗುತ್ತಿಗೆಯನ್ನು ಹಿಂಪಡೆಯಲು ಸಮಿತಿ ಒಪ್ಪಿದೆ.

ವಿಷಯ: ಶಿ.ಸ್ಥಾ.ಸ/19/11-12

ವಿಷಯ: ಶ್ರೀಮತಿ.ಎನ್.ಮಲ್ಲಾಜಮ್ಮ, ಉಪನ್ಯಾಸಕರು, ಸಿ.ಜೆ.ಸಿ. ಮಾಗಡಿ ರಸ್ತೆ ರವರ ಮಗನಾದ ಶ್ರೀ.ಎಂ.ಎಲ್.ಶಿವರಾಜ್ ರವರ ಮೆಡಿಕಲ್ ವ್ಯಾಸಂಗಕ್ಕೆ ತಗಲುವ ಪೂರ್ಣ ವೆಚ್ಚವನ್ನು ಪಾಲಿಕೆಯ ವತಿಯಿಂದ ಭರಿಸುವ ಕುರಿತು.

★★★

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(6)ಪಿಆರ್/50/11-12, ದಿನಾಂಕ:12.03.2012ರ ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:06.09.2011ರಂದು ಶ್ರೀಮತಿ.ಎನ್/ಮಲ್ಲಾಜಮ್ಮ, ಉಪನ್ಯಾಸಕರು, ಸಿ.ಜೆ.ಸಿ ಮಾಗಡಿ ರಸ್ತೆ ರವರು ಮನವಿಯನ್ನು ಸಲ್ಲಿಸಿ ಅವರ ಮಗನಾದ ಶ್ರೀ.ಎಂ.ಎಲ್.ಶಿವರಾಜ್ ರವರು ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು ಮಾಗಡಿ ರಸ್ತೆ ಇಲ್ಲಿ ಪಿ.ಯು.ಸಿ ವ್ಯಾಸಂಗ ಮಾಡಿ 2011ರ ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ (539 ಅಂಕಗಳು) ಉತ್ತೀರ್ಣರಾಗಿರುವ ಪ್ರಯುಕ್ತ ಹಾಗೂ ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿಯವರು ಪಾಲಿಕೆಯ ಕಾಲೇಜಿನಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣತೆ ಹೊಂದಿ ಮೆಡಿಕಲ್ ಅಥವಾ ಇಂಜಿನೀಯರಿಂಗ್ ಅಭ್ಯಾಸ ಮಾಡುವ ವಿದ್ಯಾರ್ಥಿಗಳನ್ನು ಪಾಲಿಕೆಯು ದತ್ತು ತೆಗೆದುಕೊಂಡು, ಸದರಿ ವ್ಯಾಸಂಗಕ್ಕೆ ತಗಲುವ ಎಲ್ಲಾ ವೆಚ್ಚವನ್ನು ಭರಿಸಲಾಗುವುದೆಂದು ತಿಳಿಸಿರುವ ಮೇರೆಗೆ, ತಮ್ಮ ಮಗನ ಮೆಡಿಕಲ್ ಕಾಲೇಜಿಗೆ ಕಟ್ಟಿರುವ ಟ್ಯೂಷನ್ ಫೀ ರೂ.42,500.00, ಯು.ಎಫ್ ಮತ್ತು ಸಿ.ಎಫ್ ರೂ.21,500.00, ಇನ್‌ಟೆನ್ಸ್ ಫೀ ರೂ.24,000.00 ಒಟ್ಟು ರೂ.88,000.00 ಹಾಗೂ ಬುಕ್ಸ್, ಇತರೇ ಖರ್ಚು, ಸಾರಿಗೆ ವೆಚ್ಚ ಮುಂತಾದ ಖರ್ಚಿನ ಕೆಳಗಿನ ಪಟ್ಟಿಯಲ್ಲಿ ತೋರಿಸಿರುವಂತೆ ಪೂರ್ಣಾವಧಿ 4½ ವರ್ಷಗಳ ಅವಧಿಗೆ ತಗಲುವ ವೆಚ್ಚ ಒಟ್ಟು ಮೊತ್ತ ರೂ.3,95,300.00ಗಳನ್ನು ಪಾವತಿಸಲು ಕೋರಿರುತ್ತಾರೆ.

| Sl. No. | Particulars of expenditure | 1st year | 2nd year | 3rd year | 4th year | ½ year |
|---|---|---|---|---|---|---|
| 1 | Tuition Fee | 42,500 | 41,100 | 41,000 | 41,100 | 21,000 |
| 2 | Books Cost | 10,000 | 10,000 | 10,000 | 10,000 | 10,000 |
| 3 | Other Charges | 10,000 | 10,000 | 10,000 | 10,000 | 10,000 |
| 4 | Transportation Fee | 14,000 | 14,000 | 14,000 | 14,000 | 7,000 |
| 5 | UF & CF | 21,500 | - | - | - | - |
| 6 | Intension Fee | 24,000 | - | - | - | - |
| | **Total** | **1,22,000** | **75,100** | **75,100** | **75,100** | **48,000** |

ಉಪ ಮಹಾಪೌರರು ಸದರಿಯವರ ಮನವಿಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಟಿಪ್ಪಣಿಯಲ್ಲಿ ಸೂಚಿಸಿರುತ್ತಾರೆ.

K. [signature]
ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

→ 3

ಜಾಹೀರಾತಿನಲ್ಲಿ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇ.85%ಕ್ಕಿಂತ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವುದರೊಂದಿಗೆ ದತ್ತು ಪಡೆದು ಉನ್ನತ ವ್ಯಾಸಂಗಕ್ಕಾಗಿ (ಮೆಡಿಕಲ್ ಅಥವಾ ಇಂಜಿನೀಯರಿಂಗ ಕೋರ್ಸ್) ಹಾಗೂ ವೃತ್ತಿಪರ ವ್ಯಾಸಂಗಕ್ಕಾಗಿ ಎಲ್ಲಾ ವೆಚ್ಚವನ್ನು ನಗರ ಪಾಲಿಕೆ ಭರಿಸುತ್ತದೆ ಎಂದು ಪ್ರಕಟಣೆ ಹೊರಡಿಸಲಾಗಿರುತ್ತದೆ.

ಅದರಂತೆ ಶ್ರೀ.ಎಂ.ಎಲ್.ಶಿವರಾಜ್ ರವರು ಸಿ.ಜೆ.ಸಿ. ಮಾಗಡಿ ರಸ್ತೆ, ಇಲ್ಲಿ ವ್ಯಾಸಂಗ ಮಾಡಿ ಉನ್ನತ ದರ್ಜೆಯಲ್ಲಿ ಉತ್ತೀರ್ಣತೆ ಹೊಂದಿರುವ ಮೇರೆಗೆ, ಈಗಾಗಲೇ ಪಾಲಿಕೆಯಿಂದ ರೂ.35,000.00ಗಳ ಪ್ರೋತ್ಸಾಹ ಧನವನ್ನು ನೀಡಲಾಗಿರುತ್ತದೆ ಹಾಗೂ ಶ್ರೀಮತಿ.ಎನ್.ಮಲ್ಲಾಜಮ್ಮ ರವರು ಪಾಲಿಕೆಯ ಖಾಯಂ ನೌಕರರಾಗಿದ್ದು, ಸಿ.ಜೆ.ಸಿ ಮಾಗಡಿ ರಸ್ತೆಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುತ್ತಾರೆ.

ಶಿಕ್ಷಣ ಸ್ಥಾಯಿ ಸಮಿತಿಯಿಂದ ಹೊರಡಿಸಿರುವ ಜಾಹೀರಾತಿನಂತೆ, ಸದರಿ ವಿದ್ಯಾರ್ಥಿಗೆ ಮೆಡಿಕಲ್ ವ್ಯಾಸಂಗ ಮಾಡಲು 4½ ವರ್ಷಗಳ ಪೂರ್ಣಾವಧಿಗೆ ತಗಲುವ ಮೇಲ್ಕಂಡ ಪ್ರತಿ ವರ್ಷವೂ ಸಹ 2011-12ನೇ ಸಾಲಿನ ಆಯ-ವ್ಯಯ ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಎಸ್.ಸಿ/ಎಸ್.ಟಿ - ಕಲ್ಯಾಣ(22.75%ರ ಅಡಿಯಲ್ಲಿ), ಪೌರಕಾರ್ಮಿಕರ, ಗ್ಯಾಂಗ್‌ಮೆನ್‌ಗಳ ಮತ್ತು ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ (P 0224) ಲೆಕ್ಕ ಶೀರ್ಷಿಕೆಯಲ್ಲಿ ಮೀಸಲಿರಿಸಿರುವ ರೂ.20.00ಲಕ್ಷಗಳ ಅನುದಾನದಲ್ಲಿ ಪಾವತಿ ಮಾಡಲು ಮಂಜೂರು ಮಾಡುವ ಸಂಬಂಧ ಶಿಕ್ಷಣ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ:</u>** ತಾರೀಖು:17.03.2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

<u>ವಿಷಯ: ಶಿ.ಸ್ಥಾ.ಸ/20/11-12</u>

ವಿಷಯ: ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ರೀಡಿಂಗ್ ರೂಂ ಸಲಕರಣೆಗಳನ್ನು ಒದಗಿಸುವ ಬಗ್ಗೆ.

***

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ/ಸ.ಶಿಅ/ಪಿಆರ್/52/11-12, ದಿನಾಂಕ:07.03.2012ರ ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮದಡಿಯಲ್ಲಿ ಮತ್ತು ವಿದ್ಯಾರ್ಥಿಗಳಿಗೆ ಮಹಾಪುರುಷರ ಜೀವನ ಚರಿತ್ರೆ ಹಾಗೂ ಉತ್ತಮ ಗುಣಮಟ್ಟದ ಪುಸ್ತಕಗಳಾದಂತಹ ಕ್ವಿಜ್ ಪುಸ್ತಕಗಳು, ಸಾಮಾನ್ಯ ವಿಜ್ಞಾನ, ಕಥೆಗಳು, ಕಾವ್ಯಗಳು, ನಿಘಂಟು, ಚರಿತ್ರೆ, ಭೌಗೋಳಿಕ, ನೀತಿ ಶಾಸ್ತ್ರ, ಖಗೋಳಶಾಸ್ತ್ರ ಇನ್ನೂ ಅನೇಕ ಅವಶ್ಯಕ ಪುಸ್ತಕಗಳನ್ನು ಕ್ರಮಬದ್ಧವಾಗಿ ರೀಡಿಂಗ್ ರೂಂನಲ್ಲಿ ಶೇಖರಿಸಿಡಲು ಮತ್ತು ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ರೀಡಿಂಗ್ ರೂಂನಲ್ಲಿ ಕುಳಿತು ಓದುವಂತೆ ಪ್ರೇರೇಪಿಸಿ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಲೈಬ್ರರಿ ಸಲಕರಣೆಗಳು(ಫರ್ನಿಚರ್) ಹಾಗೂ ಮೇಲ್ಕಂಡ ಸದರಿ ಪುಸ್ತಕಗಳನ್ನು ವಿತರಣ ಎ ಮಾಡುವ ಕಾರ್ಯಕ್ರಮಕ್ಕಾಗಿ 2011-12ನೇ ಸಾಲಿನ ಆಯ-ವ್ಯಯದಲ್ಲಿ ರೂ.150.00ಲಕ್ಷಗಳನ್ನು (ಪಿ2256) ನಿಗದಿಪಡಿಸಲಾಗಿರುತ್ತದೆ. ಸದರಿ ಮೊತ್ತದಲ್ಲಿ ಮೇಲ್ಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅವಶ್ಯಕ ಸಾಮಗ್ರಿಗಳಿಗೆ ಮರುಟೆಂಡರ್ ಕರೆಯುವ ಮೂಲಕ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ದಿನಾಂಕ:11.11.2011ರಂದು ಟೆಂಡರ್ ಪ್ರಕಟಣೆಯನ್ನು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ದಿನಾಂಕ:12.11.11ರಂದು

→4

ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಕನ್ನಡ ಮತ್ತು ಇಂಗ್ಲೀಷ್ ದಿನಪತ್ರಿಕೆಗಳಲ್ಲಿ ಟೆಂಡರ್ ಪ್ರಕಟಿಸಲಾಗಿರುತ್ತದೆ ಮತ್ತು ಟೆಂಡರ್ ನಿಯಮ ನಿಬಂಧನೆಗಳೊಂದಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ (ದ್ವಿ-ಲಕೋಟೆ) ಪಬ್ಲಿಷ್ ಮಾಡಲಾಗಿದೆ. ಈ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ದಿನಾಂಕ:21.11.2011ರಂದು ಕೊನೆ ದಿನವಾಗಿರುತ್ತದೆ. ದಿನಾಂಕ:23.11.11ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ (1) ಮೆ:ಎಸ್.ಕೆ.ಸ್ಟೀಲ್ ಇಂಡಸ್ಟ್ರೀಸ್ # 1305, 5ನೇ ಕ್ರಾಸ್, ಪ್ರಕಾಶನಗರ, ಬೆಂ-21, (2) ಮೆ:ಡಿ.ಎಸ್.ಎಂ.ಎಸ್. ಅರ್ಬನ್, ಕಸ್ತೂರ್‌ಬಾ ರಸ್ತೆ, ಬೆಂಗಳೂರು ಮತ್ತು (3) ಮೆ:ಸುನೀಲ್ ಎಂಟರ್ ಪ್ರೈಸಸ್ # 6, ಕುಬೇರ್ ಕುಂಜ್, 4ನೇ ಕ್ರಾಸ್, ವೇಣುಗೋಪಾಲಸ್ವಾಮಿ ಲೇಔಟ್, ಈಜಿಪುರ, ಬೆಂ-47 ರವರುಗಳು ಭಾಗವಹಿಸಿರುತ್ತಾರೆ.

ಮೇಲ್ಕಂಡ 3 ಜನ ಟೆಂಡರ್‌ದಾರರುಗಳ ಟೆಕ್ನಿಕಲ್ ಬಿಡ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಲಾಗಿದೆ. ಸದರಿ 3 ಜನ ಟೆಂಡರ್‌ದಾರರುಗಳ ಟೆಕ್ನಿಕಲ್ ಬಿಡ್ ದಾಖಲೆಗಳನ್ನು ಪರಿಶೀಲಿಸಿದಾಗ ಮೆ:ಎಸ್.ಕೆ.ಸ್ಟೀಲ್ ಇಂಡಸ್ಟ್ರೀಸ್ ಮತ್ತು ಮೆ:ಡಿ.ಎಸ್.ಎಂ.ಎಸ್ ರವರುಗಳು ಮಾತ್ರ ಪೂರ್ಣ ದಾಖಲಾತಿ ಪ್ರತಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಮೆ:ಸುನೀಲ್ ಎಂಟರ್ ಪ್ರೈಸಸ್ ರವರು ಟೆಂಡರ್‌ನ ನಿಯಮ ನಿಬಂಧನೆಗಳಲ್ಲಿ ತಿಳಿಸಿರುವ Sl.No. 13(b) Vat clearance certificate ಸಲ್ಲಿಸಿರುವುದಿಲ್ಲ. Sl.No.13(d) Quality Assurance 14001-2044 & OHSHAS 18001-2007 certificate for manufacturing and supply of furniture ಸಲ್ಲಿಸಿರುವುದಿಲ್ಲ. SL. No>13(f) 2010-11ನೇ Charterd Account certificate of Trade account turnover for Rs.1.00 crore ಸಲ್ಲಿಸಿರುವುದಿಲ್ಲ. Sl. No>13(g) 2010-11ನೇ ಸಾಲಿನ Income Tax return , ಸಲ್ಲಿಸಿರುವುದಿಲ್ಲ. Sl.No.13 (h) 2 ವರ್ಷಗಳ Satifactory performance work certificate for the supply of furniture to the Government Department ಸಲ್ಲಿಸಿರುವುದಿಲ್ಲ. Sl.No.(j) Documents for supplying furniture to any state or Central Government Organization in a single order for a total value not less than Rs.80.00 lakhs or two orders for total value not less than Rs.40.00 lakhs each in any one year during the financial year i.e., 2009-10 or 2010-11 supply order copy ಸಲ್ಲಿಸಿರುವುದಿಲ್ಲ.

ಟೆಂಡರ್‌ನ ನಿಯಮ ನಿಬಂಧನೆಯಲ್ಲಿ ತಿಳಿಸಿರುವಂತೆ ಟೆಂಡರ್‌ನ ಟೆಕ್ನಿಕಲ್ ಬಿಡ್‌ನಲ್ಲಿ ಇಬ್ಬರು ಟೆಂಡರ್‌ದಾರರಾದಂತಹ ಮೆ:ಎಸ್.ಕೆ.ಸ್ಟೀಲ್ ಇಂಡಸ್ಟ್ರೀಸ್ ಮತ್ತು ಮೆ:ಡಿ.ಎಸ್.ಎಂ.ಎಸ್. ರವರುಗಳು ಪೂರ್ಣ ದಾಖಲೆ ಪ್ರತಿಗಳನ್ನು ಸಲ್ಲಿಸಿರುವ ಕಾರಣ ಇವರುಗಳು ಟೆಂಟರ್‌ನ ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹ ಟೆಂಡರ್‌ದಾರರುಗಳೆಂದು ಪರಿಗಣಿಸಬಹುದಾಗಿದೆ ಮೆ:ಸುನೀಲ್ ಎಂಟರ್ ಪ್ರೈಸಸ್ ರವರು ಟೆಂಡರ್‌ನ ನಿಯಮ ನಿಬಂಧನೆ ಪ್ರಕಾರ ಮೇಲೆ ತಿಳಿಸಿರುವ ಸಮಂಜಸವಾದ ದಾಖಲೆ ಪ್ರತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಇವರ ಟೆಕ್ನಿಕಲ್ ಬಿಡ್‌ನ್ನು ಅನರ್ಹಗೊಳಿಸಬಹುದಾಗಿದೆ ಮತ್ತು ಟೆಂಡರ್‌ನ ನಿಯಮ ನಿಬಂಧನೆ ಕ್ರ.ಸಂ.14ರಲ್ಲಿ ತಿಳಿಸಿರುವಂತೆ ಇವರ ಫೈನಾನ್ಶಿಯಲ್ ಬಿಡ್‌ನ್ನು ತಿರಸ್ಕರಿಸಬಹುದಾಗಿದೆ. ಈ ಬಗ್ಗೆ ನಡೆದ ಸಭೆಯ ನಡವಳಿಕೆಗಳನ್ನು ಕಡತದಲ್ಲಿ ಲಗತ್ತಿಸಲಾಗಿದೆ. ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹ ಟೆಂಡರ್‌ದಾರರುಗಳಾದಂತಹ ಮೆ:ಎಸ್.ಕೆ.ಸ್ಟೀಲ್ಸ್ ಇಂಡಸ್ಟ್ರೀಸ್ ಮತ್ತು ಮೆ:ಡಿ.ಎಸ್.ಎಂ.ಎಸ್ ರವರುಗಳ ಫೈನಾನ್ಶಿಯಲ್ ಬಿಡ್‌ನ್ನು ದಿನಾಂಕ:02.12.11ರಂದು ತೆರವುಗೊಳಿಸಲಾಗಿದ್ದು, ಇವರುಗಳು ಸಲ್ಲಿಸಿರುವ ದರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲಾಗಿರುತ್ತದೆ.

ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

→5

ಅರ್ಹ ಟೆಂಡರ್‌ದಾರರುಗಳಾದಂತಹ ಮೆ:ಎಸ್.ಕೆ.ಸ್ಟೀಲ್ಸ್ ಇಂಡಸ್ಟ್ರೀಸ್ ಮತ್ತು ಮೆ:ಡಿ.ಎಸ್.ಎಂ.ಎಸ್ ರವರುಗಳು ಟೆಂಡರ್‌ನಲ್ಲಿ ತಿಳಿಸಿರುವ ಕ್ರ.ಸ. 1 ರಿಂದ 6 ವರೆಗಿನ ಸಾಮಗ್ರಿಗಳಿಗೆ ಸಲ್ಲಿಸಿರುವ ದರಗಳನ್ನು ಪರಿಶೀಲಿಸಿ ದರಗಳನ್ನು ಓದಲಾಯಿತು. ದರಗಳ ತುಲನಾತ್ಮಕ ಪಟ್ಟಿ ತಯಾರಿಸಿ(ಲಗತ್ತಿಸಲಾಗಿದೆ) ಪರಿಶೀಲಿಸಿದಾಗ ಮೆ:ಎಸ್.ಕೆ.ಸ್ಟೀಲ್ಸ್ ಇಂಡಸ್ಟ್ರೀಸ್ ರವರು ಕಡಿಮೆ ದರಗಳನ್ನು ನೀಡಿರುವುದು ಕಂಡು ಬಂದಿದ್ದು, ಇವರನ್ನು ಎಲ್-1, ಟೆಂಡರ್‌ದಾರರೆಂದು ಪರಿಗಣಿಸಬಹುದಾಗಿರುತ್ತದೆ ಮೆ:ಡಿ.ಎಸ್.ಎಂ.ಎಸ್. ರವರು ಮೆ:ಎಸ್.ಕೆ.ಸ್ಟೀಲ್ಸ್ ರವರಿಗಿಂಗ ಹೆಚ್ಚಿನ ದರಗಳನ್ನು ನೀಡಿರುವ ಕಾರಣ ಇವರನ್ನು ಎಲ್-2 ಟೆಂಡರ್‌ದಾರರೆಂದು ಪರಿಗಣಿಸಬಹುದಾಗಿರುತ್ತದೆ ಎಲ್-1 ಮತ್ತು ಎಲ್-2 ಟೆಂಡರ್‌ದಾರರುಗಳು ಸಾಮಗ್ರಿಗಳಿಗೆ ಸಲ್ಲಿಸಿರುವ ದರಗಳ ತುಲನಾತ್ಮಕ ಪಟ್ಟಿ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸ | ಸಾಮಗ್ರಿಗಳ ವಿವರ | ಪ್ರಮಾಣ | ಮೆ:ಎಸ್.ಕೆ.ಸ್ಟೀಲ್ಸ್ ಇಂಡಸ್ಟ್ರೀಸ್ | ಮೆ:ಡಿ.ಎಸ್.ಎಂ.ಎಸ್ |
|---|---|---|---|---|
| 1 | Book Case: Overall size 65" H X 32" W X 12"D with plain glass doors disappearing type made out of 20G. CRCA Sheet. The book case shall be derused, primer coated and painted with synthetic paint as per indentor's choice. Looking common keys are in duplicate. | Each | Rs.11,347.00 | Rs.14,000.00 |
| 2 | Filing Cabinet (Four Drawers) Overall Size: 51" X 18" X 28" with four drawers & single lock made out of 20G & CRCA sheet. The entire cabinet shall be neatly dugustyed, primary, coated & painted with two coats of synthetic enamed paint as per inventor's choice. | Each | Rs.14,196.00 | Rs.15,700.00 |
| 3 | Steel Slotted Angle Rack: Overall Size: 6"H X 15"D X 36 W with four upright and five panels, the uprights shall be slotted angle of section 36X36X2mm and the panels of size 36"X 15" made out of 20G. The panels should be fixed to the uprights by means of GL. Bolts of sizes 8mm X 16mm by providing 08 nos standard gussets at corners. The rack shall be painted as per indenter's choice. | Each | 4,849.50 | Rs.5,500.00 |

K. [signature] → 6

ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

| | | | | |
|---|---|---|---|---|
| 4 | *Cushion Chair:* *The frame shall be made out of 16G MS tubular structure neatly powder coated. The seat shall be provided with high density cushion uphostered with good quality fabric.* | *Each* | *Rs.2,860.00* | *3,450.00* |
| 5 | *Reading Table:* *Overall size 6'X 2½' made out of 32 X 32 mm square tube. The top shall be made out of 18mm thick prelaminated particle board with 32mm teak wood beading all around neatly polished. The legs shall be provided with nylon shoes.* | *Each* | *Rs.8,242.00* | *Rs.11,000.00* |
| 6 | *Steel Almirah with Glass Doors:* *Steel almirah of overall size 78"H X 36"W X 19"D with four fixed shelves making five compartments & the almirah shall be provided with double doors with 4mm thick plain glass & three way lock made out of 20G X 22G and neatly painted with synthetic enamel paint* | *Each* | *Rs.13,566.00* | *Rs.14,900.00* |
| | *(The above rates are inclusive vat 14%)* | | | |

*2011-12ನೇ ಸಾಲಿನ ಆಯವ್ಯಯದಲ್ಲಿ ಪಾಲಿಕೆಯ ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮದಲ್ಲಿ ಅನುಷ್ಠಾನಗೊಳಿಸಲು ಒಟ್ಟು ಮೊತ್ತ ರೂ.150.00(ಪಿ2256) ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.*

*ಮೇಲ್ಕಂಡ ಮೊತ್ತಕ್ಕೆ ಅನುಗುಣವಾಗಿ ಪಾಲಿಕೆಯು 34 ಪ್ರೌಢ ಶಾಲೆಗಳು ಮತ್ತು 13 ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಲಾ ಒಂದು ಶಾಲಾ/ಕಾಲೇಜಿಗೆ ಪ್ರತ್ಯೇಕ ರೀಡಿಂಗ್ ರೂಂಗಳಿಗೆ ಜರೂರಾಗಿ ಬೇಕಾಗಿರುವ ಪ್ರಮಾಣದಷ್ಟು ಅಗತ್ಯ ಸಾಮಗ್ರಿಗಳನ್ನು ಕೆಳಕಂಡಂತೆ ಲೆಕ್ಕಾಚಾರ ಮಾಡಿ ಎಲ್-1 ಮತ್ತು ಎಲ್-2 ಟೆಂಡರ್‌ದಾರರುಗಳ ಟೆಂಡರ್ ದರಗಳು ಹಾಗೂ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.*

*ಎಲ್-1 ಟೆಂಡರ್‌ದಾರರಾದಂತಹ ಮೆ:ಎಸ್.ಕೆ.ಸ್ಟೀಲ್ಸ್ ಇಂಡಸ್ಟ್ರೀಸ್ ರವರ ತಲಾ ಒಂದು ಸಾಮಗ್ರಿಗೆ ನೀಡಿರುವ ದರಗಳು ಮತ್ತು ಸಾಮಗ್ರಿಗಳ ಅಗತ್ಯ ಪ್ರಮಾಣಕ್ಕೆ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.*

K. [signature]

ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

→ 7

| ಕ್ರ.ಸ | ಸಾಮಗ್ರಿಗಳ ವಿವರ | ಒಟ್ಟು ಶಾಲಾ/ ಕಾಲೇಜು ಗಳ ಸಂಖ್ಯೆ | ತಲಾ ಒಂದು ಶಾಲಾ/ ಕಾಲೇಜಿಗೆ ಬೇಕಾಗಿರುವ ಪ್ರಮಾಣ | ಬೇಕಾಗಿರುವ ಒಟ್ಟು ಪ್ರಮಾಣ | ದರ (ಒಂದಕ್ಕೆ ರೂ.ಪೈ) | ಒಟ್ಟು ಮೊತ್ತ (ರೂ.ಪೈ) |
|---|---|---|---|---|---|---|
| 1 | BOOK CASE | 47 | 8 | 376 | 11,347 | 42,66,472 |
| 2 | FILING CABINET | 47 | 2 | 94 | 14,196 | 13,34,424 |
| 3 | STEEL SLOTTED ANGLE RACK | 47 | 9 | 423 | 4,849 | 20,51,127 |
| 4 | CUSHION CHAIR | 47 | 12 | 564 | 2,860 | 16,13,040 |
| 5 | READING TABLE | 47 | 8 | 376 | 8,242 | 30,98,992 |
| 6 | STEEL ALMIRAH WITH GLASS DOORS | 47 | 4 | 188 | 13,566 | 25,50408 |
| | | | | | TOTAL Rs. | 1,49,14,463 |

ಎಲ್-2 ಟೆಂಡರ್‌ದಾರರಾದಂತಹ ಮೆ:ಡಿ.ಎಸ್.ಎಂ.ಎಸ್. ಅರ್ಬನ್ ರವರು ತಲಾ ಒಂದು ಸಾಮಗ್ರಿಗೆ ನೀಡಿರುವ ದರಗಳು ಮತ್ತು ಸಾಮಗ್ರಿಗಳ ಅಗತ್ಯ ಪ್ರಮಾಣಕ್ಕೆ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸ | ಸಾಮಗ್ರಿಗಳ ವಿವರ | ಒಟ್ಟು ಶಾಲಾ/ ಕಾಲೇಜು ಗಳ ಸಂಖ್ಯೆ | ತಲಾ ಒಂದು ಶಾಲಾ/ ಕಾಲೇಜಿಗೆ ಬೇಕಾಗಿರುವ ಪ್ರಮಾಣ | ಬೇಕಾಗಿರುವ ಒಟ್ಟು ಪ್ರಮಾಣ | ದರ (ಒಂದಕ್ಕೆ ರೂ.ಪೈ) | ಒಟ್ಟು ಮೊತ್ತ (ರೂ.ಪೈ) |
|---|---|---|---|---|---|---|
| 1 | BOOK CASE | 47 | 8 | 376 | 14,000 | 52,64,000 |
| 2 | FILING CABINET | 47 | 2 | 94 | 15,700 | 14,75,800 |
| 3 | STEEL SLOTTED ANGLE RACK | 47 | 9 | 423 | 5,500 | 23,26,500 |
| 4 | CUSHION CHAIR | 47 | 12 | 564 | 3,450 | 19,45,800 |
| 5 | READING TABLE | 47 | 8 | 376 | 11,000 | 41,36,000 |

K. [signature]
ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

→ 8

| | | | | | | |
|---|---|---|---|---|---|---|
| 6 | STEEL ALMIRAH WITH GLASS DOORS | 47 | 4 | 188 | 14,900 | 28,01,200 |
| | | | | | **TOTAL Rs.** | **1,79,49,300** |

ಮೇಲ್ಕಂಡ 1 ರಿಂದ 6 ರವರೆಗಿನ ರೀಡಿಂಗ ರೂಂ ಸಾಮಗ್ರಿಗಳಿಗೆ ಎಲ್-1 ಮತ್ತು ಎಲ್-2 ರವರುಗಳು ನೀಡಿರುವ ಟೆಂಡರ್ ದರಗಳಲ್ಲಿ ಅವಶ್ಯಕತೆ ಇರುವ ಪ್ರಮಾಣಕ್ಕನುಗುಣವಾಗಿ ಲೆಕ್ಕಾಚಾರ ಮಾಡಿದಾಗ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.

ಎಲ್-1 ರವರ ಒಟ್ಟು ಮೊತ್ತ ರೂ.1,49,14,463.00

ಎಲ್-2 ರವರ ಒಟ್ಟು ಮೊತ್ತ ರೂ.1,79,49,300.00

ಮೇಲ್ಕಂಡ 2 ಜನ ಟೆಂಡರ್‌ದಾರರುಗಳ ಒಟ್ಟು ಮೊತ್ತವನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಎಲ್-1 ಟೆಂಡರ್‌ದಾರರ ಒಟ್ಟು ಮೊತ್ತ ಎಲ್-2 ಟೆಂಡರ್‌ದಾರರ ಒಟ್ಟು ಮೊತ್ತಕ್ಕಿಂತ ಕಡಿಮೆ ಮೊತ್ತ ಇರುವುದರಿಂದ, ಎಲ್-1 ಟೆಂಡರ್‌ದಾರರ ದರಗಳನ್ನು ಅಂಗೀಕರಿಸಿ ಅನುಮೋದಿಸಬಹುದಾಗಿರುತ್ತದೆ.

ಎಲ್-2 ಟೆಂಡರ್‌ದಾರರಾದಂತಹ ಮೆ:ಡಿ.ಎಸ್.ಎಂ.ಎಸ್. ರವರು ಎಲ್-1 ಟೆಂಡರ್‌ದಾರರಾದಂತಹ ಮೆ:ಎಸ್.ಕೆ.ಸ್ಟೀಲ್ಸ್ ಇಂಡಸ್ಟ್ರೀಸ್ ರವರಿಗಿಂಗ ಹೆಚ್ಚಿನ ದರಗಳನ್ನು ನೀಡಿರುವ ಕಾರಣ ಇವರ ಟೆಂಡರ್ ದರಗಳನ್ನು ತಿರಸ್ಕರಿಸಬಹುದಾಗಿರುತ್ತದೆ.

ಎಲ್-2 ಟೆಂಡರ್‌ದಾರರು ಎಲ್-1 ಟೆಂಡರ್‌ದಾರರಿಗಿಂತ ಹೆಚ್ಚಿನ ದರಗಳನ್ನು ನೀಡಿರುವ ಕಾರಣ ಅವರ ಟೆಂಡರ್ ದರಗಳನ್ನು ತಿರಸ್ಕರಿಸಿ, ಎಲ್-1 ಟೆಂಡರ್‌ದಾರರ ದರಗಳನ್ನು ಪರಿಗಣಿಸಿ ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಬಹುದಾಗಿರುತ್ತದೆ.

ಎಲ್-1 ಟೆಂಡರ್‌ದಾರರಿಗೆ ದಿನಾಂಕ:26.11.11ರಂದು ಪತ್ರವನ್ನು ಬರೆದು ಟೆಂಡರ್‌ನಲ್ಲಿ ತಿಳಿಸಿರುವಂತೆ ಗುಣಮಟ್ಟ, ಅಳತೆ ಮತ್ತು ವಿನ್ಯಾಸ ಇರುವ ಸಾಮಗ್ರಿಗಳ ಸ್ಯಾಂಪಲ್‌ಗಳನ್ನು ದೃಢೀಕರಣ ಪತ್ರದೊಂದಿಗೆ ಪಾಲಿಕೆಯ ಮಲ್ಲೇಶ್ವರಂ ಪ್ರೌಢ ಶಾಲೆ ಇಲ್ಲಿಗೆ ದಿನಾಂಕ:30.11.11ರಂದು ಸಮಯ 11.00 ಘಂಟೆಗೆ ವೀಕ್ಷಿಸಲು ಒದಗಿಸುವಂತೆ ಸೂಚಿಸಲಾಗಿದ್ದು, ಅದರಂತೆ, ಮೆ:ಎಸ್.ಕೆ.ಸ್ಟೀಲ್ಸ್ ಇಂಡಸ್ಟ್ರೀಸ್ ರವರು ಮೆ:ಎಸ್.ಜಿ.ಎಸ್. ಇಂಡಿಯಾ ಲಿ., Testing & Verification Co., BTM Layout, B'lore ರವರಿಂದ ದೃಢೀಕರಿಸಿರುವ ಸ್ಯಾಂಪಲ್ ಸಾಮಗ್ರಿಗಳನ್ನು ದೃಢೀಕರಣ ವರದಿ ಪತ್ರದೊಂದಿಗೆ ಸಲ್ಲಿಸಿರುತ್ತಾರೆ.

ಎಲ್-1 ಟೆಂಡರ್‌ದಾರರು ಹಾಜರುಪಡಿಸಿರುವ ಮಾದರಿ ರೀಡಿಂಗ್ ರೂಂ ಸಾಮಗ್ರಿಗಳನ್ನು ವೀಕ್ಷಿಸಿ ಪರಿಶೀಲಿಸಲಾಗಿದ್ದು, ಮೆ:ಎಸ್.ಜಿ.ಎಸ್ ಇಂಡಿಯಾ ಲಿ., Testing & Verification Co., BTM Layout, B'lore ಟೆಂಡರ್‌ನ ನಿಯಮ ನಿಬಂಧನೆಯಲ್ಲಿ ತಿಳಿಸಿರುವ ಗುಣಮಟ್ಟ ಅಳತೆ ಮತ್ತು ವಿನ್ಯಾಸದ ಪ್ರಕಾರ ಇರುವುದಾಗಿ ತಿಳಿಸಿರುವ ವರದಿಯನ್ನು ಒಪ್ಪಬಹುದಾಗಿದೆ.

ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

→ 9

ಪಾಲಿಕೆಯು 34 ಪ್ರೌಢ ಶಾಲೆಗಳು 13 ಕಿರಿಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಓದುವ ಅಭ್ಯಾಸ ಹೆಚ್ಚಿಸುವ ಹಿತದೃಷ್ಟಿಯಿಂದ ಇತರೇ ಖಾಸಗಿ ಶಾಲಾ/ಕಾಲೇಜುಗಳಂತೆ ಮಾದರಿ ಶಾಲಾ/ಕಾಲೇಜುಗಳನ್ನಾಗಿ ಪರಿವರ್ತಿಸಲು, ವಿದ್ಯಾರ್ಥಿಗಳಿಗೆ ಉತ್ತಮ ಲೈಬ್ರರಿ ಸೌಲಭ್ಯಗಳನ್ನು ನೀಡಲು ರೀಡಿಂಗ್ ರೂಂಗಳಿಗೆ ಅವಶ್ಯಕವಾಗಿ ಬೇಕಾಗಿರುವ ಸಾಮಗ್ರಿಗಳನ್ನು ಈ ಕೆಳಕಂಡಂತೆ ಎಲ್-1 ಟೆಂಡರ್ ದರಗಳಲ್ಲಿ ಖರೀದಿಸಬಹುದಾಗಿರುತ್ತದೆ.

| ಕ್ರ. ಸ | ಸಾಮಗ್ರಿಗಳ ವಿವರ | ಒಟ್ಟು ಶಾಲಾ/ ಕಾಲೇಜುಗಳ ಸಂಖ್ಯೆ | ತಲಾ ಒಂದು ಶಾಲಾ/ ಕಾಲೇಜಿಗೆ ಬೇಕಾಗಿರುವ ಪ್ರಮಾಣ | ಬೇಕಾಗಿರುವ ಒಟ್ಟು ಪ್ರಮಾಣ | ದರ (ಒಂದಕ್ಕೆ ರೂ.ಪೈ) | ಒಟ್ಟು ಮೊತ್ತ (ರೂ.ಪೈ) |
|---|---|---|---|---|---|---|
| 1 | BOOK CASE | 47 | 8 | 376 | 11,347 | 42,66,472 |
| 2 | FILING CABINET | 47 | 2 | 94 | 14,196 | 13,34,424 |
| 3 | STEEL SLOTTED ANGLE RACK | 47 | 9 | 423 | 4,849 | 20,51,127 |
| 4 | CUSHION CHAIR | 47 | 12 | 564 | 2,860 | 16,13,040 |
| 5 | READING TABLE | 47 | 8 | 376 | 8,242 | 30,98,992 |
| 6 | STEEL ALMIRAH WITH GLASS DOORS | 47 | 4 | 188 | 13,566 | 25,50408 |
| | | | | | TOTAL Rs. | 1,49,14,463 |

ಮೇಲ್ಕಂಡಂತೆ ನಮೂದಿಸಿರುವ ಪ್ರಮಾಣದಷ್ಟು ಸಾಮಗ್ರಿಗಳನ್ನು ಎಲ್-1 ಟೆಂಡರ್ ದರಗಳಲ್ಲಿ ಖರೀದಿಸಲು ಖರೀದಿ ವೆಚ್ಚ ಒಟ್ಟು ಮೊತ್ತ ರೂ.1,49,14,463.00ಗಳಾಗುತ್ತದೆ. ಈ ವೆಚ್ಚವನ್ನು 2011-12ನೇ ಸಾಲಿನ ಆಯ-ವ್ಯಯ 25 ಶಿಕ್ಷಣ, ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮವಾಗಿ ನಿಗದಿಪಡಿಸಿರುವ ಅನುದಾನ ರೂ.150.00ಲಕ್ಷಗಳಲ್ಲಿ(ಪಿ2256) ಖರೀದಿ ವೆಚ್ಚವನ್ನು ಭರಿಸಬಹುದಾಗಿದೆ. ಸದರಿ ಖರೀದಿ ವೆಚ್ಚ ರೂ.1,49,14,463.00ಗಳನ್ನು ಮಂಜೂರು ಮಾಡಲು ಮತ್ತು ಪಾರದರ್ಶಕ ನಿಯಮಾನುಸಾರ ಟೆಂಡರ್‌ನಲ್ಲಿ ಕಡಿಮೆ ದರ ನೀಡಿರುವ ಮೆ:ಎಸ್.ಕೆ.ಸ್ಟೀಲ್ಸ್ ಇಂಡಸ್ಟ್ರೀಸ್ ರವರಿಗೆ ಸರಬರಾಜು ಆದೇಶ ನೀಡಲು ಶಿಕ್ಷಣ ಸ್ಥಾಯಿ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ತಾರೀಖು:07.03.2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

**ವಿಷಯ: ಶಿ.ಸ್ಥಾ.ಸ/01/12-13**

ವಿಷಯ: ವಾರ್ಡ್ ನಂ:127ರ ಮೂಡಲಪಾಳ್ಯ ವ್ಯಾಪ್ತಿಯಲ್ಲಿರುವ ಪಂಚಶೀಲನಗರದ ಶಿಶುವಿಹಾರ ಕಟ್ಟಡದಲ್ಲಿ ಹೊಸದಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸುವ ಕುರಿತು.

***

K. [signature]
ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

→ 10

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/210/11-12, ದಿನಾಂಕ:10.04.2012ರಂದು ಹಾಗೂ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ.ಎನ್.ಶಾಂತಕುಮಾರಿ, ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್-127, ಮೂಡಲಪಾಳ್ಯ ರವರು ವಿಳಾಸ ಮಾಡಿರುವ ಪತ್ರದಲ್ಲಿ ವಾರ್ಡ್-127ರ ಪಂಚಶೀಲನಗರದಲ್ಲಿ ಆರ್ಥಿಕವಾಗಿ ಹಿಂದುಳಿದವರು, ಕೂಲಿ ಕಾರ್ಮಿಕರ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದು, ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಪ್ರದೇಶದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸುವುದು ಅವಶ್ಯಕವಿರುತ್ತದೆ. ಹಾಲಿ ಪಂಚಶೀಲನಗರದಲ್ಲಿ ನಗರ ಪಾಲಿಕೆಯ ಶಿಶುವಿಹಾರವು ನಡೆಯುತ್ತಿದ್ದು, ಸದರಿ ಕಟ್ಟಡವು ವಿಶಾಲವಾಗಿದ್ದು, ಈ ಕಟ್ಟಡದಲ್ಲಿ ನಗರ ಪಾಲಿಕೆಯ ವತಿಯಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ (1 ರಿಂದ 7ನೇ ತರಗತಿಯವರೆಗೆ) ಶಾಲೆಯನ್ನು ಪ್ರಾರಂಭಿಸುವುದು ಸೂಕ್ತವಾಗಿರುತ್ತದೆ. ಈ ನಿಟ್ಟಿನಲ್ಲಿ ಪಂಚಶೀಲನಗರದಲ್ಲಿರುವ ನಗರ ಪಾಲಿಕೆ ಶಿಶುವಿಹಾರ ಕಟ್ಟಡದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಲು ಶಿಕ್ಷಣ ಇಲಾಖೆಯಿಂದ ಸೂಕ್ತ ಪ್ರಸ್ತಾವನೆಯನ್ನು ಪಡೆದು ಮಂಜೂರಾತಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಪತ್ರಕ್ಕನುಗುಣವಾಗಿ ಅಧ್ಯಕ್ಷರು ಶಿಕ್ಷಣ ಸ್ಥಾಯಿ ಸಮಿತಿ ರವರು ವರದಿ ಸಲ್ಲಿಸಲು ಕೋರಿದ್ದು, ಅದರಂತೆ, ಸಹಾಯಕ ವಿದ್ಯಾಧಿಕಾರಿ (ಕೇಂದ್ರ) ರವರು ಸ್ಥಳ ಪರಿಶೀಲನೆ ನಡೆಸಿ, ವಾರ್ಡ್-127ರ ವ್ಯಾಪ್ತಿಗೆ ಸೇರುವ ಪಂಚಶೀಲನಗರದಲ್ಲಿ ಬಡ ಮತ್ತು ಹಿಂದುಳಿದ ವರ್ಗದವರು ಹಾಗೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ನಗರ ಪಾಲಿಕೆ ಸದಸ್ಯರ ಕೋರಿಕೆಯಂತೆ ಪಂಚಶೀಲನಗರದಲ್ಲಿರುವ ಶಿಶುವಿಹಾರ ಕಟ್ಟಡದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸಬಹುದೆಂದು ವರದಿಯನ್ನು ನೀಡಿರುತ್ತಾರೆ.

ಸದರಿ ಪತ್ರಕ್ಕೆ ಅನುಗುಣವಾಗಿ ಪಂಚಶೀಲನಗರದಲ್ಲಿರುವ ಶಿಶುವಿಹಾರ ಕಟ್ಟಡದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸದಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯನ್ನು ಪ್ರಾರಂಭ ಮಾಡಬೇಕಿರುವ ಹಿನ್ನೆಲೆಯಲ್ಲಿ ಸರ್ಕಾರದ ಶಿಕ್ಷಣ ಇಲಾಖೆಗೆ ಪತ್ರ ಬರೆದು ಅನುಮತಿ ಪಡೆಯುವ ಸಂಬಂಧ, ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ:</u> ತಾರೀಖು: 10.04.2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

2011-12ನೇ ಸಾಲಿನ ಶಿಕ್ಷಣ ಸ್ಥಾಯಿ ಸಮಿತಿಯ ಎಲ್ಲಾ ಮಾನ್ಯ ಸದಸ್ಯರುಗಳ ಸಲಹೆ/ಸೂಚನೆಯ ಮೇರೆಗೆ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ತರುವಲ್ಲಿ ತಮ್ಮ ಸಹಕಾರಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಾ, ಅಧ್ಯಕ್ಷರು ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯ್ತು.

ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ದಿನಾಂಕ:14.06.2012ರಂದು ಶಿಕ್ಷಣ ಸ್ಥಾಯಿ ಸಮಿತಿಯು ನಡೆಸಿದ, ಅನಿರೀಕ್ಷಿತ ತಪಾಸಣೆಯ, ತಪಾಸಣಾ ವರದಿ

| ಕ್ರ.ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ.ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ಗೋಪಾಲ್ | ಶಿಕ್ಷಣಾಧಿಕಾರಿಗಳು |
| 2 | ಶ್ರೀಮತಿ.ವಸಂತಕುಮಾರಿ | ಸದಸ್ಯರು | 2 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| | | | 3 | ಶ್ರೀ.ಯರ್ರಪ್ಪ | ವಿಷಯ ಪರಿವೀಕ್ಷಕರು |
| | | | 4 | ಶ್ರೀ.ಎನ್.ಏಕಾಂತಪ್ಪ | ವಿಷಯ ಪರಿವೀಕ್ಷಕರು |
| | | | 5 | ಶ್ರೀ.ಅಶ್ವಥ್‌ನಾರಾಯಣ ಸ್ವಾಮಿ | ವಿಷಯ ಪರಿವೀಕ್ಷಕರು |
| | | | 6 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |

ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು, ಶಿಕ್ಷಣ ಇಲಾಖೆಯ ಅಧಿಕಾರಿ ವರ್ಗದವರು ದಿನಾಂಕ:14.06.2012ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಡೆತನದಲ್ಲಿನ ಪಿಳ್ಳಣ್ಣ ಗಾರ್ಡನ್‌ನಲ್ಲಿರುವ ಬಿ.ಬಿ.ಎಂ.ಪಿ.ಪ್ರೌಢ ಶಾಲೆಗೆ ಖುದ್ದು ಭೇಟಿ ನೀಡಲಾಯಿತು. ಸದರಿ ತಪಾಸಣೆಯಲ್ಲಿ ಎಂಟು, ಒಂಭತ್ತು ಮತ್ತು ಹತ್ತನೇ ತರಗತಿಗಳಿಗೆ ಶಾಲಾವಧಿಯಲ್ಲಿಯೇ ಶಿಕ್ಷಕರ ಬೋಧನಾ ವೈಖರಿಯನ್ನು ಪರಿಶೀಲಿಸಲಾಯಿತು.

ಹತ್ತನೇ ತರಗತಿಯ ಕೊಠಡಿಯಲ್ಲಿ ಹಾಜರಿದ್ದ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳ ಹಾಜರಾತಿಯನ್ನು ಕಪ್ಪು ಹಲಗೆಯ ಮೇಲೆ ನಮೂದಿಸಿರುವುದಿಲ್ಲ ಎಂಬ ಅಂಶವನ್ನು ಶ್ರೀಮತಿ.ವಸಂತಕುಮಾರಿ, ಮಾನ್ಯ ಸದಸ್ಯರು ರವರು ಗಮನಿಸಿ ವಿಷಯ ಬೋಧಕರಿಗೆ ಇನ್ನು ಮುಂದೆ, ಈ ರೀತಿ ಕರ್ತವ್ಯ ನಿರ್ಲಕ್ಷ್ಯ ಮಾಡದೇ, ತರಗತಿಗೆ ಬಂದ ಕೂಡಲೇ ಹಾಜರಾತಿಯ ಕಡೆ ಗಮನಹರಿಸಿ ಕಪ್ಪು ಹಲಗೆಯ ಮೇಲೆ ನಮೂದಿಸಲು ಸೂಚನೆ ನೀಡಿದರು. ಈ ರೀತಿಯ ಕರ್ತವ್ಯ ಲೋಪವು ಇನ್ನುಳಿದ ಎಲ್ಲಾ ತರಗತಿಗಳಲ್ಲಿಯು ಕಂಡು ಬಂದಿದ್ದು, ಈ ವಿಷಯವನ್ನು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ಸಹ ಶಿಕ್ಷಕರಿಗೆ ಇನ್ನು ಮುಂದೆ ಈ ರೀತಿ ನಿರ್ಲಕ್ಷ್ಯ ತೋರದಂತೆ, ಸೂಕ್ತ ಕ್ರಮವಹಿಸಲು ಮುಖ್ಯೋಪಾಧ್ಯಾಯರಿಗೆ ಶ್ರೀ.ಬಿ.ಗೋವಿಂದರಾಜು, ಅಧ್ಯಕ್ಷರು, ತಾಕೀತು ಮಾಡಲಾಗಿರುತ್ತಾರೆ.

ಮೂಲಭೂತ ಸೌಕರ್ಯವಾದ, ಶೌಚಾಲಯದ ವ್ಯವಸ್ಥೆಯನ್ನು ಪರಿಶೀಲಿಸಲಾಗಿ, ಬಾಲಕರ ಶೌಚಾಲಯದ ಬಾಗಿಲನ್ನೆ ಮುಚ್ಚಲಾಗಿದ್ದು, ತದನಂತರ ಬಾಗಿಲನ್ನು ತೆಗೆಸಿ ವೀಕ್ಷಣೆ ಮಾಡಿದಾಗ ಶೌಚಾಲಯವನ್ನು ಸ್ವಚ್ಛಗೊಳಿಸದೇ ಮಣ್ಣು ತುಂಬಿಕೊಂಡಿರುವುದರ ಜೊತೆಗೆ, ಬಾಲಕರು ಆವರಣದ ಗೋಡೆಗೆ ಮೂತ್ರ ವಿಸರ್ಜನೆ ಮಾಡಿರುವುದು ಕಂಡು ಬಂದಿರುತ್ತದೆ. ಬಾಲಕಿಯ ಶೌಚಾಲಯವು ತೆರೆದಿದ್ದು, ವ್ಯವಸ್ಥೆಯನ್ನು ಗಮನಿಸಿದಾಗ, ನೀರು ಶೇಖರಣೆ ಮಾಡಿರುವ ತೊಟ್ಟಿಯ ಮೇಲೆ ಮುಚ್ಚಲಾಗಿರುವುದಿಲ್ಲ ಎಂಬ ಅಂಶವನ್ನು ಕಂಡು ಇಂತಹ ಘಟನೆಗಳಿಂದಲೇ ಡೆಂಗ್ಯೂ ಹಾಗೂ ಮತ್ತಿತರ ರೋಗ ರುಜಿನೆಗಳು ತಗಲುವ ಸಂಭವವು ಹೆಚ್ಚಾಗುತ್ತವೆ ಎಂಬುದನ್ನು ತಿಳಿ ಹೇಳಿ ಮುಂದೆ, ಇಂತಹ ಘಟನೆಗಳು ಮರುಕಳಿಸದಂತೆ, ಕ್ರಮವಹಿಸಲು ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಣಾಧಿಕಾರಿಗಳಿಗೆ ಅಧ್ಯಕ್ಷರು ಎಚ್ಚರಿಕೆ ನೀಡಲಾಗಿರುತ್ತದೆ.

ಶಾಲಾವರಣದ ತಡೆ ಗೋಡೆಯನ್ನು ಪರಿಶೀಲಿಸಲಾಗಿ, ಒಂದು ಕಡೆ ಗೋಡೆಯು ಕುಸಿದು ಬಿದ್ದಿರುವುದನ್ನು ಕಂಡ ಸಮಿತಿಯು ಕೂಡಲೇ ಆಯ-ವ್ಯಯದಲ್ಲಿ ಅನುದಾನವನ್ನು ತೆಗೆದುಕೊಂಡು ಗೋಡೆಯನ್ನು ದುರಸ್ತಿಗೊಳಿಸುವಂತೆ, ಸಂಬಂಧಪಟ್ಟ ಅಭಿಯಂತರರುಗಳಿಗೆ ಸ್ಥಳದಲ್ಲಿಯೇ ಆಜ್ಞಾಪಿಸಲಾಯಿತು.

Office of the I T Advisor
No. 239
Date. 18/6/12
Bangalore Mahanagara Palike

19/6/12

→ 2

ಮುಂದುವರಿದಂತೆ, ಮಳೆಯ ನೀರು ಕೊಯ್ಲು ಬಗ್ಗೆ ಗಮನಿಸಿದಾಗ, ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಈ ಶಾಲೆಯಲ್ಲಿ ಬಹಳಷ್ಟು ವ್ಯವಸ್ಥಿತವಾಗಿ ನಿರ್ವಹಿಸಿರುವುದನ್ನು ಕಂಡು ಸಮಿತಿಯು ಶಾಲೆಯ ಮುಖ್ಯಸ್ಥರಿಗೆ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಅಭಿನಂದನೆ ಸೂಚಿಸಿದರು.

ಆಡಳಿತಾತ್ಮಕ ವಿಚಾರಕ್ಕೆ ಸಂಬಂಧಪಟ್ಟಂತೆ, ಮುಖ್ಯೋಪಾಧ್ಯಾಯರ ಕೊಠಡಿಯಲ್ಲಿ ಅಧ್ಯಾಪಕರು ಹಾಗೂ ಸಿಬ್ಬಂದಿಗಳ ಹಾಜರಾತಿ ಪುಸ್ತಕವನ್ನು ಪರಿಶೀಲಿಸಲಾಗಿ, ಖಾಯಂ ಹಾಗೂ ಹೊರಗುತ್ತಿಗೆಯ ಅಧ್ಯಾಪಕ ವೃಂದದವರು ಹಾಗೂ ಸಿಬ್ಬಂದಿ ವರ್ಗದವರೆಲ್ಲರೂ ಎಲ್ಲರೂ ಹಾಜರಿದ್ದುದನ್ನು ಗಮನಿಸಿ ಇದೇ ರೀತಿ ಶಿಸ್ತು ಮುಂದುವರಿಸಿಕೊಂಡು ಹೋಗುವಂತೆ ಸೂಚಿಸಲಾಯಿತು.

ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ, ದೈಹಿಕ ಶಿಕ್ಷಕರನ್ನು ಹೊರಗುತ್ತಿಗೆ ಆಧಾರದ ಮೇರೆ ನೇಮಿಸಿ, ಸದರಿಯವರಿಗೆ ಸುಮಾರು 78 ವರ್ಷ ವಯಸ್ಸಾಗಿದ್ದು, ಸದರಿ ರವರು ದೈಹಿಕವಾಗಿ ಸಮರ್ಥರೇ? ಎಂಬ ಅಂಶದ ಬಗ್ಗೆ ಕೆಲ ಕಾಲ ಚರ್ಚಿಸಿ, ಮುಂದೆ ಕ್ರಮ ವಹಿಸುವುದಾಗಿ ತಿಳಿಸುತ್ತಾ, ಕ್ರೀಡಾ ಸಾಮಗ್ರಿಗಳ ಬಗ್ಗೆ ವೀಕ್ಷಿಸಿದಾಗ, ಕ್ರೀಡಾ ಸಾಮಗ್ರಿಗಳನ್ನು ಉಪಯೋಗಿಸದೇ ಅಲ್ಮಿರಾದಲ್ಲೆ ಇರುವುದನ್ನು ಗಮನಿಸಿದ ಸಮಿತಿಯು ಆಕ್ರೋಶ ವ್ಯಕ್ತಪಡಿಸುತ್ತಾ, ಈ ಕೂಡಲೇ ವಿದ್ಯಾರ್ಥಿಗಳಿಗೆ ವಿತರಿಸಿ, ವಿದ್ಯಾರ್ಥಿಗಳನ್ನು ಕ್ರೀಡೆಯಲ್ಲಿ ಪ್ರೋತ್ಸಾಹಿಸುವಂತೆ ಕಟ್ಟುನಿಟ್ಟಾಗಿ ಮೌಖಿಕವಾಗಿ ಆದೇಶ ನೀಡಲಾಗಿರುತ್ತದೆ. ಸಮಿತಿಯ ಸದಸ್ಯರು ತರಗತಿಗಳಿಗೆ ಭೇಟಿ ನೀಡಿದಾಗ, ವಿದ್ಯಾರ್ಥಿಗಳು ಎದ್ದು ನಿಂತು ಗೌರವವನ್ನು ಸೂಚಿಸದೆ ಇರುವುದನ್ನು ಕಂಡ ಸಮಿತಿಯು ಬೇಸರ ವ್ಯಕ್ತಪಡಿಸುತ್ತಾ, ವಿದ್ಯಾರ್ಥಿಗಳಿಗೆ ಶಿಸ್ತು ಮತ್ತು ಸಂಸ್ಕೃತಿಯನ್ನು ಕಲಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಣಾಧಿಕಾರಿಯವರಿಗೆ ಪ್ರವಚನ ನೀಡಲಾಯಿತು.

ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ತರಗತಿಯಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದ, ವಿದ್ಯಾರ್ಥಿಗಳ ಫಲಿತಾಂಶ ಹಾಗೂ ಇಂದಿನ ಶೈಕ್ಷಣಿಕ ಸಾಲಿಗೆ ದಾಖಲಾತಿ ಹೆಚ್ಚಿಸಲು ಕೈಗೊಂಡ ಕ್ರಮದ ಬಗ್ಗೆ ವಿವರಣೆ ನೀಡುವಂತೆ ಪ್ರಸ್ತಾಪಿಸಿದಾಗ, ಶೇ.42ರಷ್ಟು ಫಲಿತಾಂಶ ಬಂದಿರುವುದಾಗಿಯು ಹಾಗೂ ಬೇರೆ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ನಮ್ಮ ಶಾಲೆಗೆ 8ನೇ ತರಗತಿಗೆ ದಾಖಲಾತಿಯಾಗುವಂತೆ, ವಿದ್ಯಾರ್ಥಿಗಳಿಗೆ ನಮ್ಮ ಶಾಲೆಯಲ್ಲಿ ದೊರೆಯುವ ವ್ಯವಸ್ಥೆಯ ಬಗ್ಗೆ ತಿಳಿಸಿರುವುದಾಗಿ ಮುಖ್ಯೋಪಾಧ್ಯಾಯರು ತಿಳಿಸಿರುತ್ತಾರೆ.

ಅಂತಿಮವಾಗಿ, ಶಾಲೆಯ ಕುಂದು ಕೊರತೆಯನ್ನು ವಿಚಾರಿಸಿದಾಗ, ತಮಗೆ ಪೌರ ಕಾರ್ಮಿಕರ ಕೊರತೆಯಿದ್ದು, ತುರ್ತಾಗಿ ಪೌರ ಕಾರ್ಮಿಕರನ್ನು ನಿಯೋಜಿಸಬೇಕೆಂದು ಮುಖ್ಯೋಪಾಧ್ಯಾಯರು ಕೋರಿದ ಮೇರೆಗೆ, ಇದರ ಬಗ್ಗೆ ಸೂಕ್ತ ಕ್ರಮ ವಹಿಸಿ ಪೌರ ಕಾರ್ಮಿಕರನ್ನು ನಿಯೋಜಿಸಲು, ವಿದ್ಯಾಧಿಕಾರಿಗೆ ಸಮಿತಿಯ ವತಿಯಿಂದ ಸೂಚಿಸಲಾಗಿರುತ್ತದೆ.

ನಂತರ ಕ್ಲೀವ್‌ಲ್ಯಾಂಡ್ ಟೌನ್‌ನಲ್ಲಿರುವ ಬಿ.ಬಿ.ಎಂ.ಪಿ. ಸಂಯುಕ್ತ ಮಹಿಳಾ ಕಾಲೇಜಿಗೆ ಭೇಟಿ ನೀಡಲು ಹೋದಾಗ ಕಾಲೇಜಿನ ಆವಣದಲ್ಲಿ ಅನಧಿಕೃತವಾಗಿ ಖಾಸಗಿ ವಾಹನಗಳನ್ನು ನಿಲುಗಡೆ ಮಾಡಿರುವುದು ಗಮನಿಸಿ ಆಕ್ರೋಶ ವ್ಯಕ್ತಪಡಿಸಿ ವಾಹನಗಳನ್ನು ತೆರವುಗೊಳಿಸಲು ಸಂಬಂಧಿಸಿದವರಿಗೆ ಸೂಚಿಸುವಂತೆ, ವಿದ್ಯಾಧಿಕಾರಿಗಳಿಗೆ ತಿಳಿಸಲಾಯಿತು.

ಸದರಿ ಕಾಲೇಜಿನ ಶೌಚಾಲಯನ್ನು ಗಮನಿಸಿದಾಗ, ಶೌಚಾಲಯದ ಬಾಗಿಲು ತೊಂದರೆಯಿರುವುದನ್ನು ಗಮನಿಸಿ, ಸಂಬಂಧಪಟ್ಟ ಅಭಿಯಂತರರಿಗೆ ಕೂಡಲೇ ಕಾರ್ಯವನ್ನು ಪೂರ್ಣಗೊಳಿಸಲು ಸೂಚಿಸಲಾಯಿತು. ಇನ್ನುಳಿದಂತೆ, ಮಳೆ ನೀರು ಕೊಯ್ಲು ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ ಪ್ರಸ್ತಾಪಿಸಿದಾಗ, ಮಳೆ ನೀರು ಕೊಯ್ಲು ಮಾಡಲು ಗುಂಡಿ ತೆಗೆಯಲು ಹೋದರೆ, ಅಂತರ್ಜಲ ಉಕ್ಕುವುದಾಗಿ ಉಪ ಪ್ರಾಂಶುಪಾಲರು ತಿಳಿಸುತ್ತಾ, ಮಳೆಗಾಲದಲ್ಲಿ ನೀರು ಹಿಂಗದೇ ಮೈದಾನ ಹಾಗೂ ಓಡಾಡುವ ರಸ್ತೆಯು ಕೆಸರಾಗುತ್ತಿದ್ದು, ವಿದ್ಯಾರ್ಥಿನಿಯರು ಓಡಾಡಲು ಹರಸಾಹಸ ಪಡುವುದರಿಂದ, ಬಿದ್ದಂತಹ ನೀರು ಸುಗಮವಾಗಿ ಒಳ ಚರಂಡಿಗೆ ಹಾದು ಹೋಗಲು ಕಟ್ಟಡದ ಅಂಚಿನಲ್ಲಿ ಪೈಪುಗಳನ್ನು ಅಳವಡಿಸಿಕೊಡಲು ಕೋರಿದಾಗ, ಸಂಬಂಧಿಸಿದ ಅಭಿಯಂತರರಿಗೆ ಈ ಆಯ-ವ್ಯಯ ಅನುದಾನದಲ್ಲಿ ಮಳೆಗಾಲದ ಮುನ್ನವೇ ಸದರಿ ಕಾರ್ಯ, ಕಟ್ಟಡ ಆವರಣದ ತಡೆ ಗೋಡೆ ಜೊತೆ ನೀರು ಶೇಖರಣಾ ತೊಟ್ಟಿಯನ್ನು ಕಲ್ಪಿಸಲು ಮೌಖಿಕವಾಗಿ ಆದೇಶಿಸಲಾಯಿತು. ಶಾಲೆ ಆವರಣದಲ್ಲಿ ಕಾರ್ಯನಿರ್ವಹಿಸದೇ ಅನಾಥವಾಗಿ ಉಪಯೋಗವಿಲ್ಲದೆ ನೀರು ಶುದ್ಧೀಕರಣ ಉಪಕರಣ ಹಾಗೂ ಬಹು ದೊಡ್ಡ ನೀರು ಶೇಖರಣೆ ಟ್ಯಾಂಕ್ ತೆರವುಗೊಳಿಸಲು ಕ್ರಮವಹಿಸುವಂತೆ, ಆದೇಶಿಸಲಾಯಿತು. ಕಾಲೇಜಿಗೆ ಸಂಬಂಧಿಸಿದಂತೆ, ಪ್ರಾಂಶುಪಾಲರಿಗೆ ಹೊಸ ರೂಮಿನ ವ್ಯವಸ್ಥೆ ಮಾಡಿಕೊಡಲು ಸೂಚಿಸುತ್ತಾ, ಹಾಲಿ ಇರುವ ವಿದ್ಯಾರ್ಥಿಗಳ ದಾಖಲಾತಿಯು ಈಗಾಗಲೇ ಹೆಚ್ಚಿಗೆ ಇದ್ದು, ರಾಜಕೀಯ ಒತ್ತಡ ಹಾಗೂ ಸ್ಥಳೀಯ ಮುಖಂಡರಿಂದಲೂ ಸಹ ದಾಖಲಾತಿ ತೆಗೆದುಕೊಳ್ಳುವಂತೆ ಶಿಫಾರಸ್ಸು ಮಾಡುತ್ತಿರುವ ಹಿನ್ನೆಲೆಯಲ್ಲಿ, ತರಗತಿಯ ಕೊಠಡಿಗಳನ್ನು ನಿರ್ಮಿಸಿಕೊಡುವಂತೆ, ಪ್ರಾಂಶುಪಾಲರು ಕೋರಿರುತ್ತಾರೆ. ಸದರಿ ಪ್ರಸ್ತಾವನೆಗೆ ಸಮಿತಿಯು ಉಪನ್ಯಾಸಕರ ವೃಂದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ, ಈ ಸಾಲಿನ ಆಯ-ವ್ಯಯದಲ್ಲಿ ಹಾಗೂ ಮಾನ್ಯ ಉಪ ಮಹಾಪೌರರ ಅನುದಾನಮದಲ್ಲಿ ಕಟ್ಟಡ ನಿರ್ಮಿಸಲು ಕ್ರಮವಹಿಸಲಾಗುವುದೆಂದು ತಿಳಿಸಲಾಗಿರುತ್ತದೆ.

→ 3

ಕೊನೆಯದಾಗಿ, ಸಮಿತಿಯು ಮುನಿಚಬಮ್ಮ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಿಶುವಿಹಾರ ಹಾಗೂ ಪ್ರೌಢ ಶಾಲೆಗೆ ಭೇಟಿ ನೀಡಿದ್ದು, ಅಲ್ಲಿನ ಮುಖ್ಯೋಪಾಧ್ಯಾಯರ ಜೊತೆ ಚರ್ಚಿಸಿದಾಗ, ಸದರಿ ಶಾಲೆಯಲ್ಲಿ ಶೌಚಾಲಯದ ಬಾಗಿಲು, ಕುಡಿಯುವ ನೀರಿನ ವ್ಯವಸ್ಥೆ ಹಾಲಿ ಇರುವ ಆವರಣದ ತಡೆ ಗೋಡೆಯನ್ನು ಎತ್ತರಿಸುವುದು ಹಾಗೂ ಪೌರ ಕಾರ್ಮಿಕರನ್ನು ನಿಯೋಜಿಸುವಂತೆ ಕೋರಿದಾಗ, ಸಣ್ಣ ಪುಟ್ಟ ಕಾಮಗಾರಿಗಳನ್ನು ಸ್ಥಳೀಯ ದಾನಿಗಳಿಂದ ನೆರವು ಪಡೆಯುವುದು, ಇನ್ನುಳಿದ ಕಾರ್ಯಗಳನ್ನು ಸಂಬಂಧಪಟ್ಟವರಿಂದ ಜರೂರಾಗಿ ಕಲ್ಪಿಸಿ ಕೊಡಲು ಸ್ಥಳದಲ್ಲಿಯೇ ಶಿಕ್ಷಣಾಧಿಕಾರಿಗೆ ತಾಕೀತು ಮಾಡುತ್ತಾ, ತಪಾಸಣೆಯನ್ನು ಮುಕ್ತಾಯಗೊಳಿಸಲಾಯಿತು.

B G Raju

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ/ಆರೋಗ್ಯ ಮತ್ತು ಶಿಕ್ಷಣ)ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮ ಜರುಗಿಸಲು ಕೋರಿದೆ.
7) ಕಾರ್ಯಪಾಲಕ ಅಭಿಯಂತರರು-(ಯೋಜನೆ)/(ಪೂರ್ವ/ಪಶ್ಚಿಮ ಮತ್ತು ದಕ್ಷಿಣ)ರವರಿಗೆ ಕಳುಹಿಸುತ್ತಾ, ಸಂಬಂಧಿಸಿದ ಕಾರ್ಯಗಳನ್ನು ಜರೂರಾಗಿ ನಿರ್ವಹಿಸಲು ಸೂಚಿಸಿದೆ.
8) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಿದೆ.
9) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
10) ಕಛೇರಿ ಕಡತಕ್ಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ದಿನಾಂಕ: 21.06.2012ರಂದು ಶಿಕ್ಷಣ ಸ್ಥಾಯಿ ಸಮಿತಿಯು ನಡೆಸಿದ, ಅನಿರೀಕ್ಷಿತ ತಪಾಸಣೆಯ, ತಪಾಸಣಾ ವರದಿ

| ಕ್ರ.ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ.ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ಗೋಪಾಲ್ | ಶಿಕ್ಷಣಾಧಿಕಾರಿಗಳು |
| 2 | ಶ್ರೀ.ಅಶ್ವಥ್‌ನಾರಾಯಣ ಗೌಡ | ಸದಸ್ಯರು | 2 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| 3 | ಶ್ರೀ.ಡಿ.ವೆಂಕಟೇಶ್ | ಸದಸ್ಯರು | 3 | ಶ್ರೀ.ಯರ್ರಪ್ಪ | ವಿಷಯ ಪರಿವೀಕ್ಷಕರು |
| 4 | ಶ್ರೀ.ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 4 | ಶ್ರೀ.ಎನ್.ಏಕಾಂತಪ್ಪ | ವಿಷಯ ಪರಿವೀಕ್ಷಕರು |
| 5 | ಶ್ರೀಮತಿ.ಎನ್.ಜಿ.ಜಯನರತ್ನ | ಸದಸ್ಯರು | 5 | ಶ್ರೀ.ಅಕ್ರಂ ಪಾಷ | ಸ.ಕಾ.ಅ(ಯೋ)ಪೂರ್ವ |
| 6 | ಶ್ರೀಮತಿ.ವಸಂತಕುಮಾರಿ | ಸದಸ್ಯರು | 6 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |
| 7 | ಶ್ರೀ.ಎಂ.ಉದಯಶಂಕರ್ | ಸದಸ್ಯರು | | | |

ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿ ವರ್ಗದವರು ದಿನಾಂಕ: 21.06.2012ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಡತನದಲ್ಲಿನ ಶಾಲಾ/ಕಾಲೇಜುಗಳಾದ 1) ಸಂಯುಕ್ತ ಪದವಿ ಪೂರ್ವ ಕಾಲೇಜು, ಟಾಸ್ಕರ್ ಟೌನ್ 2) ಬಾಲಕರ ಪ್ರೌಢ ಶಾಲೆ, ಬ್ರಾಡ್‌ವೇ 3) ಸಂಯುಕ್ತ ಪದವಿ ಪೂರ್ವ ಕಾಲೇಜು, ಡಿಸ್ಪೆನ್ಸರಿ ರಸ್ತೆ ಮತ್ತು 4) ಪ್ರಾಥಮಿಕ ಪ್ರೌಢ ಶಾಲೆ, ಜಯಮಹಲ್ ಭೇಟಿ ನೀಡಲಾಯಿತು.

ಮೊದಲು ಭೇಟಿ ನೀಡಿದ, ಸಂಯುಕ್ತ ಪದವಿ ಪೂರ್ವ ಕಾಲೇಜು ಟಾಸ್ಕರ್ ಟೌನಿನ ಒಳಾಂಗಣ ಕ್ರೀಡಾಂಗಣವನ್ನು ವೀಕ್ಷಿಸಲಾಗಿ, ಹೊಸದಾಗಿ ನಿರ್ಮಾಣವಾಗಿರುವ ಕಟ್ಟಡದ ಪ್ರೇಕ್ಷಕರ ವೀಕ್ಷಣಾ ಸ್ಥಳದ ಗ್ಲಾಸ್‌ಗಳು ಒಡೆದಿರುವುದನ್ನು ಗಮನಿಸಿದ ಸಮಿತಿಯು ಅದರ ಬಗ್ಗೆ ವಿಶ್ಲೇಷಣೆಯನ್ನು ನೀಡುವಂತೆ ಕೇಳಿದಾಗ, ಈ ಹಿಂದೆ ಸದರಿ ಕಟ್ಟಡವನ್ನು ನಿರ್ಮಾಣ ಮಾಡಲು ಖಾಸಗಿ ಗುತ್ತಿಗೆದಾರರಿಗೆ ನೀಡಲಾಗಿದ್ದು, ಕಟ್ಟಡದ ನಿರ್ಮಾಣದ ವೆಚ್ಚವು ಅಂದಾಜು ಪಟ್ಟಿಗಿಂತ ಹೆಚ್ಚಾದ ಕಾರಣ, ಹೆಚ್ಚಾದ ಮೊತ್ತವನ್ನು ಪಾಲಿಕೆ ವತಿಯಿಂದ ಪಾವತಿಸಿರುವುದಿಲ್ಲ. ಆದ್ದರಿಂದ, ಗುತ್ತಿಗೆದಾರರು ಸದರಿ ಕಟ್ಟಡವನ್ನು ನಮ್ಮ ಸುಪರ್ದಿಗೆ ವಹಿಸಿರುವುದಿಲ್ಲ ಹಾಗೂ ಸುತ್ತ ಮುತ್ತಲ್ಲಿನ ಬಡ ಮಕ್ಕಳು ಆಟವಾಡುವಾಗ ಒಡೆದಿರುವ ಸಂಭವವಿರಬಹುದೆಂದು ತಿಳಿಸಿರುತ್ತಾರೆ. ಅದೇ ಆವರಣದಲ್ಲಿ ಹೊಸದಾಗಿ ಕಟ್ಟಿರುವ ಕ್ರೀಡಾಂಗಣದ ವೇದಿಕೆ ಮೇಲೆ ಕೆಲವು ಸುತ್ತ ಮುತ್ತಲಿನ ಹುಡುಗರು ಆಟವಾಡುತ್ತಿರುವುದನ್ನು ಗಮನಿಸಿದ ಮಾನ್ಯ ಸದಸ್ಯರಾದ ಶ್ರೀ.ಎಂ.ಉದಯಶಂಕರ್ ರವರು ಹುಡುಗರನ್ನು ಕೆಳಗಿಳಿಸಿ, ಆವರಣದಲ್ಲಿ ಆಡುವಂತೆ ಸೂಚಿಸಿದರು. ನಂತರ ಆವರಣಕ್ಕೆ ಹೊಂದಿಕೊಂಡಿರುವ ಮಸೀದಿಯು ಸುಮಾರು 20X80 ಅಡಿಗಳಷ್ಟು ಒತ್ತುವರಿ ಮಾಡಿಕೊಂಡಿರುವುದನ್ನು ಗಮನಿಸಿದ ಸಮಿತಿಯು ಕೂಡಲೇ ಪಾಲಿಕೆಯ ಒಡತನದಲ್ಲಿರುವ ಎಲ್ಲಾ ಶಾಲಾ/ಕಾಲೇಜುಗಳು ಹಾಗು ಆಟದ ಮೈದಾನಗಳ ವಿಸ್ತೀರ್ಣ ಹಾಗೂ ದಾಖಾತಿಗಳನ್ನು ಸಂಬಂಧಿಸಿದ, ಅಧಿಕಾರಿಯಿಂದ ಪಡೆಯಲು ಕೂಡಲೇ ಪತ್ರ ಬರೆಯಬೇಕೆಂದು ಆಪ್ತ ಸಹಾಯಕರಿಗೆ ಸೂಚಿಸಲಾಯಿತು.

ಹೊಸ ಕಟ್ಟಡದಲ್ಲಿ ಪರೀಕ್ಷೆಗಳು ನಡೆಯುತ್ತಿರುವ ಕಾರಣ, ಹಳೇ ಕಟ್ಟಡದಲ್ಲಿ ತರಗತಿಗಳು ನಡೆಯುತ್ತಿರುವುದು ಕಂಡ ಸಮಿತಿಯು ತರಗತಿಗಳಿಗೆ ಭೇಟಿ ನೀಡಿ ಪರಿಸರವನ್ನು ಪರಿಶೀಲಿಸಲಾಗಿ, ತರಗತಿಗಳನ್ನು ಸ್ವಚ್ಛವಾಗಿಡಲು ವಿಫಲವಾಗಿರುವ ಕಾರಣದಿಂದ, ಶಾಲೆಯ ಮುಖ್ಯಸ್ಥರಿಗೆ ಈ ರೀತಿ ಇರುವುದರಿಂದಲೇ ಮಕ್ಕಳಿಗೆ ರೋಗರುಜುನೆಗಳು ತಗಲಿ, ಅನಾರೋಗ್ಯಕ್ಕೆ ತುತ್ತಾಗುವ ಸಂಭವವಿರುತ್ತದೆ. ಆದ್ದರಿಂದ, ಶುಚಿಯಾಗಿ ಹಾಗೂ ಉತ್ತಮ ನಿರ್ವಹಣೆಯಿಂದ ಐತಿಹಾಸಿಕ ಕಟ್ಟಡಗಳನ್ನು ಉಳಿಸಿಕೊಳ್ಳಲು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಲಾಯಿತು. ಅದೇ ಕಟ್ಟಡದ ಆವರಣದಲ್ಲಿ ನೀರು ಸಂಗ್ರಹಣಾ ತೊಟ್ಟಿಯಿದ್ದು, ಸದರಿ ತೊಟ್ಟಿಯ ನೀರು ಕಲುಷಿತಗೊಂಡಿರುವುದರ ಜೊತೆಗೆ ಮೇಲ್ ಭಾಗವನ್ನು ಮುಚ್ಚಲ್ಲದಿರುವುದನ್ನು ಕಂಡ ಸಮಿತಿಯು ಶಾಲಾ ಮುಖ್ಯೋಪಾಧ್ಯಾಯರಿಗೆ ವಿವರಣೆ ನೀಡುವಂತೆ ಕೇಳಿದಾಗ, ಸದರಿ ಪ್ರಸ್ತಾವನೆಗೆ ಈ ತೊಟ್ಟಿಯಿಂದ, ನೀರನ್ನು ಉಪಯೋಗಿಸುತ್ತಿಲ್ಲ ಎಂದು ಉತ್ತರಿಸಿದಕ್ಕೆ ತಕ್ಷಣವೇ ಮುಚ್ಚಿಸಲು ಕ್ರಮವಹಿಸುವಂತೆ, ಸಮಿತಿಯು ತಿಳಿಸಿರುತ್ತದೆ.

26/6/12

→ 2

ಶಾಲೆಯ ನಿರ್ವಹಣೆಯು ಕೆಟ್ಟ ಸ್ಥಿತಿಯಲ್ಲಿರುವುದನ್ನು ಸರಿಪಡಿಸಲು ಸಂಬಂಧಿಸಿದ ಮೇಲಾಧಿಕಾರಿಗಳಿಗೆ ತಿಳಿಸಲಾಗಿದಯೇ? ಎಂದು ಮುಖ್ಯೋಪಾಧ್ಯಾಯರಿಗೆ ಪ್ರಶ್ನಿಸಿದಾಗ, ಈ ಹಿಂದಿನ ಮುಖ್ಯಸ್ಥರು ಸಂಬಂಧಿಸಿದವರಿಗೆ, ತಿಳಿಸಿರುತ್ತಾರೆಂದು ತಿಳಿಸಿದಕ್ಕೆ, ಸದರಿ ಪತ್ರದ ಸ್ವೀಕೃತಿಯನ್ನು ನೀಡುವಂತೆ, ಕೇಳಿದಾಗ, ಮುಖ್ಯೋಪಾಧ್ಯಾಯರು ತಬ್ಬಿಬ್ಬಾಗಿರುತ್ತಾರೆ. ಅದೇ ಆವರಣದ ಕಟ್ಟಡದಲ್ಲಿ ಕಾವಲುಗಾರನಿಗೆ ಸಂಸಾರ ಹೂಡಲು ಕೊಠಡಿಯನ್ನು ನೀಡಿರುವುದರ ಬಗ್ಗೆ ಸಮಿತಿಯು ಪ್ರಶ್ನಿಸಲಾಗಿ, ಕೂಡಲೇ ಕಾವಲುಗಾರನಿಗೆ ನೀಡಿರುವ ಕೊಠಡಿಯನ್ನು ತೆರವುಗೊಳಿಸಿ ಮುಂಭಾಗದ ಬಾಗಿಲ್ಲಿಯೇ ಕೊಠಡಿಯನ್ನು ನಿರ್ಮಿಸಲು ಕ್ರಮವಹಿಸುವಂತೆ, ಸಂಬಂಧಿಸಿದ ಅಧಿಕಾರಿಗೆ ಸಮಿತಿಯು ಕಟ್ಟುನಿಟ್ಟಾಗಿ ಆದೇಶಿಸಿತು. ಕಟ್ಟಡಕ್ಕೆ ಹೊಂದಿಕೊಂಡಿರುವ ಶೌಚಾಲಯವು ಕೂಡ ನಿರ್ವಹಣೆಯಿಲ್ಲದೇ ಕೆಟ್ಟ ಸ್ಥಿತಿಯಲ್ಲಿದ್ದು, ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮವಹಿಸುವಂತೆ ಸೂಚಿಸಲಾಯಿತು.

ಅದೇ ಕಟ್ಟಡದಲ್ಲಿ ಸರ್ಕಾರೇತರ ಸಂಸ್ಥೆಯಿಂದ ಆಶ್ರಯ ಶಿಶುವಿಹಾರ ನಡೆಸುತ್ತಿದ್ದು, ಅಲ್ಲಿಯ ಉತ್ತಮ ವಾತಾವರಣವನ್ನು ಗಮನಿಸಿದ ಸಮಿತಿಯು ಇದೇ ವಾತಾವರಣವನ್ನು ತಮ್ಮ ಶಾಲೆಯಲ್ಲಿಯು ಅಳವಡಿಸುವಂತೆ, ಕಟ್ಟುನಿಟ್ಟಾಗಿ ಮುಖ್ಯೋಪಾಧ್ಯಾಯರಿಗೆ ಸೂಚನೆ ನೀಡುತ್ತಾ, ಆಶ್ರಯ ಶಿಶುವಿಹಾರಕ್ಕೆ ಪಾಲಿಕೆಯ ಕಟ್ಟಡವನ್ನು ನೀಡಿರುವ ದಾಖಲಾತಿಗಳನ್ನು ಸಮಿತಿಗೆ ಸಲ್ಲಿಸುವಂತೆ ಸೂಚಿಸಲಾಯಿತು.

ಕಲ್ಲಿನ ಕಟ್ಟಡದಲ್ಲಿ, ಶಿಕ್ಷಕರನ್ನು ಭೇಟಿ ಮಾಡಿ ಅವರ ಕುಂದುಕೊರತೆಗಳನ್ನು ಸಹ ಸಮಿತಿಯು ಆಲಿಸಿ, ತಮ್ಮ ಕುಂದುಕೊರತೆಗಳ ಪಟ್ಟಿಯನ್ನು ಮುಖ್ಯೋಪಾಧ್ಯಾಯರ ಮುಖಾಂತರ ಸಮಿತಿಯ ಮುಂದೆ ತರಲು ಸೂಚಿಸುತ್ತಾ, ಪ್ರಯೋಗಾಲಯವನ್ನು ವೀಕ್ಷಣೆ ಮಾಡಲಾಯಿತು. ಸದರಿ ಆವರಣದ ವಾಹನ ನಿಲುಗಡೆಯ ಮೇಲ್ ಛಾವಣಿಯು ಕುಸಿದಿದ್ದು, ಅದರಲ್ಲಿಯೇ ಕೆಲವರು ಬಿಡಾರ ಬಿಟ್ಟಿರುವುದು ಗಮನಿಸಿದ ಸಮಿತಿಯು ಕೂಡಲೆ ತೆರವುಗೊಳಿಸುವುದರ ಜೊತೆಗೆ ಎಲ್ಲಾ ವಾಹನಗಳನ್ನು ಕಟ್ಟಡದ ಹೊರಗೆ ನಿಲ್ಲಿಸುವಂತೆ ಆಜ್ಞಾಪಿಸುತ್ತಾ, ಸ್ಥಳೀಯ ದಾನಿಗಳಿಂದ ಗೇಟ್ ವ್ಯವಸ್ಥೆಯನ್ನು ಮಾಡಿಸಲು ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು. ಈ ಕಟ್ಟಡದಲ್ಲಿಯು ಕೂಡ ಶೌಚಾಲಯು ಕೆಟ್ಟ ಸ್ಥಿತಿಯಲ್ಲಿರುವುದನ್ನು ಕಂಡ ಸಮಿತಿಯು ಕೂಡಲೇ ಶೌಚಾಲಯವನ್ನು ಸುಸ್ಥಿತಿಯಲ್ಲಿಟ್ಟು ವಿದ್ಯಾರ್ಥಿಗಳಿಗೆ ಉಪಯೋಗಿಸಲು ಅನುಮಾಡಿಕೊಡುವಂತೆ, ಆದೇಶಿಸಲಾಯಿತು. ಕಟ್ಟಡಕ್ಕೆ ಉತ್ತಮ ವಾತಾವರಣ ಹಾಗೂ ಗಾಳಿಯು ಸುಗಮವಾಗಿ ಸಂಚರಿಸುವ ಸಲುವಾಗಿ ಕಟ್ಟಡದ ಸುತ್ತಾ ಬಿಟ್ಟಿರುವ ಜಾಗದಲ್ಲಿ ಕೈತೊಳೆಯಲು ನಿರ್ಮಿಸಲಾಗುತ್ತಿರುವ ಕಾಮಗಾರಿಯನ್ನು ಗಮನಿಸಿದ ಸಮಿತಿಯು ಅಸಮಾಧಾನ ವ್ಯಕ್ತಪಡಿಸುತ್ತಾ, ಅಭಿಯಂತರರು ಯಾವುದೇ ಕಾಮಗಾರಿಯನ್ನು ಕೈಗೊಳ್ಳುವ ಮುನ್ನ ವೈಜ್ಞಾನಿಕವಾಗಿ ನಿರ್ಮಿಸಲು ಮುಂದಾಗುವಂತೆ, ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುತ್ತಾ, ಕಟ್ಟಡದ ಆವರಣದಲ್ಲಿರುವ ಸುಮಾರು 70 ವರ್ಷಗಳ ಹಳೇ ಕಲ್ಲಿನ ಹಾಸಿಗೆಗಳನ್ನು ತೆಗೆದು ಸಿಮೆಂಟ್ ಮಿಶ್ರಣದಿಂದ ನೆಲವನ್ನು ಮುಚ್ಚುತ್ತಿರುವ ಕಾಮಗಾರಿಯನ್ನು ಸ್ಥಗಿತಗೊಳಿಸಿ, ಕಲ್ಲಿನ ಹಾಸಿಗೆಯನ್ನೇ ಪುನರ್ ಜೋಡಣೆ ಮಾಡಿ, ಸದರಿ ಕಾಮಗಾರಿಯ ಮೊತ್ತವನ್ನು ಬೇರೆ ಕಡೆ ಉಪಯೋಗಿಸುವತೆ, ಸೂಚಿಸಲಾಗಿರುತ್ತದೆ. ಆವರಣದ ಮುಂಭಾಗದಲ್ಲಿ ನಿರ್ಮಿಸಿರುವ ಅಂಗಡಿ ಮಳಿಗೆಗಳನ್ನು ಬಾಡಿಗೆಗೆ ನೀಡಿರುವ ದಾಖಲಾತಿಗಳನ್ನು ಪರಿಶೀಲಿಸಿ ಸಮಿತಿಗೆ ಮಾಹಿತಿಯನ್ನು ನೀಡುವಂತೆ, ವಿದ್ಯಾಧಿಕಾರಿಗೆ ಸೂಚಿಸಲಾಯಿತು.

ವಾರ್ಡ್ ಮಟ್ಟದ ಅಭಿಯಂತರರು, ಕಂದಾಯ ಇಲಾಖೆ ಹಾಗೂ ಸದಸ್ಯರ ಕಛೇರಿಗಳೂ ಕೂಡ ಸದರಿ ಆವರಣದಲ್ಲಿಯೇ ಇರುವುದನ್ನು ಗಮನಿಸಿದ ಸಮಿತಿಯು, ಸ್ವಚ್ಚತೆಯನ್ನು ಕಾಪಾಡುವುದರಲ್ಲಿ ವಿಫಲರಾಗಿರುವ ಅಭಿಯಂತರರಿಗೆ ಸ್ಥಳದಲ್ಲಿಯೇ ಎಚ್ಚರಿಕೆ ನೀಡುತ್ತಾ, ಆವರಣದಲ್ಲಿ ಅಡ್ಡಾದಿಡ್ಡಿಯಾಗಿ ಬಿದ್ದಿದ ಕೇಬಲ್ ವೈರ್‌ಗಳು ಹಾಗೂ ಕಲ್ಲುಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸುವಂತೆ ಸೂಚಿಸಲಾಯಿತು. ಕಂದಾಯ ಇಲಾಖೆಯ ಪಕ್ಕದ ಕೊಠಡಿಯಲ್ಲಿ ರಸೆಲ್ ಮಾರ್ಕೆಟ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಪಾಲಿಕೆಯ ನೌಕರನಿಗೆ ಯಾವ ಆಧಾರದ ಮೇಲೆ, ವಾಸಿಸಲು ಸ್ಥಳವನ್ನು ನೀಡಲಾಗಿದೆ? ಎಂಬ ಸಮಿತಿಯ ಪ್ರಶ್ನೆಗೆ ಯಾವ ಅಧಿಕಾರಿಯಿಂದಲೂ ಸಮಂಜಸ ಉತ್ತರ ದೊರೆಯಲಿಲ್ಲ.

ನಂತರ ಸಮಿತಿಯು ಬಾಲಕರ ಪ್ರೌಢ ಶಾಲೆ ಬ್ರಾಡ್‌ವೇ ಆವರಣಕ್ಕೆ ಭೇಟಿ ನೀಡಿ, ಹಿರಿಯ ನಾಗರೀಕರ ವಸತಿಗಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡದ ನಿರ್ಮಾಣ ಕಾರ್ಯವು ಅರ್ಧದಲ್ಲೆ ನಿಂತಿದ್ದು, ಈ ಕಟ್ಟಡವನ್ನು ಯಾವ ಅನುದಾನದಲ್ಲಿ ಹಾಗೂ ಯಾರಿಂದ ನಿರ್ಮಿಸಲಾಗುತ್ತಿದೆ ಎಂದು ಅಭಿಯಂತರರು(ಯೋಜನೆ)ರವರನ್ನು ಪ್ರಶ್ನಿಸಿದಾಗ, ಸದರಿ ರವರಿಗೂ ಇದರ ಬಗ್ಗೆ ಯಾವುದೇ ಮಾಹಿತಿಯು ಲಭ್ಯವಿಲ್ಲದಿರುವುದನ್ನು ಕಂಡ ಸಮಿತಿಯು ಅಸಮಾಧಾನವನ್ನು ವ್ಯಕ್ತಪಡಿಸುತ್ತಾ, ಸದರಿ ಆವರಣದಲ್ಲಿಯೇ ತಾತ್ಕಾಲಿಕವಾಗಿ ನಿರ್ಮಾಣವಾಗಿರುವ ವಸತಿ ಕಟ್ಟಡಗಳನ್ನು ಶಾಲೆಯ ಆವರಣದಿಂದ ತುರ್ತಾಗಿ ಸ್ಥಳಾಂತರಿಸುವಂತೆ, ಆದೇಶಿಸಲಾಯಿತು. ಈ ಶಾಲೆಯಲ್ಲಿಯು ಶೌಚಾಲಯದ ಕಟ್ಟಡವು ಶಿಥಿಲಗೊಂಡಿದ್ದು, ಕೂಡಲೇ ದುರಸ್ಥಿ ಮಾಡಿ ವಿದ್ಯಾರ್ಥಿಗಳಿಗೆ ಉಪಯೋಗಿಸಲು ಅನುವು ಮಾಡಿಕೊಡುವಂತೆ, ಸಮಿತಿಯು ಕಟ್ಟುನಿಟ್ಟಾಗಿ ಆದೇಶಿಸಿರುತ್ತದೆ.

→ 3

ಸಂಯುಕ್ತ ಪದವಿ ಪೂರ್ವ ಕಾಲೇಜು ಡಿಸ್ಪೆನ್ಸರಿ ರಸ್ತೆಗೆ, ಸಮಿತಿಯು ಭೇಟಿ ನೀಡಲಾಗಿ, ಸದರಿ ಕಾಲೇಜಿಗೆ ಹೊಂದಿಕೊಂಡಂತೆ ಇರುವ ಕಟ್ಟಡದಲ್ಲಿ ಕಂದಾಯ ಹಾಗೂ ಅಭಿಯಂತರರ ಕಛೇರಿಗಳನ್ನು ಕೂಡ ವೀಕ್ಷಿಸಲಾಯಿತು. ನಂತರ ಸದರಿ ಶಾಲಾ/ಕಾಲೇಜಿನಲ್ಲಿ ಒಟ್ಟು 850 ವಿದ್ಯಾರ್ಥಿಗಳು ಓದುತ್ತಿದ್ದು, ಕೇವಲ 33 ಕೊಠಡಿಗಳು ಮಾತ್ರ ಇರುವುದರಿಂದ, ಎಲ್ಲಾ ತರಗತಿಗಳಿಗೂ ಏಕ ಕಾಲದಲ್ಲಿ ಶಾಲೆಯನ್ನು ನಡೆಸುವುದಕ್ಕೆ ತೊಂದರೆಯಿರುವುದರಿಂದ, ಪಾಳಿ ವ್ಯವಸ್ಥೆಯಾದ ಬೆಳಿಗ್ಗೆ 8.00 ರಿಂದ 11.45 ಘಂಟೆಗಳ ವರೆಗೆ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಮಧ್ಯಾಹ್ನ 12.00 ರಿಂದ ಸಂಜೆ 5.30 ಘಂಟೆಯ ವರೆಗೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಶಾಲಾ/ಕಾಲೇಜುಗಳು ನಡೆಯುತ್ತಿರುವುದು ಕಂಡು ಬಂದಿರುವುದರಿಂದ, ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿ ಕಟ್ಟಡ ನಿರ್ಮಿಸಲು ಅನುದಾನವನ್ನು ಮೀಸಲಿಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯನ್ನು ಕೋರಲಾಗುವುದೆಂದು ಸಮಿತಿಯು ಮುಖ್ಯೋಪಾಧ್ಯಾಯರಿಗೆ ಆಶ್ವಾಸನೆ ನೀಡಲಾಗಿರುತ್ತದೆ.

ಕೊನೆಯದಾಗಿ, ಸಮಿತಿಯು ಪ್ರೌಢ ಶಾಲೆ, ಜಯಮಹಲ್‌ಗೆ ಭೇಟಿ ನೀಡಿ ಹಳೇ ಕಟ್ಟಡವು ಶಿಥಿಲಗೊಂಡಿದ್ದು, ಕೆಲವೇ ದಿನಗಳಲ್ಲಿ ಬೀಳುವ ಸ್ಥಿತಿಯು ಕಂಡು ಬಂದಿರುತ್ತದೆ. ಕೆಲ ತರಗತಿಗಳಲ್ಲಿ ಬೆರಳೆಣಿಕೆಯಷ್ಟು ಮಕ್ಕಳಿದ್ದು ಸದರಿ ತರಗತಿಗಳನ್ನು ಹತ್ತಿರದ ಶಾಲೆಗಳಿಗೆ ವಿಲೀನಗೊಳಿಸುವ ಬಗ್ಗೆ ಸೂಕ್ತ ತೀರ್ಮಾನವನ್ನು ಮುಂದೆ ತೆಗೆದುಕೊಳ್ಳಲಾಗುವುದೆಂದು ವ್ಯಕ್ತಪಡಿಸಿರುತ್ತದೆ. ಶಾಲೆಯ ಆವರಣದಲ್ಲಿರುವ ಮಳೆ ನೀರು ಕೊಯ್ಲು ಪದ್ಧತಿಯನ್ನು ವೀಕ್ಷಿಸಿದ ಸಮಿತಿಯು ಅಲ್ಲಲ್ಲಿ ಬಿರುಕು ಬಿಟ್ಟಿರುವ ಪ್ಲಾಸ್ಟಿಕ್ ಪೈಪ್‌ಗಳನ್ನು ಬದಲಾಯಿಸುವಂತೆ ಹಾಗೂ ಮಳೆ ನೀರು ಕೊಯ್ಲು ಸಂಗ್ರಹಿಸಿದ ತೊಟ್ಟಿಯಲ್ಲಿರುವ ಮೋಟರ್‌ನ್ನು ಕಾರ್ಯನಿರ್ವಹಿಸುವಂತೆ, ಮಾಡಲು ಜರೂರಾಗಿ ಕ್ರಮವಹಿಸಲು ಸಂಬಂಧಿಸಿದ ಅಭಿಯಂತರರಿಗೆ ಆದೇಶಿಸಲಾಯಿತು. ಸದರಿ ಶಾಲೆಯ ನಾಮಫಲಕದ ಮುಂದೆಯೇ ಕೊಳವೇ ಬಾವಿಯಿದ್ದು, ಅದಕ್ಕೆ ಸಂಪರ್ಕ ಕಲ್ಪಿಸಿ ಶಾಲಾ ಮಕ್ಕಳಿಗೆ ಉಪಯೋಗಿಸಲು ಅನುವು ಮಾಡಿಕೊಡುವಂತೆ ಹಾಗೂ ತಡೆ ಗೋಡೆಯು ಶಿಥಿಲಗೊಂಡು ಬಿದ್ದಿರುವುದನ್ನು ಏಳು ದಿನಗಳೊಳಗಾಗಿ ನಿರ್ಮಿಸುವಂತೆ, ಸಂಬಂಧಿಸಿದ, ಅಭಿಯಂತರರಿಗೆ ಸ್ಥಳದಲ್ಲಿಯೇ ಆದೇಶಿಸುತ್ತಾ ತಪಾಸಣೆಯನ್ನು ಮುಕ್ತಾಯಗೊಳಿಸಲಾಯಿತು.

B G Raju

ಬಿ. ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

Office of the I T Advisor * Bangalore Mahanagara Palike
No. 264/12-13
Date. 26/6/12

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ/ಆರೋಗ್ಯ ಮತ್ತು ಶಿಕ್ಷಣ)ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮ ಜರುಗಿಸಲು ಕೋರಿದೆ.
7) ಕಾರ್ಯಪಾಲಕ ಅಭಿಯಂತರರು-(ಯೋಜನೆ)/(ಪೂರ್ವ/ಪಶ್ಚಿಮ ಮತ್ತು ದಕ್ಷಿಣ)ರವರಿಗೆ ಕಳುಹಿಸುತ್ತಾ, ಸಂಬಂಧಿಸಿದ ಕಾರ್ಯಗಳನ್ನು ಜರೂರಾಗಿ ನಿರ್ವಹಿಸಲು ಸೂಚಿಸಿದೆ.
8) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಿದೆ.
9) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
10) ಕಛೇರಿ ಕಡತಕ್ಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ದಿನಾಂಕ: 22.06.2012ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳಿಗ್ಗೆ 11.00 ಘಂಟೆಗೆ ನಡೆದ ಸಭೆಯ ನಡವಳಿಗಳು.

| ಕ್ರ. ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ರಮಾಕಾಂತ್ | ಉಪ ಆಯುಕ್ತರು(ಕಂ) |
| 2 | ಶ್ರೀ.ಅಶ್ವಥ್‌ನಾರಾಯಣ ಗೌಡ | ಸದಸ್ಯರು | 2 | ಶ್ರೀಮತಿ.ಹೆಚ್.ವೇದಾವತಿ | ಉಪ ಆಯುಕ್ತರು(ಪೂ) |
| 3 | ಶ್ರೀ.ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 3 | ಶ್ರೀ.ಉಮಾನಂದ ರೈ | ಉಪ ಆಯುಕ್ತರು(ಪ) |
| 4 | ಶ್ರೀಮತಿ.ಎನ್.ಜಿ.ಜಯನರತ್ನ | ಸದಸ್ಯರು | 4 | ಶ್ರೀ.ಹೆಚ್.ಎಂ.ಉದಯಶಂಕರ್ | ಉಪ ಆಯುಕ್ತರು(ದ) |
| 5 | ಶ್ರೀಮತಿ.ವಸಂತಕುಮಾರಿ | ಸದಸ್ಯರು | 5 | ಶ್ರೀ.ಎಂ.ದೇವರಾಜಪ್ಪ | ಸಹಾಯಕ ಆಯುಕ್ತರು(ಆಸ್ತಿಗಳು) |
| 6 | ಶ್ರೀ.ಎಂ.ಉದಯಶಂಕರ್ | ಸದಸ್ಯರು | 6 | ಶ್ರೀ.ಗೋಪಾಲ | ವಿದ್ಯಾಧಿಕಾರಿ |
| 7 | ಶ್ರೀ.ಎನ್.ಎಂ.ಹನುಮಂತೇಗೌಡ | ಸದಸ್ಯರು | 7 | ಶ್ರೀ.ಪಿ.ಎಂ.ಜಾನ್ | ಕಾ.ಪಾ.ಅ(ಪೂರ್ವ)(ಯೋಜನೆ) |
| | | | 8 | ಶ್ರೀ.ಬಿ.ರಾಜೇಶ್ | ಕಾ.ಪಾ.ಅ(ದಕ್ಷಿಣ) (ಯೋಜನೆ) |
| | | | 9 | ಶ್ರೀ.ಆರ್.ನಾಗೇಂದ್ರ | ಸ.ಕಾ..ಅ(ದಕ್ಷಿಣ) (ಯೋಜನೆ) |
| | | | 10 | ಶ್ರೀ.ಎಂ.ವಿ.ಬದರಿನಾಥ್ | ಸ.ಕಾ..ಅ(ದಕ್ಷಿಣ) (ಯೋಜನೆ) |
| | | | 11 | ಶ್ರೀ.ಎನ್.ಚಂದ್ರಶೇಖರ್ | ಸ.ಕಾ..ಅ (ಪಶ್ಚಿಮ) (ಯೋಜನೆ) |
| | | | 12 | ಶ್ರೀ.ಎಂ.ಶಾಂತಕುಮಾರ್ | ಸ.ಕಾ..ಅ (ಪಶ್ಚಿಮ) (ಯೋಜನೆ) |
| | | | 13 | ಶ್ರೀ.ಬಿ.ಬಸವರಾಜು | ಸ.ಕಾ..ಅ (ಪಶ್ಚಿಮ) (ಯೋಜನೆ) |
| | | | 14 | ಶ್ರೀಮತಿ.ಗೀತಾ | ಸ.ಕಾ..ಅ(ಪೂರ್ವ) |
| | | | 15 | ಶ್ರೀ.ಮುರಳಿಧರ | ಸ.ಅ(ಪೂರ್ವ) |

ದಿನಾಂಕ: 22.06.2012ರಂದು ಬೆಳಿಗ್ಗೆ 11.00 ಘಂಟೆಗೆ ನಡೆದ ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರು ಹಾಗೂ ಅಧಿಕಾರಿ ವರ್ಗದವರಿಗೆ, ಮಾನ್ಯ ಅಧ್ಯಕ್ಷರು ಸ್ವಾಗತ ಕೋರುತ್ತಾ, ದಿನಾಂಕ: 21.06.2012ರಂದು ಸ್ಥಾಯಿ ಸಮಿತಿಯು ನಡೆಸಿದ ತಪಾಷಣೆಯ ಹಿನ್ನೆಲೆಯಲ್ಲಿ ಈ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸುತ್ತಾ, ಅಧಿಕಾರಿ ವರ್ಗದವರಿಗೆ ಪರಸ್ಪರ ಪರಿಚಿಸಿಕೊಳ್ಳಲು ಕೋರಿದರು.

ಮುಂದುವರಿದಂತೆ, ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು ಮಾತನಾಡುತ್ತಾ, ದಿನಾಂಕ:21.06.2012ರಂದು ನಡೆಸಿದ ತಪಾಸಣೆಯಲ್ಲಿ ಕಂಡ ನ್ಯೂನತೆಗಳಾದ ಟಾಸ್ಕರ್ ಟೌನಿನ ಒಳಾಂಗಣ ಕ್ರೀಡಾಂಗಣ ಒತ್ತುವರಿ, ಬ್ರಾಡ್‌ವೇ ನಲ್ಲಿರುವ ಹಿರಿಯ ನಾಗರೀಕರ ವಸತಿಗಾರಿ ನಿರ್ಮಾಣ ಹಂತದಲ್ಲೇ ಸ್ಥಗಿತಗೊಂಡಿರುವುದು ಹಾಗೂ ಅನಧೀಕೃತವಾಗಿ ತಾತ್ಕಾಲಿಕ ವಸತಿ ವ್ಯವಸ್ಥೆ ಕಲ್ಪಿಸಿರುವುದು, ಡಿಸ್ಪೆನ್ಸರಿ ರಸ್ತೆಯಲ್ಲಿನ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವುದು, ಹಾಗೂ ಜಯಮಹಲ್‌ನ ಶಾಲೆಯ ತಡೆ ಗೋಡೆ ನಿರ್ಮಿಸುವುದರ ಜೊತೆಗೆ ಎಲ್ಲಾ ಶಾಲಾ/ಕಾಲೇಜುಗಳಲ್ಲೂ ಮೂಲಭೂತ ಸೌಕರ್ಯಗಳಾದ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ತೊಂದರೆಯಿರುವುದನ್ನು ಗಮನಿಸಿರುವುದಾಗಿ ತಿಳಿಸಲಾಗಿರುತ್ತದೆ.

ಕೆಲವೆಡೆ ಪಾಲಿಕೆಯ ಆಸ್ತಿಗಳು ಒತ್ತುವರಿಯಾಗುತ್ತಿದ್ದು, ಇದರಿಂದ ಪಾಲಿಕೆ ಬೊಕ್ಕಸಕ್ಕೆ ನಷ್ಟವುಂಟಾಗುತ್ತಿರುತ್ತದೆ. ಇನ್ನು ಮುಂದೆ ಇಂತಹ ಪ್ರಕರಣಗಳನ್ನು ಮರುಕಳಿಸದಂತೆ ಮತ್ತು ಒತ್ತುವರಿ ತೆರವುಗೊಳಿಸಲು ಸದುದ್ದೇಶದಿಂದ ಪಾಲಿಕೆಯ ಶಾಲಾ/ಕಾಲೇಜು, ಆಟದ ಮೈದಾನ/ಕ್ರೀಡಾಂಗಣಗಳ ಆಸ್ತಿಗಳನ್ನು ಕಂದಾಯ ಇಲಾಖೆ, ವಾರ್ಡ್ ಮಟ್ಟದ

ಅಭಿಯಂತರರು ಮತ್ತು ಭೂಮಾಪಕರು, ಜಂಟಿಯಾಗಿ ಆಸ್ತಿಯ ಸರ್ವೆ ಕಾರ್ಯ ನಡೆಸಿ, ಸಂಬಂಧಿಸಿದ ಕಂದಾಯ ಇಲಾಖೆಯ ದಾಖಲಾತಿಯಲ್ಲಿ ದಾಖಲಿಸಿದ ನಂತರ, ವಿಸ್ತೀರ್ಣದೊಂದಿಗೆ ನಕ್ಷೆ ತಯಾರಿಸಿ ಸಂಪೂರ್ಣ ದಾಖಲಾತಿಯನ್ನು ಈ ಸ್ಥಾಯಿ ಸಮಿತಿಗೆ ಒಗದಿಸುವಂತೆ ಕೋರಿದ ಮೇರೆಗೆ, ಅಧಿಕಾರಿ ವರ್ಗದವರು 15 ದಿನಗಳೊಳಗಾಗಿ ಮೇಲೆ ನಮೂಧಿಸಿರುವ ಅಂಶಗಳನ್ನು ಪೂರ್ಣ ಮಾಹಿತಿಯೊಂದಿಗೆ ತಲುಪಿಸುವುದಾಗಿ ತಿಳಿಸಿರುತ್ತಾರೆ.

ಮುಂದುವರಿಂದಂತೆ, ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯ ಹಾಗೂ ಇನ್ನಿತರೇ ಕಾಮಗಾರಿಗಳನ್ನು ಒದಗಿಸಲು ಶ್ರೀ.ಎಸ್.ಹರೀಶ್, ಮಾಜಿ ಉಪಮಹಾಪೌರು ತಮ್ಮ ಅವಧಿಯಲ್ಲಿ ಪೂರ್ವ/ಪಶ್ಚಿಮ ಮತ್ತು ದಕ್ಷಿಣ ವಲಯಕ್ಕೆ ಅನುದಾನವನ್ನು ನೀಡಲಾಗಿರುತ್ತದೆ. ಸದರಿ ಅನುದಾನ ಅನುಗುಣವಾಗಿ ಪಾಲಿಕೆಯ ಎಲ್ಲಾ ಶಾಲಾ/ಕಾಲೇಜುಗಳಿಗೆ ಮೂಲಭೂತ ಸೌಕರ್ಯ, ಹೆಚ್ಚುವರಿ ಕೊಠಡಿ, ನೀರು ಸಂಗ್ರಹಣಾ ತೊಟ್ಟಿ ಹಾಗೂ ಇನ್ನಿತರ ಕಾರ್ಯಗಳನ್ನು ಜರೂರಾಗಿ ನಿರ್ವಹಿಸಲು ತಿಳಿಸದಕ್ಕಾಗಿ, ಅಧಿಕಾರಿ ವರ್ಗದವರು ಆಗಸ್ಟ್ 15, 2012ರೊಳಗಾಗಿ ಮುಗಿಸುವುದಾಗಿ ಹಾಗೂ ಶೀಘ್ರದಲ್ಲಿ ಕಾಮಗಾರಿಗಳ ಉದ್ಘಾಟನೆಯನ್ನು ಸಮಿತಿಯ ವತಿಯಿಂದ ಶ್ರೀ.ಎಸ್.ಹರೀಶ್, ಮಾಜಿ ಉಪಮಹಾಪೌರರ ಅಮೃತ ಹಸ್ತದಿಂದ ಉದ್ಘಾಟನೆ ಮಾಡಿಸಲಾಗುವುದೆಂದು ತಿಳಿಸಿರುತ್ತಾರೆ.

ಕೊನೆಯದಾಗಿ, ಮಾನ್ಯ ಅಧ್ಯಕ್ಷರು ಹಾಜರಿದ್ದ, ಮಾನ್ಯ ಸದಸ್ಯರು ಹಾಗೂ ಅಧಿಕಾರಿ ವರ್ಗದವರಿಗೆ ವಂದನಾರ್ಪಣೆಯನ್ನು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Office of the I T Advisor ★ Bangalore M...
No. 965/12-13
Date. 26/6/12

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾಹಿತಿಯನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾಹಿತಿಯನ್ನು ಮಾನ್ಯ ಉಪಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
4) ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಅವಗಾಹನೆಗೆ ಕಳುಹಿಸಿದೆ.
5) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾಹಿತಿಯನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
6) ಅಪರ ಆಯುಕ್ತರು(ಯೋಜನೆ) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮ ವಹಿಸಲು ಕೋರಿದೆ.
7) ಜಂಟಿ ಆಯುಕ್ತರು (ಕಲ್ಯಾಣ/ಆರೋಗ್ಯ ಮತ್ತು ಶಿಕ್ಷಣ ) ರವರಿಗೆ ಕಳುಹಿಸುತ್ತಾ ಸೂಕ್ತ ಕ್ರಮ ವಹಿಸಲು ಕೋರಿದೆ.
8) ಉಪ ಆಯುಕ್ತರು(ಕಂದಾಯ/ಪೂರ್ವ/ಪಶ್ಚಿಮ ಮತ್ತು ದಕ್ಷಿಣ)ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮ ವಹಿಸಲು ಕೋರಿದೆ.
9) ಸಹಾಯಕ ಆಯುಕ್ತರು(ಆಸ್ತಿಗಳು) ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮ ವಹಿಸಲು ಕೋರಿದೆ.
10) ಕಾರ್ಯಪಾಲಕ ಅಭಿಯಂತರರು-(ಯೋಜನೆ)/(ಪೂರ್ವ/ಪಶ್ಚಿಮ ಮತ್ತು ದಕ್ಷಿಣ) ಹಾಗೂ ಕಾರ್ಯಪಾಲಕ ಅಬಿಯಂತರರು(ಪೂರ್ವ)ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮ ವಹಿಸಲು ಕೋರಿದೆ.
11) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಕಳುಹಿಸುತ್ತಾ, ಸೂಕ್ತ ಕ್ರಮ ವಹಿಸಲು ಕೋರಿದೆ.
12) ಕಛೇರಿ ಕಡತಕ್ಕೆ.
13) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಕ್ತ ಕ್ರಮ ವಹಿಸುವಂತೆ ಕೋರಿದೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:22.06.2012ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಮಧ್ಯಾಹ್ನ 12.15 ಘಂಟೆಗೆ ನಡೆದ ವಿಷಯ ಸಭೆಯ ನಡವಳಿಗಳು.

| ಕ್ರ.ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ.ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ಗೋಪಾಲ್ | ಶಿಕ್ಷಣಾಧಿಕಾರಿಗಳು |
| 2 | ಶ್ರೀ.ಅಶ್ವಥ್‌ನಾರಾಯಣ ಗೌಡ | ಸದಸ್ಯರು | 2 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| 3 | ಶ್ರೀ.ಡಿ ವೆಂಕಟೇಶ್ | ಸದಸ್ಯರು | 3 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |
| 4 | ಶ್ರೀ.ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | | | |
| 5 | ಶ್ರೀಮತಿ.ಎನ್.ಜಿ.ಜಯನರತ್ನ | ಸದಸ್ಯರು | | | |
| 6 | ಶ್ರೀಮತಿ.ವಸಂತಕುಮಾರಿ | ಸದಸ್ಯರು | | | |
| 7 | ಶ್ರೀ.ಎಂ.ಉದಯಶಂಕರ್ | ಸದಸ್ಯರು | | | |
| 8 | ಶ್ರೀ.ಎನ್.ಎಂ.ಹನುಮಂತೇಗೌಡ | ಸದಸ್ಯರು | | | |

ಸಭೆಯು ಮಧ್ಯಾಹ್ನ 12.15 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

### ವಿಷಯ ಸಂಖ್ಯೆ:ಶಿ.ಸ್ಥಾ.ಸ/02/12-13

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿನ ಆಟದ ಮೈದಾನ/ಉದ್ಯಾನವನಗಳಲ್ಲಿ ದುರಸ್ತಿಗೊಂಡಿರುವ ಮಕ್ಕಳ ಆಟದ ಉಪಕರಣಗಳನ್ನು ದುರಸ್ತು ಮಾಡಿ ನವೀಕರಿಸುವ ಕಾರ್ಯದ ಬಗ್ಗೆ.

★★★

ಅಪರ ಆಯುಕ್ತರವರ(ಯೋಜನೆ)ರವರ ಟಿಪ್ಪಣಿ ಸಂಖ್ಯೆ:ಎಸ್.ಪಿ/ಪಿ.ಆರ್/61/11-12, ದಿನಾಂಕ:27.04.2012ರಲ್ಲಿ ವಿವರಿಸಿರುವಂತೆ, 2011-12ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿನ ಆಟದ ಮೈದಾನ/ಉದ್ಯಾನವನಗಳಲ್ಲಿ ದುರಸ್ತಿಗೊಂಡಿರುವ ಮಕ್ಕಳ ಆಟದ ಉಪಕರಣಗಳನ್ನು ದುರಸ್ತು ಮಾಡಿ ನವೀಕರಿಸುವ ಕಾರ್ಯಕ್ಕೆ ದಿನಾಂಕ:28.02.2012ರಂದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ನಿಯಮಾವಳಿ ರೀತ್ಯ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:13.03.2012ರಂದು ನಿಗದಿಗೊಳಿಸಿದ್ದು, ನಿಗದಿಗೊಳಿಸಿದ ದಿನಾಂಕ ಮತ್ತು ಅವಧಿಯೊಳಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಯಿತು. ನಂತರ ಸದರಿ ಟೆಂಡರ್‌ನಲ್ಲಿ 1) ಮೆ:ಟಾಯ್ಸ್ ಅಂಡ್ ಸ್ಪೋರ್ಟ್ಸ್ 2) ಮೆ:ಸುಧಾ ಎಂಟರ್ ಪ್ರೈಸಸ್ 3) ಮೆ: ವಿನ್ಯಾಸ್ ಪ್ಲೇ

Office of the I T Advisor
No. 273
Date 29/6/12
Bangalore Mahanagara Palike

29/6/12

ಸಿಸ್ಟಮ್ ಸಂಸ್ಥೆಯವರು ಭಾಗವಹಿಸಿರುತ್ತಾರೆ. ನಂತರ ಮೂವರು ಟೆಂಡರ್‌ದಾರರು ಟೆಂಡರ್‌ನಲ್ಲಿ ಹಾಜರುಪಡಿಸಿದ ತಾಂತ್ರಿಕ ಬಿಡ್‌ನಲ್ಲಿನ ದಾಖಲಾತಿಗಳನ್ನು ಪರಿಶೀಲಿಸಿ ಸಲ್ಲಿಸಿರುವ ವರದಿಯಲ್ಲಿ ಮೂವರು ಟೆಂಟರ್‌ದಾರರು ಸಲ್ಲಿಸಿರುವ ದಾಖಲಾತಿಗಳು ತೃಪ್ತಿಕರವಾಗಿ ಇರುವುದರ ಬಗ್ಗೆ ನೀಡಿರುವ ವರದಿಯ ಆಧಾರದ ಮೇಲೆ ಮೂವರು ಟೆಂಡರ್‌ದಾರರ ಆರ್ಥಿಕ ಬಿಡ್‌ನ್ನು ತೆರೆದು ಮೂವರು ಟೆಂಡರ್‌ದಾರರು ಸಲ್ಲಿಸಿರುವ ದರಗಳ ತುಲನಾತ್ಮಕ ಪಟ್ಟಿಯನ್ನು ಸಿದ್ಧಪಡಿಸಿದ್ದು, ಈ ಕೆಳಕಂಡಂತೆ ದರಗಳನ್ನು ಸಲ್ಲಿಸಿರುತ್ತಾರೆ.

| | | | |
|---|---|---|---|
| 1) ಮೆ:ಟಾಯ್ಸ್ ಅಂಡ್ ಸ್ಪೋರ್ಟ್ಸ್ | 63 ಸ್ಥಳಗಳಿಗೆ | ಒಟ್ಟು | ವೆಚ್ಚ ರೂ.83,60,000-00 |
| 2) ಮೆ:ಸುಧಾ ಎಂಟರ್ ಪ್ರೈಸಸ್ | 55 ಸ್ಥಳಗಳಿಗೆ | ಒಟ್ಟು | ವೆಚ್ಚ ರೂ.68,71,000-00 |
| 3) ಮೆ:ವಿನ್ಯಾಸ್ ಪ್ಲೇ ಸಿಸ್ಟಮ್ ಸಂಸ್ಥೆ | 36 ಸ್ಥಳಗಳಿಗೆ | ಒಟ್ಟು | ವೆಚ್ಚ ರೂ.44,75,000-00 |
| | **154 ಸ್ಥಳಗಳಿಗೆ** | **ಒಟ್ಟು** | **ವೆಚ್ಚ ರೂ.1,96,06,000-00** |

ಮೂವರು ಟೆಂಡರ್‌ದಾರರು ಟೆಂಡರ್‌ನಲ್ಲಿ ಸಲ್ಲಿಸಿರುವ ಕನಿಷ್ಠ ದರಗಳ ಕ್ರೂಢೀಕೃತ ಒಟ್ಟು ಸಮಗ್ರ ಮೊತ್ತ ರೂ.1,96,06,000-00ಗಳು. ಆದರೆ, 2011-12ನೇ ಸಾಲಿಗೆ 24 ಶಿಕ್ಷಣ, ಸಂಸ್ಕೃತಿ ಮತ್ತು ಕ್ರೀಡೆ ಆಯ-ವ್ಯಯ ಲೆಕ್ಕ ಶೀರ್ಷಿಕೆಯಡಿ ಮಕ್ಕಳ ಆಟದ ಉಪಕರಣಗಳ ದುರಸ್ತಿ ಮತ್ತು ನವೀಕರಿಸುವ ಕಾರ್ಯಕ್ಕೆ ಹಂಚಿಕೆ ಮಾಡಿರುವ ಮೊತ್ತ ರೂ.100-00ಲಕ್ಷಗಳನ್ನು ನಿಗದಿಗೊಳಿಸಿರುತ್ತಾರೆ. ಆದರೆ, ಸದರಿ ಟೆಂಡರ್‌ನಲ್ಲಿ ಮೂವರು ಟೆಂಡರ್‌ದಾರರು ನಿಗದಿಗೊಳಿಸಿರುವ ಹಂಚಿಕೆ ಮೊತ್ತಕ್ಕಿಂತ ಅಧಿಕವಾಗಿ ರೂ.96,06,000-00ಗಳಿಗೆ ಹೆಚ್ಚುವರಿಯಾಗಿ ದರಗಳನ್ನು ಸಲ್ಲಿಸಿರುತ್ತಾರೆ.

ಜಂಟಿ ಆಯುಕ್ತರು(ಕಲ್ಯಾಣ)ರವರ ಆದೇಶದಂತೆ ಟೆಂಡರ್‌ಗೆ ನಿಗದಿಗೊಳಿಸಿರುವ ಮೊತ್ತ ರೂ.100-00ಲಕ್ಷಗಳಿಗೆ ಸಿಮಿತಗೊಳಿಸಿ ಹೆಚ್ಚುವರಿಯಾಗಿ ಸಲ್ಲಿಸಿರುವ ದರಗಳ ಅಧಿಕ ಮೊತ್ತವನ್ನು ಪರಿಷ್ಕರಿಸಿ ಮೂವರು ಟೆಂಡರ್‌ದಾರರುಗಳಿಗೆ ಟೆಂಡರ್‌ನಲ್ಲಿ ಸಲ್ಲಿಸಿರುವ ಕನಿಷ್ಠ ದರಗಳಿಗೆ ಅನುಗುಣವಾಗಿ ಆದ್ಯತೆ ಮೇರೆಗೆ, ಸಮಾನಾಂತರವಾಗಿ ಬರುವಂತೆ ದುರಸ್ತಿ ಪಟ್ಟಿಯಲ್ಲಿ ಸೂಚಿಸಿರುವ ಸ್ಥಳಗಳನ್ನು ಪರಿಷ್ಕರಿಸಿ ನಿಗದಿತ ಮೊತ್ತಕ್ಕೆ ಒಟ್ಟು 117 ಸ್ಥಳಗಳಿಗೆ, ಈ ಕೆಳಕಂಡಂತೆ, ಪರಿಷ್ಕೃತ ದರಗಳ ತುಲನಾತ್ಮಕ ಪಟ್ಟಿ ಸಿದ್ಧಪಡಿಸಿ, ಕಡತದಲ್ಲಿ ಲಗತ್ತಿಸಲಾಗಿರುತ್ತದೆ.

| | | | |
|---|---|---|---|
| 1) ಮೆ:ಟಾಯ್ಸ್ ಅಂಡ್ ಸ್ಪೋರ್ಟ್ಸ್ | 40 ಸ್ಥಳಗಳಿಗೆ | ಒಟ್ಟು | ವೆಚ್ಚ ರೂ.40,30,000-00 |
| 2) ಮೆ:ಸುಧಾ ಎಂಟರ್ ಪ್ರೈಸಸ್ | 41 ಸ್ಥಳಗಳಿಗೆ | ಒಟ್ಟು | ವೆಚ್ಚ ರೂ.33,95,000-00 |
| 3) ಮೆ:ವಿನ್ಯಾಸ್ ಪ್ಲೇ ಸಿಸ್ಟಮ್ ಸಂಸ್ಥೆ | 30 ಸ್ಥಳಗಳಿಗೆ | ಒಟ್ಟು | ವೆಚ್ಚ ರೂ.25,70,000-00 |
| | **117 ಸ್ಥಳಗಳಿಗೆ** | **ಒಟ್ಟು** | **ವೆಚ್ಚ ರೂ.99,95,000-00** |

2011-12ನೇ ಸಾಲಿಗೆ ಆಯ-ವ್ಯಯ ಶೀರ್ಷಿಕೆಯಡಿ 24 ಶಿಕ್ಷಣ, ಸಂಸ್ಕೃತಿ ಮತ್ತು ಕ್ರೀಡೆ, ಆಡಳಿತ ವೆಚ್ಚಗಳು, ಕ್ರೀಡಾಭಿವೃದ್ಧಿ ಚಟುವಟಿಕೆಗಳು, ಮಕ್ಕಳ ಆಟದ ಉಪಕರಣಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯಕ್ಕೆ ಹಂಚಿಕೆ ಮೊತ್ತ ರೂ.100-00ಲಕ್ಷಗಳು, ಆರ್ಥಿಕ ವರ್ಷ ದಿನಾಂಕ:31.03.2012ಕ್ಕೆ ಮುಕ್ತಾಯವಾಗಿರುವುದರಿಂದ, ಸದರಿ ಅನುದಾನದಲ್ಲಿ ವೆಚ್ಚವನ್ನು ಭರಿಸಲು ಅವಕಾಶವಿರುವುದಿಲ್ಲ. ಆದುದರಿಂದ, 2012-13ನೇ ಸಾಲಿನ ಕರಡು ಆಯ-ವ್ಯಯದಲ್ಲಿ ಅನುಮೋದನೆಯನ್ನು ನಿರೀಕ್ಷಿಸಿ ಮೂವರು ಟೆಂಡರ್‌ದಾರರಿಗೆ ಸರಬರಾಜು ಆದೇಶ ನೀಡಲು ಅನುಮೋದನೆ ಕೋರಿ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ತಾ:27.04.2012ರ ಅಪರ ಆಯುಕ್ತರವರ (ಯೋ) ಇವರ ಟಿಪ್ಪಣಿ ಒಪ್ಪಿದೆ.

ವಿಷಯ ಸಂಖ್ಯೆ:ಶಿ.ಸ್ಥಾ.ಸ/03/12-13

ವಿಷಯ: ಪಾಲಿಕೆಯ ಶಾಲಾ/ಕಾಲೇಜುಗಳನ್ನು ಸರ್ಕಾರಕ್ಕೆ ವಹಿಸುವ ಬಗ್ಗೆ.

***

ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ/ಪಿಆರ್/139/12-13, ದಿನಾಂಕ:17.05.12ರಂದು ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯದಲ್ಲಿ ಪಾಲಿಕೆಯು ಕೆ.ಎಂ.ಸಿ ಕಾಯ್ದೆ 1976 ವಿಧಿ 58 ರ 21(ಡಿ) ಮತ್ತು 23 ನಿಯಮಗಳಂತೆ ನಿಗಮದ ವಿವೇಚನಾತ್ಮಕ ಪ್ರಕಾರ್ಯಗಳ ಅನುಸಾರ ಶಿಕ್ಷಣ ಕ್ಷೇತ್ರದ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 144 ಶಿಕ್ಷಣ ಸಂಸ್ಥೆಗಳಿದ್ದು, ಇದರಲ್ಲಿ ಒಟ್ಟು 18,203 ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿರುತ್ತಾರೆ. ಈ ಸಂಸ್ಥೆಗಳ ವಿವರಗಳು ಈ ಕೆಳಕಂಡಂತಿವೆ.

**ಪಾಲಿಕೆಯ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಶಾಲಾ/ಕಾಲೇಜುಗಳ ವಿವರಗಳು**

| ವಿವರ | ಒಟ್ಟು |
|---|---|
| ಶಿಶುವಿಹಾರ | 84 |
| ಪ್ರಾಥಮಿಕ | 12 |
| ಪ್ರೌಢ ಶಾಲೆ | 34 |
| ಕಿರಿಯ ಕಾಲೇಜು | 13 |
| ಡಿಗ್ರಿ ಕಾಲೇಜು | 01 |
| ಒಟ್ಟು | 144 |

**2011-12ನೇ ಸಾಲಿನ ವಿದ್ಯಾರ್ಥಿಗಳ ಸಂಖ್ಯಾಬಲ**

| ಕ್ರ.ಸ | ಶಾಲೆಯ ಹೆಸರು | ಸಂಖೆ | ಸಾಮಾನ್ಯ | ಪ.ಜಾ | ಪ.ಪಂ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|---|---|
| | | | | | | ಬಾಲಕರು | ಬಾಲಕೀಯರು | ಒಟ್ಟು |
| 1 | ಶಿಶುವಿಹಾರ | 84 | 1508 | 232 | 2479 | 2102 | 2117 | 4219 |
| 2 | ಪ್ರಾಥಮಿಕ | 12 | 899 | 22 | 897 | 993 | 825 | 1818 |
| 3 | ಪ್ರೌಢ ಶಾಲೆ | 34 | 2665 | 187 | 4488 | 2694 | 4646 | 7340 |
| 4 | ಕಿರಿಯ ಕಾಲೇಜು | 13 | 1302 | 114 | 3356 | 1013 | 3759 | 4772 |
| 5 | ಡಿಗ್ರಿ ಕಾಲೇಜು | 01 | 24 | 00 | 30 | 26 | 28 | 54 |
| | ಒಟ್ಟು | 114 | 6398 | 555 | 11250 | 6828 | 11375 | 18203 |

**ಪರೀಕ್ಷಾ ಫಲಿತಾಂಶದ ವಿವರ**

| ವರ್ಷ | ತರಗತಿ | ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳು | ಉತ್ತೀರ್ಣರಾದ ವಿದ್ಯಾರ್ಥಿಗಳು | ಶೇಕಡವಾರು | ಡಿಸ್ಟಿಂಕ್ಷನ್ |
|---|---|---|---|---|---|
| 2008-09 | 7ನೇ ತರಗತಿ | | | 100% | |
| | ಎಸ್.ಎಸ್.ಎಲ್.ಸಿ | 2531 | 1261 | 50% | 8 |
| | ದ್ವಿತೀಯ ಪಿ.ಯು.ಸಿ | 2237 | 969 | 43.3% | 8 |

| | | | | | |
|---|---|---|---|---|---|
| 2009-10 | 7ನೇ ತರಗತಿ | | | 100% | |
| | ಎಸ್.ಎಸ್.ಎಲ್.ಸಿ | 2262 | 793 | 35% | 7 |
| | ದ್ವಿತೀಯ ಪಿ.ಯು.ಸಿ | 1992 | 1030 | 52% | 8 |
| 2010-11 | 7ನೇ ತರಗತಿ | | | 100% | |
| | ಎಸ್.ಎಸ್.ಎಲ್.ಸಿ | 2092 | 1185 | 56.64% | 10 |
| | ದ್ವಿತೀಯ ಪಿ.ಯು.ಸಿ | 2216 | 1241 | 56.00% | 12 |

<u>ಇದರಲ್ಲಿ ಪಾಲಿಕೆಯ ಬೋಧಕರ ಮತ್ತು ಬೋಧಕೇತರ ಸಿಬ್ಬಂದಿ, ಈ ಕೆಳಕಂಡಂತಿವೆ.</u>

| ಕ್ರ ಸ | ವಿಭಾಗ | ಹುದ್ದೆ | ಮಂಜೂರಾತಿ | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ | ಖಾಲಿ ಹುದ್ದೆ |
|---|---|---|---|---|---|
| 1 | ಕಛೇರಿ | ವಿದ್ಯಾಧಿಕಾರಿ | 1 | 1 | 0 |
| | | ಸಹಾಯಕ ವಿದ್ಯಾಧಿಕಾರಿ | 1 | 1 | 0 |
| | | ವಿಷಯ ಪರಿವೀಕ್ಷಕರು | 5 | 3 | 2 |
| 2 | ಶಿಶುವಿಹಾರ | ಸಹ ಶಿಕ್ಷಕರು | 160 | 49 | 111 |
| 3 | ಪ್ರಾಥಮಿಕ ಶಾಲೆ | ಮುಖ್ಯೋಪಾಧ್ಯಾಯರು | 5 | 0 | 5 |
| | | ಸಹ ಶಿಕ್ಷಕರು | 149 | 44 | 105 |
| 4 | ಪ್ರೌಢ ಶಾಲೆ | ಮುಖ್ಯೋಪಾಧ್ಯಾಯರು/ ಉಪ ಪ್ರಾಂಶುಪಾಲರು | 25 | 23 | 2 |
| | | ಸಹ ಶಿಕ್ಷಕರು | 423 | 137 | 286 |
| 5 | ಕಿರಿಯ ಕಾಲೇಜು | ಪ್ರಾಂಶುಪಾಲರು | 11 | 11 | 0 |
| | | ಉಪನ್ಯಾಸಕರು | 129 | 118 | 11 |
| 6 | ಪದವಿ ಕಾಲೇಜು | ಪ್ರಾಂಶುಪಾಲರು | 2012-13ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುತ್ತದೆ. ಹುದ್ದೆಗಳಿಗೆ ಮಂಜೂರಾತಿ ಪಡೆದಿರುವುದಿಲ್ಲ. | | |
| | | ಉಪನ್ಯಾಸಕರು | | | |

ವಿದ್ಯಾ ಕ್ಷೇತ್ರಕ್ಕೆ 2011-12ನೇ ಸಾಲಿಗೆ ಆಯ-ವ್ಯಯದಲ್ಲಿ ರೂ.48-00(ರೂ.ನಲವತ್ತೆಂಟು ಕೋಟಿಗಳು) ಕೋಟಿಗಳನ್ನು ಕಾಯ್ದಿರಿಸಲಾಗಿದ್ದು, ಡಿಸೆಂಬರ್ 2011ರ ಅಂತ್ಯದವರೆಗೂ ರೂ.35-00 ಕೋಟಿ (ರೂ.ಮೂವತ್ತೈದು ಕೋಟಿಗಳು) ವೆಚ್ಚವಾಗುತ್ತದೆ.

ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ಅನ್ವಯ ಅಧ್ಯಾಯ 5 ರಂತೆ ಕಲಂ 57, 58 ಮತ್ತು 59 ರಂತೆ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಸರ್ಕಾರದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಇಲಾಖೆಗಳ ನಿರ್ವಹಣೆಗಾಗಿ ಸಚಿವಾಲಯ ಇದ್ದು ಯಾವುದೇ ರೀತಿಯ ಹಣದ ಕೊರತೆ ಇರುವುದಿಲ್ಲ. ಪಾಲಿಕೆಯಲ್ಲಿ ಕಲಂ 58 ರ ಅನ್ವಯ ನಿಗಮದ ನಿರ್ಬಂಧಕ ಪ್ರಕಾರ್ಯಗಳಂತೆ 31 ಕ್ಷೇತ್ರಗಳಲ್ಲಿ ಪಾಲಿಕೆಯು ಕಾರ್ಯನಿರ್ವಹಿಸಬೇಕಾಗಿರುತ್ತದೆ.

ಪಾಲಿಕೆ ನಿರ್ಬಂಧಕ ಪ್ರಕಾರ್ಯಗಳಲ್ಲಿ 19ನೇ ಪ್ಯಾರಾದಂತೆ ಪ್ರಾಥಮಿಕ ಪೂರ್ವ ಶಿಕ್ಷಣಕ್ಕಾಗಿ ಶಾಲೆಗಳನ್ನು ನಿರ್ವಹಿಸುವುದು ಅಥವಾ ಅವುಗಳಿಗೆ ನೆರವು ನೀಡುವ ಕರ್ತವ್ಯವನ್ನು ಪಾಲಿಸುವ ಅವಶ್ಯಕತೆ ಇರುತ್ತದೆ. ಕಲಂ 59 ರಂತೆ ನಿಗಮದ ವಿವೇಚನಾತ್ಮಕ ಪ್ರಕಾರ್ಯಗಳಲ್ಲಿ ಅನುಮೋದಿಸಿರುವಂತೆ ಪ್ಯಾರಾ 21 (ಡಿ) ಮತ್ತು 23 ರ ಅಡಿಯಲ್ಲಿ ಶಿಕ್ಷಣದ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಪಾಲಿಕೆಯು ಮುಖ್ಯವಾಗಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಮೇಲು ಸೇತುವೆ, ಘನತ್ಯಾಜ್ಯ ವಸ್ತುಗಳ ವಿಲೇವಾರಿ, ಕಲ್ಯಾಣ ಕಾರ್ಯಕ್ರಮಗಳು, ಆರೋಗ್ಯ ಇಲಾಖೆಯ ಕೆಲಸಗಳು ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯ ಕೆಲಸ ಕಾರ್ಯಗಳು, ಬೀದಿ ದೀಪಗಳ ನಿರ್ವಹಣೆ, ಕುಡಿಯುವ ನೀರಿನ ನಿರ್ವಹಣೆ, ಪ್ರಕೃತಿ ವಿಕೋಪಗಳ ನಿರ್ವಹಣೆ ಹಾಗೂ ಸಾರ್ವಜನಿಕ ಆರೋಗ್ಯ ಇತ್ಯಾದಿ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದ್ದು, ಶಿಕ್ಷಣ ಕ್ಷೇತ್ರಕ್ಕೆ ಪ್ರತ್ಯೇಕವಾಗಿ ಪೂರ್ಣ ಆದ್ಯತೆಯನ್ನು ಕೊಡಲು ಸಾಧ್ಯವಾಗುತ್ತಿರುವುದಿಲ್ಲ.

ಸರ್ಕಾರದ ಹಂತದಲ್ಲಿ ಶೈಕ್ಷಣಿಕ ವಿಷಯಗಳನ್ನು ಸಮಗ್ರವಾಗಿ ನಿರ್ವಹಿಸಲು ಪ್ರತ್ಯೇಕ ಶಿಕ್ಷಣ ಇಲಾಖೆ ಇರುವುದರಿಂದ, ಈಗಾಗಲೇ ಸಿಬ್ಬಂದಿ ನೇಮಕಾತಿ, ಶಾಲೆ ಮಕ್ಕಳಿಗೆ ಕಲ್ಯಾಣ ಕಾರ್ಯಕ್ರಮಗಳು, ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ವಿದ್ಯಾರ್ಜನೆಯನ್ನು ಬಲಪಡಿಸುವ ಬಗ್ಗೆ ವಿವಿಧ ರೀತಿಯ ಸಂಶೋಧನೆ, ಆಧುನಿಕ ತಂತ್ರಜ್ಞಾನ ಅಳವಡಿಕೆ ಇತ್ಯಾದಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಇರುತ್ತವೆ.

ಸಾರ್ವಜನಿಕ ಶಿಕ್ಷಣವನ್ನು ನೀಡುವ ಸಲುವಾಗಿ ಸರ್ಕಾರದ ಹಂತದಲ್ಲಿ ಒಂದು ಉತ್ತಮವಾದ ವ್ಯವಸ್ಥೆ ಇದ್ದು, ಶಿಕ್ಷಣದ ಗುಣ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ವ ಶಿಕ್ಷಣ ಅಭಿಯಾನ, ಕಲಿ ನಲಿ ಮುಂತಾದ ನೂತನ ಆವಿಷ್ಕಾರಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಸಮಗ್ರವಾದ ಶಿಕ್ಷಣವನ್ನು ನೀಡುವ ಸೌಲಭ್ಯದ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಶಾಲಾ/ಕಾಲೇಜುಗಳನ್ನು ಮುಖ್ಯವಾಹಿನಿಗೆ ತಂದು ಇಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೂ ಸಹ ಉತ್ತಮ ಸೌಲಭ್ಯಗಳನ್ನು ಒದಗಿಸುವುದು ಅತ್ಯಂತ ಸಮಂಜಸಕರ ಮತ್ತು ಔಚಿತ್ಯಪೂರ್ಣವಾಗಿರುತ್ತದೆ.

ಪಾಲಿಕೆಯ ಶಾಲಾ/ಕಾಲೇಜುಗಳ ನಿರ್ವಹಣೆಯನ್ನು ಸರ್ಕಾರ ವಹಿಸಿಕೊಳ್ಳುವ ಕುರಿತು ಪೂರ್ವಭಾವಿ ಚರ್ಚೆಯನ್ನು ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಪ್ರಾಥಮಿಕ ಶಿಕ್ಷಣ ಮತ್ತು ಸಚಿವರು ಮತ್ತು ಪ್ರಾಥಮಿಕ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ನಡೆಸಲಾಗಿದ್ದು, ಅವರು ತಾತ್ವಿಕವಾಗಿ ಪಾಲಿಕೆಯ ಶಾಲಾ/ಕಾಲೇಜುಗಳನ್ನು ಸರ್ಕಾರಕ್ಕೆ ವಹಿಸಿಕೊಂಡು ಅವುಗಳನ್ನು ನಿರ್ವಹಣೆ ಮಾಡಲು ಒಪ್ಪಿಗೆ ಸೂಚಿಸಿರುತ್ತಾರೆ.

ಮೇಲ್ಕಂಡ ವಿಷಯಗಳ ಹಿನ್ನೆಲೆಯಲ್ಲಿ ಪಾಲಿಕೆಯ ಶಾಲಾ/ಕಾಲೇಜುಗಳನ್ನು ನಿರ್ವಹಣೆ ಮಾಡುವ ಸಲುವಾಗಿ ಪಾಲಿಕೆಯಲ್ಲಿ ಈಗಿರುವ ಚರ, ಸ್ಥಿರಾಸ್ತಿ, ಸಿಬ್ಬಂದಿ ಮತ್ತು ಇತರೇ ಮೂಲಭೂತ ಸೌಕರ್ಯಗಳನ್ನೊಳಗೊಂಡಂತೆ ಸರ್ಕಾರಕ್ಕೆ ಹಸ್ತಾಂತರಿಸಲು ಒಪ್ಪಿಗೆ ಕೋರಿ ಶಿಕ್ಷಣ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ/ಪಿಆರ್/139/12-13, ದಿನಾಂಕ:17.05.12 ಅನ್ನು ಮಾರ್ಪಡಿಸುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ, ನೋಟ್ ಪುಸ್ತಕ, ಸಮವಸ್ತ್ರ, ಸ್ವೆಟರ್, ಶೂ ಹಾಗೂ ಸಾಕ್ಸ್‌ಗಳ ಸೌಲಭ್ಯಗಳನ್ನು ಉಚಿತವಾಗಿ

ನೀಡಲಾಗುತ್ತಿರುತ್ತದೆ. 2011-12ನೇ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಉತ್ತಮ ಫಲಿತಾಂಶ ಬಂದಿರುತ್ತದೆ. ಉನ್ನತ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ನೆರವಾಗಲು ಹಾಗೂ ಪ್ರೋತ್ಸಾಹಿಸಲು ಪ್ರೋತ್ಸಾಹ ಧನವನ್ನು ನೀಡುತ್ತಾ ಬಂದಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪದವಿ ಪೂರ್ವ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜನ್ನು ನಡೆಸುತ್ತಿರುವುದರಿಂದ, ರಾಷ್ಟ್ರದ ಕೆಲವು ರಾಜ್ಯದ ಮಹಾನಗರ ಪಾಲಿಕೆಗಳಿಂದ ಪ್ರಶಂಸೆಗಳನ್ನು ಕೂಡ ದಿನಪತ್ರಿಕೆಗಳಲ್ಲಿ ಕಾಣಬಹುದಾಗಿದೆ. ಈಗಿರುವಾಗ ಒಂದು ಕಡೆ ಸರ್ಕಾರವು ಬಿ.ಬಿ.ಎಂ.ಪಿ. ವತಿಯಿಂದ ಹೊಸದಾಗಿ ಐದು ಪ್ರಥಮ ದರ್ಜೆ ಕಾಲೇಜುಗಳನ್ನು ಆರಂಭಿಸಲು ಅನುಮತಿ ನೀಡಿರುತ್ತದೆ. ಮತ್ತೊಂದು ಕಡೆ ಬಿ.ಬಿ.ಎಂ.ಪಿ. ಶಾಲಾ/ಕಾಲೇಜುಗಳನ್ನು ಸರ್ಕಾರಕ್ಕೆ ವಹಿಸುವಂತೆ ಕಡತವನ್ನು ಮಂಡಿಸಲಾಗಿರುತ್ತದೆ. ಈ ಪ್ರಸ್ತಾವನೆಯು ದ್ವಂದ್ವ ರೀತಿಯಲ್ಲಿ ಕೂಡಿರುತ್ತದೆ. ಈ ಮೇಲ್ಕಂಡ ಅಂಶಗಳನ್ನು ಸಮಿತಿಯು ಕೂಲಂಕುಶವಾಗಿ ಚರ್ಚಿಸಿ ಪಾಲಿಕೆಯ ಶಾಲಾ/ಕಾಲೇಜುಗಳನ್ನು ಸರ್ಕಾರಕ್ಕೆ ವಹಿಸುವ ಪ್ರಸ್ತಾವನೆಯನ್ನು ಕೈಬಿಡಲು ಒಟ್ಟಾರೆ ಅಭಿಪ್ರಾಯ ವ್ಯಕ್ತಪಡಿಸಲಾಯಿತು.

<u>ವಿಷಯ ಸಂಖ್ಯೆ:ಶಿ.ಸ್ಥಾ.ಸ/04/12-13</u>

ವಿಷಯ: ಪಾಲಿಕೆಯ ಶಿಶುವಿಹಾರದಿಂದ ಪ್ರೌಢ ಶಾಲೆವರೆಗೆ 2012-13ನೇ ಸಾಲಿನಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಶಾಲಾ ಸಮವಸ್ತ್ರವನ್ನು ಸರಬರಾಜು ಮಾಡುವ ಕುರಿತು.

★★★

ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/215/11-12, ದಿನಾಂಕ:21.05.2012ರಂದು ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯಡಿ 87 ಶಿಶುವಿಹಾರ, 12 ಪ್ರಾಥಮಿಕ ಶಾಲೆ ಹಾಗೂ 34 ಪ್ರೌಢ ಶಾಲೆಗಳು ಅಸ್ತಿತ್ವದಲ್ಲಿದ್ದು, ಸದರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ 2012-13ನೇ ಸಾಲಿನಲ್ಲಿ ಪಾಲಿಕೆಯ ವತಿಯಿಂದ ಉಚಿತವಾಗಿ ಶಾಲಾ ಸಮವಸ್ತ್ರವನ್ನು ಸರಬರಾಜು ಮಾಡಬೇಕಾಗಿರುತ್ತದೆ.

ಮೆ:ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ) ರವರ ಪತ್ರದ ಸಂಖ್ಯೆ:KHDC/MD/MKTG(WS)BBMP-UNI/11-12, ದಿನಾಂಕ:12.03.2012ರಂದು ಮಾನ್ಯ ಆಯುಕ್ತರವರಿಗೆ ಪತ್ರವನ್ನು ವಿಳಾಸ ಮಾಡಿ ಕಳೆದ ಎಳೆಂಟು ವರ್ಷಗಳಿಂದ ಬಿ.ಬಿ.ಎಂ.ಪಿ. ಶಾಲೆಗಳಿಗೆ ಸಮವಸ್ತ್ರಗಳನ್ನು ಸರಬರಾಜು ಮಾಡುತ್ತಿದ್ದು, ಅದರಂತೆ, ಪ್ರಸಕ್ತ 2012-13ನೇ ಸಾಲಿನಲ್ಲಿ ಮಹಾನಗರ ಪಾಲಿಕೆಯ ಶಾಲೆಗಳ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಸರಬರಾಜು ಮಾಡಲು ಸರಬರಾಜು ಆದೇಶ ನೀಡುವಂತೆ ಕೋರಿರುತ್ತಾರೆ.

2012-13ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 87 ಶಿಶುವಿಹಾರ, 12 ಪ್ರಾಥಮಿಕ ಶಾಲೆ ಮತ್ತು 34 ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶೈಕ್ಷಣಿಕ ವರ್ಷದ ಆರಂಭದಲ್ಲೇ ಶಾಲಾ ಸಮವಸ್ತ್ರಗಳನ್ನು ಒದಗಿಸುವುದು ಅವಶ್ಯಕವಾಗಿರುತ್ತದೆ.

2012-13ನೇ ಸಾಲಿನ ಆಯ-ವ್ಯಯದಲ್ಲಿ ಪಾಲಿಕೆಯ ಶಿಶುವಿಹಾರದಿಂದ ಪ್ರೌಢ ಶಾಲೆಯವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶಾಲಾ ಸಮವಸ್ತ್ರಗಳನ್ನು ಸರಬರಾಜು ಮಾಡಲು ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಇತರೇ ವೆಚ್ಚಗಳು, ಶಿಶುವಿಹಾರದಿಂದ ಪ್ರೌಢ ಶಾಲಾವರೆಗಿನ ವಿದ್ಯಾರ್ಥಿಗಳಿಗೆ ಶಾಲಾ ಸಮವಸ್ತ್ರ ನೀಡುವುದು ಮತ್ತು ಸ್ವೆಟರ್‌ಗಳನ್ನು ನೀಡುವುದು ಎಂಬ ಉಪ ಶೀರ್ಷಿಕೆಯಲ್ಲಿ ಅಂದಾಜು ರೂ.250-00ಲಕ್ಷಗಳ ಆಯ-ವ್ಯಯವನ್ನು ನಿರೀಕ್ಷಿಸಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

2012-13ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಶುವಿಹಾರದಿಂದ ಪ್ರೌಢ ಶಾಲೆಯವರೆಗೆ ವ್ಯಾಸಂಗ ಮಾಡುವ ಅಂದಾಜು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯಾಬಲವನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ.

| ಕ್ರ. ಸ | ಶಾಲಾ ವರ್ಗ | ಬಾಲಕರ ಸಂಖ್ಯೆ | ಬಾಲಕಿಯರ ಸಂಖ್ಯೆ | ಒಟ್ಟು ಸಂಖ್ಯೆ |
|---|---|---|---|---|
| 1 | ಶಿಶುವಿಹಾರ | 2793 | 2799 | 5592 |
| 2 | ಪ್ರಾಥಮಿಕ ಶಾಲೆ | 1095 | 942 | 2037 |
| 3 | ಪ್ರೌಢ ಶಾಲೆ | 3028 | 5042 | 8070 |
| | **ಒಟ್ಟು** | **6916** | **8783** | **15699** |

ಸದರಿ ಸಂಸ್ಥೆಯವರು ದಿನಾಂಕ:12.03.2012ರಂದು ಈ ಕೆಳಕಂಡಂತೆ ದರಪಟ್ಟಿಯನ್ನು ಸಲ್ಲಿಸಿ, ಆ ದರದಂತೆ, ಸರಬರಾಜು ಮಾಡಲು ಕೋರಿರುತ್ತಾರೆ.

| ಕ್ರ. ಸ | ಶಾಲಾ ವರ್ಗ | ಸಿದ್ಧಪಡಿಸಿದ ಸಮವಸ್ತ್ರಗಳ ಬೆಲೆ(ಒಂದು ಜೊತೆಗೆ) ರೂ.ಪೈ ಗಳಲ್ಲಿ | | | |
|---|---|---|---|---|---|
| | | ಬಾಲಕರು | | ಬಾಲಕಿಯರು | |
| | | ನಿಕ್ಕರ್/ಅರ್ಧ ತೋಳಿನ ಷರ್ಟ್ ಮತ್ತು ಪ್ಯಾಂಟ್/ಅರ್ಧ ತೋಳಿನ ಷರ್ಟ್ | | ಸ್ಕರ್ಟ್ ಮತ್ತು ಅರ್ಧ ತೋಳಿನ ಬ್ಲೌಸ್ | |
| | | ಬಣ್ಣದ ಸಮವಸ್ತ್ರ | ಬಿಳಿ ಸಮವಸ್ತ್ರ | ಬಣ್ಣದ ಸಮವಸ್ತ್ರ | ಬಿಳಿ ಸಮವಸ್ತ್ರ |
| 1 | ಶಿಶುವಿಹಾರ | 243.00 | – | 322.00 | – |
| 2 | 1 ರಿಂದ 2ನೇ ತರಗತಿ | 286.00 | – | 362.00 | – |
| 3 | 3 ರಿಂದ 4ನೇ ತರಗತಿ | 307.00 | – | 416.00 | – |
| 4 | 5 ರಿಂದ 7ನೇ ತರಗತಿ | 380.00 | – | 457.00 | – |
| 5 | 8ನೇ ತರಗತಿ | 517.00 | 490.00 | 499.00 | 468.00 |
| 6 | 9ನೇ ತರಗತಿ | 517.00 | 490.00 | 527.00 | 495.00 |
| 7 | 10ನೇ ತರಗತಿ | 517.00 | 490.00 | 527.00 | 495.00 |

ಮೇಲ್ಕಂಡ ದರಪಟ್ಟಿಯಂತೆ ಶಿಶುವಿಹಾರದಿಂದ ಪ್ರೌಢ ಶಾಲೆಯವರೆಗೆ ವ್ಯಾಸಂಗ ಮಾಡುವ ಸುಮಾರು 15,699 ಮಂದಿ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಖರೀದಿಸಿ ವಿತರಿಸಲು ತಗಲುವ ವೆಚ್ಚ, ಈ ಕೆಳಕಂಡಂತೆ ಇರುತ್ತದೆ.

| ಕ್ರ ಸ | ಶಾಲಾ ವರ್ಗ | ಸಮ ವಸ್ತ್ರದ ಮಾದರಿ | ಸಮವಸ್ತ್ರದ ದರ (ಒಂದು ಜೊತೆಗೆ) ಹೊಲಿಗೆ ದರ, ಮಾರಾಟ ತೆರಿಗೆ, ಸಾಗಣಿಕೆ ವೆಚ್ಚ ಸೇರಿ) ರೂ.ಪೈ. ಗಳಲ್ಲಿ | | ಅಂದಾಜು ಸಂಖ್ಯಾ ಬಲ | ಬಣ್ಣದ ಸಮ ವಸ್ತ್ರದ ಮೊತ್ತ ರೂ. ಗಳಲ್ಲಿ | ಬಿಳಿ ಸಮವಸ್ತ್ರದ ಮೊತ್ತ ರೂ. ಪೈಗಳಲ್ಲಿ | ಒಟ್ಟು ಮೊತ್ತ ರೂ. ಪೈಗಳಲ್ಲಿ |
|---|---|---|---|---|---|---|---|---|
| | ಬಾಲಕರಿಗೆ | | ಬಣ್ಣದ ಸಮ ವಸ್ತ್ರ | ಬಿಳಿ ಸಮ ವಸ್ತ್ರ | | | | |
| 1 | ಶಿಶುವಿಹಾರ | ಅರ್ಧ ತೋಳಿನ ಷರ್ಟ್ ಮತ್ತು ನಿಕ್ಕರ್ | 243 | – | 2793 | 678699.00 | – | 678699.00 |
| 2 | 1 ರಿಂದ 2ನೇ ತರಗತಿ | | 286 | – | 330 | 94380.00 | – | 94380.00 |
| 3 | 3 ರಿಂದ 4ನೇ ತರಗತಿ | | 307 | – | 325 | 99775.00 | – | 99775.00 |
| 4 | 5 ರಿಂದ 7ನೇ ತರಗತಿ | | 380 | – | 440 | 167200.00 | – | 167200.00 |
| 5 | 8ನೇ ತರಗತಿ | ಅರ್ಧ ತೋಳಿನ ಷರ್ಟ್ ಮತ್ತು ಪೂರ್ಣ ಪ್ಯಾಂಟ್ | 517 | 490 | 1080 | 558360.00 | 529200.00 | 1087560.00 |
| 6 | 9ನೇ ತರಗತಿ | | 517 | 490 | 975 | 504075.00 | 477750.00 | 981825.00 |
| 7 | 10ನೇ ತರಗತಿ | | 517 | 490 | 973 | 503041.00 | 476770.00 | 979811.00 |
| | | ಒಟ್ಟು | | | 6916 | 2605530.00 | 1483720.00 | 4089250.00 |
| | ಬಾಲಕಿಯರಿಗೆ | | | | | | | |
| 1 | ಶಿಶುವಿಹಾರ | ಅರ್ಧ ತೋಳಿನ ಷರ್ಟ್ ಮತ್ತು ಸ್ಕರ್ಟ್ | 322 | | 2799 | 901278.00 | | 901278.00 |
| 2 | 1 ರಿಂದ 2ನೇ ತರಗತಿ | | 362 | | 275 | 99550.00 | | 99550.00 |
| 3 | 3 ರಿಂದ 4ನೇ ತರಗತಿ | | 416 | | 300 | 124800.00 | | 124800.00 |
| 4 | 5 ರಿಂದ 7ನೇ ತರಗತಿ | | 457 | | 367 | 167719.00 | | 167719.00 |
| 5 | 8ನೇ ತರಗತಿ | | 499 | 468 | 1815 | 905685.00 | 849420.00 | 1755105.00 |
| 6 | 9ನೇ ತರಗತಿ | | 527 | 495 | 1640 | 864280.00 | 811800.00 | 1676080.00 |
| 7 | 10ನೇ ತರಗತಿ | | 527 | 495 | 1587 | 836349.00 | 785565.00 | 1621914.00 |
| | | ಒಟ್ಟು | | | 8783 | 3899661.00 | 2446785.00 | 6346446.00 |
| | | ಸಮಗ್ರ | | | 15699 | 6505191.00 | 3930505.00 | 10435696.00 |

(ಒಂದು ಕೋಟಿ ನಾಲ್ಕು ಲಕ್ಷದ ಮೂವತ್ತೈದು ಸಾವಿರದ ಆರುನೂರ ತೊಂಬತ್ತಾರು ಮಾತ್ರ)

2012-13ನೇ ಸಾಲಿನಲ್ಲಿ ಉದ್ದೇಶಿತ ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ಅಂದಾಜು ಆಯ-ವ್ಯಯದ ಅನುಮೋದನೆಯನ್ನು ನಿರೀಕ್ಷಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಶುವಿಹಾರದಿಂದ ಪ್ರೌಢ ಶಾಲೆಯವರೆಗೆ ವ್ಯಾಸಂಗ ಮಾಡುವ ಸುಮಾರು 15699 ಮಂದಿ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಶಾಲಾ ಸಮವಸ್ತ್ರಗಳನ್ನು ರೂ.1,04,35,696.00ಗಳನ್ನು ಹಾಗೂ ವಿದ್ಯಾರ್ಥಿಗಳು ಹೆಚ್ಚುವರಿ ದಾಖಲಾತಿಯಾದ್ದಲ್ಲಿ ಅವರಿಗೂ, ಅವರ ಸಮವಸ್ತ್ರಗಳಿಗೂ ಸಹ ತಗಲುವ ಸಮವಸ್ತ್ರದ ವೆಚ್ಚವನ್ನು ನಿರೀಕ್ಷಿಸಿ 1999ರ ಪಾರದರ್ಶಕ ಕಾಯ್ದೆ ಪ್ರಕಾರ ನೇರವಾಗಿ ಮೆ: ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಅವಶ್ಯಕತೆ ಇರುವ ಪ್ರಮಾಣದಷ್ಟು ಸಮವಸ್ತ್ರಗಳನ್ನು ಖರೀದಿಸಲು ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು, ವಿದ್ಯಾರ್ಥಿಗಳಿಗೆ ಸಮವಸ್ತ್ರದ ವೆಚ್ಚಗಳ ವಿತರಣೆಗೆ ಮೀಸಲಿಸಿರುವ ಅನುದಾನದ ಮೊತ್ತ ರೂ.250.00ಲಕ್ಷಗಳಲ್ಲಿ ಮೇಲ್ಕಂಡ ವೆಚ್ಚವನ್ನು ಭರಿಸಲು ಮತ್ತು ಮೆ: ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ 1999ರ ಪಾರದರ್ಶಕ ಕಾಯ್ದೆ ಪ್ರಕಾರ ಸರಬರಾಜು ಆದೇಶ ನೀಡಲು ಅನುಮೋದನೆ ಕೋರಿ ಶಿಕ್ಷಣ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ತಾ:21.05.2012ರ ಆಯುಕ್ತರ ಟಿಪ್ಪಣಿ ಒಪ್ಪಲಾಗಿದೆ.

<u>ವಿಷಯ ಸಂಖ್ಯೆ:ಶಿ.ಸ್ಥಾ.ಸ/05/12-13</u>

ವಿಷಯ: ಪಾಲಿಕೆಯ ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಕಿರಿಯ ಕಾಲೇಜುಗಳಲ್ಲಿ 12-13ನೇ ಸಾಲಿನಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ಮತ್ತು ಲಾಂಗ್ ನೋಟ್ ಪುಸ್ತಕಗಳನ್ನು ಸರಬರಾಜು ಮಾಡುವ ಕುರಿತು.

★★★

ಆಯುಕ್ತರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/214/11-12, ದಿನಾಂಕ:29.05.12ರಂದು ವಿವರಿಸಿರುವಂತೆ, 2012-13ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 12 ಪ್ರಾಥಮಿಕ ಶಾಲೆ, 34 ಪ್ರೌಢ ಶಾಲೆ ಮತ್ತು 13 ಕಿರಿಯ ಕಾಲೇಜುಗಳು ಹಾಗೂ 1 ಪ್ರಥಮ ದರ್ಜೆ ಕಾಲೇಜಿನಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಕಲ ವರ್ಗದ ಅಂದಾಜು 10,975 ಸಂಖ್ಯೆಯಷ್ಟು ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಸ್ಟೂಡೆಂಟ್ ನೋಟ್ ಪುಸ್ತಕಗಳನ್ನು (192 ಪುಟಗಳು) ಹಾಗೂ ಎಸ್.ಎಸ್.ಎಲ್.ಸಿ. ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ಹಾಗೂ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ಅಂದಾಜು 8,475 ಸಂಖ್ಯೆಯಷ್ಟು ವಿದ್ಯಾರ್ಥಿಗಳಿಗೆ ಸ್ಟೂಡೆಂಟ್ ಲಾಂಗ್ ನೋಟ್ ಪುಸ್ತಕಗಳನ್ನು (160 ಪುಟಗಳು) ಖರೀದಿಸಬೇಕಾಗಿರುತ್ತದೆ.

ಜೂನ್ 1 ರಿಂದ ತರಗತಿಗಳು ಆರಂಭವಾಗುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ಅನುಕೂಲವಾಗುವಂತೆ ಅತಿ ಅವಶ್ಯಕವಾಗಿ ಬೇಕಾಗಿರುವ ಅಂದಾಜು 1,60,740 ಸಂಖ್ಯೆಯಷ್ಟು ನೋಟ್ ಪುಸ್ತಕಗಳನ್ನು ಮತ್ತು 1,26,250 ಸಂಖ್ಯೆಯಷ್ಟು ಲಾಂಗ್ ನೋಟ್‌ಪುಸ್ತಕಗಳನ್ನು ಖರೀದಿಸಿ ವಿತರಿಸಬೇಕಾಗಿರುತ್ತದೆ. (ತಲಾ ವಿದ್ಯಾರ್ಥಿಗೆ ವಿತರಿಸುವ ನೋಟ್‌ಪುಸ್ತಕ ಮತ್ತು ಲಾಂಗ್ ನೋಟ್‌ಪುಸ್ತಕಗಳ ಸಂಖ್ಯೆಯನ್ನು ಪಟ್ಟಿ ಮಾಡಿ ಲಗತ್ತಿಸಲಾಗಿದೆ).

2012-13ನೇ ಸಾಲಿನ ಆಯ-ವ್ಯಯ ಶೀರ್ಷಿಕೆ 25 ಶಿಕ್ಷಣ, ನೋಟ್‌ಪುಸ್ತಕಗಳ ಖರೀದಿಗಾಗಿ ಮೊತ್ತ ರೂ.60.00ಲಕ್ಷಗಳು ನಿರೀಕ್ಷಣಾ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

ಪ್ರಧಾನ ವ್ಯವಸ್ಥಾಪಕರು(ಮಾರ್ಕೆಟಿಂಗ್) ದಿ ಮೈಸೂರು ಪೇಪರ್ ಮಿಲ್ಸ್, ಬೆಂಗಳೂರು ರವರ ಪತ್ರದ ಸಂಖ್ಯೆ: ಬಿ.ಎಲ್.ಆರ್/ಎಂಕೆಟಿ/ಜಿಎಂ/(ಎಂ)2010-11, ದಿನಾಂಕ:18.02.11 ಪತ್ರದಲ್ಲಿ ತಿಳಿಸಿರುವಂತೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿ.ಐ103ಸಿಪಿಎಂ/2009, ಬೆಂಗಳೂರು, ದಿನಾಂಕ:03.12.2009 ಮತ್ತು ಆರ್ಥಿಕ ಇಲಾಖೆ

ಸಂಖ್ಯೆ:ಆಇ997/ವೆಚ್ಚ-12/09, ದಿನಾಂಕ: 27.10.2009ರ ಅಧಿಸೂಚನೆಯಂತೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ರಾಜ್ಯ ಸರ್ಕಾರದ ಅಧೀನಕ್ಕೊಳಪಟ್ಟ ಸ್ವಾಯತ್ತ ಸಂಸ್ಥೆಗಳು, ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ತಮಗೆ ಅಗತ್ಯವಿರುವ ಮುದ್ರಣ ಹಾಗೂ ಬರೆಯುವ ಕಾಗದವನ್ನು ಅವುಗಳ ಗುಣಮಟ್ಟ ಹಾಗೂ ದರವನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಇವರ ಅಧ್ಯಕ್ಷತೆಯಲ್ಲಿ, ಈ ಸಾಮಗ್ರಿಗಳನ್ನು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸುವ (ಉದಾ:ಶಿಕ್ಷಣ ಇಲಾಖೆ/ಸರ್ಕಾರಿ ಮುದ್ರಣಾಲಯ) ಇನ್ನಿತರೇ ಇಲಾಖೆಗಳ ಇಬ್ಬರು ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಆ ಸಮಿತಿಯ ನಿರ್ಧರಿಸುವ ದರದಲ್ಲಿ, ಮಾರಾಟ ಮಾಡುವ ಷರತ್ತಿಗೊಳಪಟ್ಟು, ನೇರವಾಗಿ, ಮೈಸೂರು ಪೇಪರ್ ಮಿಲ್ಸ್ ನಿಂದ ಖರೀದಿಸಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸರ್ಕಾರವು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಗತ್ಯ ಇರುವ ಪ್ರಮಾಣದಷ್ಟು ನೋಟ್‌ಪುಸ್ತಕಗಳು ಮತ್ತು ಲಾಂಗ್ ನೋಟ್‌ಪುಸ್ತಕಗಳನ್ನು ನೇರವಾಗಿ ದಿ ಮೈಸೂರು ಪೇಪರ್ ಮಿಲ್ಸ್ ರವರಿಂದ ಖರೀದಿಸಬಹುದಾಗಿರುತ್ತದೆ.

ಪ್ರಧಾನ ವ್ಯವಸ್ಥಾಪಕರು(ಮಾರ್ಕೆಟಿಂಗ್) ದಿ ಮೈಸೂರು ಪೇಪರ್ ಮಿಲ್ಸ್, ಬೆಂಗಳೂರು ರವರು ದಿನಾಂಕ:03.03.2011ರಂದು ವಿದ್ಯಾಧಿಕಾರಿ ರವರಿಗೆ ವಿಳಾಸ ಮಾಡಿರುವ ಪತ್ರದಲ್ಲಿ ಅವಶ್ಯಕತೆ ಇರುವ ವಿನ್ಯಾಸದ ಪ್ರಕಾರ ನೋಟ್ ಪುಸ್ತಕಗಳು ಮತ್ತು ಲಾಂಗ್ ನೋಟ್ ಪುಸ್ತಕಗಳಿಗೆ( ತಲಾ ದರ ಒಂದಕ್ಕೆ) ದರಗಳನ್ನು ನಮೂದಿಸಿರುತ್ತಾರೆ. ಸದರಿಯವರು ನೀಡಿರುವ ದರಗಳು, ಈ ಕೆಳಕಂಡಂತೆ ಇರುತ್ತದೆ.

| Sl. NO. | Particulars | Rate inclusive of 5% VAT Rs.Ps. |
|---|---|---|
| 1 | Note book 192 pages ruled paper 58 GSM soft bound size 14.7 cms X 18.5 cms with BBMP Logo | 14.50 |
| 2 | Note book 160 pages ruled paper 58 GSM soft bound size 18.5 cms X 29.5 cms with BBMP Logo | 25.00 |
| 3 | Note book 160 pages un-ruled paper 58 GSM soft bound size 18.5 cms X 29.5 cms with BBMP Logo | 25.00 |

ಮೇಲ್ಕಂಡ ದರಗಳಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ನೋಟ್‌ಪುಸ್ತಕಗಳು ಮತ್ತು ಲಾಂಗ್ ನೋಟ್‌ಪುಸ್ತಕಗಳನ್ನು, ಈ ಕೆಳಕಂಡಂತೆ ಖರೀದಿಸಬಹುದಗಿರುತ್ತದೆ. (ಅವಶ್ಯಕತೆ ಇರುವ ನೋಟ್‌ಪುಸ್ತಕಗಳು ಮತ್ತು ಲಾಂಗ್ ನೋಟ್‌ಪುಸ್ತಕಗಳ ಅಂದಾಜು ಪ್ರಮಾಣದ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಲಾಗಿದೆ)

| | |
|---|---|
| ಒಟ್ಟು ನೋಟ್‌ಪುಸ್ತಕಗಳ ಸಂಖ್ಯೆ (192 ಪುಟ) 1,60,740 ತಲಾ ಒಂದಕ್ಕೆ ರೂ.14.50ರಂತೆ ತಗಲುವ ಒಟ್ಟು ಅಂದಾಜು ವೆಚ್ಚ ರೂ.(5%ರಷ್ಟು ಮಾರಾಟ ತೆರಿಗೆ ಸೇರಿ) | 23,30,730-00 |
| ಒಟ್ಟು ಲಾಂಗ್‌ಪುಸ್ತಕಗಳ ಸಂಖ್ಯೆ (160 ಪುಟ) 1,26,250 ತಲಾ ಒಂದಕ್ಕೆ ರೂ. 25.00ರಂತೆ ತಗಲುವ ಒಟ್ಟು ಅಂದಾಜು ವೆಚ್ಚ ರೂ.(5%ರಷ್ಟು ಮಾರಾಟ ತೆರಿಗೆ ಸೇರಿ) | 31,56,250-00 |
| **ಒಟ್ಟು ಮೊತ್ತ ರೂ.** | **54,86,980-00** |

(ರೂ.ಐವತ್ನಾಲ್ಕು ಲಕ್ಷದ ಎಂಭತ್ತಾರು ಸಾವಿರದ ಒಂಬೈನೂರ ಎಂಭತ್ತು ಮಾತ್ರ)

ಕಳೆದ ಸಾಲುಗಳಲ್ಲಿಯೂ ಸಹ ದಿ ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯವರಿಗೆ ಕರ್ನಾಟಕ ಪಾರದರ್ಶಕ ನಿಯಮಾನುಸಾರ ವಿನಾಯಿತಿ ಇರುವುದರಿಂದ, ಸದರಿಯವರಿಂದಲೇ ನೋಟ್‌ಪುಸ್ತಕ ಮತ್ತು ಲಾಂಗ್ ನೋಟ್‌ಪುಸ್ತಕಗಳನ್ನು ಖರೀದಿಸಲಾಗಿರುತ್ತದೆ.

2012-13ನೇ ಸಾಲಿನಲ್ಲಿ ಉದ್ದೇಶಿತ ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ಅಂದಾಜು ಆಯ-ವ್ಯಯದ ಅನುಮೋದನೆಯನ್ನು ನಿರೀಕ್ಷಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 1ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ 10,975 ಸಂಖ್ಯೆಯಷ್ಟು ಸಕಲ ವರ್ಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಹಾಗೂ 10ನೇ ತರಗತಿ, ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ಹಾಗೂ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುವ 8,475 ಸಂಖ್ಯೆಯಷ್ಟು ಸಕಲ ವರ್ಗದ ವಿದ್ಯಾರ್ಥಿಗಳಿಗೆ ಕ್ರಮವಾಗಿ 1,60,740 ನೋಟ್‌ಪುಸ್ತಕ ಮತ್ತು 1,26,250 ಸಂಖ್ಯೆಯಷ್ಟು ಲಾಂಗ್ ನೋಟ್‌ಪುಸ್ತಕಗಳನ್ನು ಹಾಗೂ ವಿದ್ಯಾರ್ಥಿಗಳು ಹೆಚ್ಚುವರಿ ದಾಖಲಾತಿಯಾದಲ್ಲಿ ಅವರಿಗೂ ಸಹ ನೋಟ್‌ಪುಸ್ತಕ ಮತ್ತು ಲಾಂಗ್ ನೋಟ್‌ಪುಸ್ತಕಗಳಿಗೂ ತಗಲುವ ವೆಚ್ಚವನ್ನು ನಿರೀಕ್ಷಿಸಿ 1999ರ ಪಾರದರ್ಶಕ ಕಾಯ್ದೆ ಪ್ರಕಾರ ನೇರವಾಗಿ ಮೆ: ದಿ ಮೈಸೂರು ಪೇಪರ್ ಮಿಲ್ಸ್ ರವರಿಂದ ಅವಶ್ಯಕತೆ ಇರುವ ಪ್ರಮಾಣದಷ್ಟು ಸಾಮಗ್ರಿಗಳನ್ನು ಖರೀದಿಸಲು ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು, ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ನೋಟ್‌ಪುಸ್ತಕಗಳ ವಿತರಣೆಗೆ ಮೀಸಲಿಸಿರುವ ಅನುದಾನದ ಮೊತ್ತ ರೂ.60.00ಲಕ್ಷಗಳಲ್ಲಿ ರೂ.54,86,980-00ನ್ನು ಮಂಜೂರು ಮಾಡಲು ಮತ್ತು ಮೆ:ದಿ ಮೈಸೂರು ಪೇಪರ್ ಮಿಲ್ಸ್, ಬೆಂಗಳೂರು, 1999ರ ಪಾರದರ್ಶಕ ಕಾಯ್ದೆ ಪ್ರಕಾರ ಸರಬರಾಜು ಆದೇಶ ನೀಡಲು ಅನುಮೋದನೆ ಕೋರಿ ಶಿಕ್ಷಣ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ತಾ:29.05.2012ರ ಮಾನ್ಯ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.

**ವಿಷಯ ಸಂಖ್ಯೆ:ಶಿ.ಸ್ಥಾ.ಸ/06 /12-13**

ವಿಷಯ: ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಸ್ಕೂಲ್ ಬ್ಯಾಗ್‌ಗಳನ್ನು ಸರಬರಾಜು ಮಾಡುವ ಕುರಿತು.

***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/09/12-13, ದಿನಾಂಕ:16.06.2012 ರಂದು ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಸ್ಕೂಲ್ ಬ್ಯಾಗ್‌ಗಳನ್ನು ಖರೀದಿಸಿ ವಿತರಿಸಲು 2012-13ನೇ ಸಾಲಿನ ಆಯ-ವ್ಯಯ 25 ಶಿಕ್ಷಣ, ಇತರೇ ವೆಚ್ಚಗಳು, ಸ್ಕೂಲ್ ಬ್ಯಾಗ್‌ಗಳ ಖರೀದಿಗಾಗಿ ರೂ.80.00ಲಕ್ಷಗಳ ಅನುದಾನವನ್ನು ನಿಗದಿಗೊಳಿಸಿದ್ದು, ಸದರಿ ಮೊತ್ತದಲ್ಲಿ ಸ್ಕೂಲ್ ಬ್ಯಾಗ್‌ಗಳನ್ನು ಖರೀದಿಸಲು ದಿನಾಂಕ:05.05.2012 ರಂದು E-Procurement Tender ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:16.05.2012ರಂದು ಕೊನೆಯ ದಿನವಾಗಿದ್ದು, ದಿನಾಂಕ:18.05.2012ರಂದು ಟೆಕ್ನಿಕಲ್ ಬಿಡ್ ಅನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ 4 (ನಾಲ್ಕು)ಜನ ಟೆಂಡರ್‌ದಾರರುಗಳಾದ 1) ಮೆ:ಮಾರುತಿ ಎಂಟರ್ ಪ್ರೈಸಸ್ # 28, ಡಾ: ಟಿ.ಸಿ.ಎಂ. ರಾಯನ್ ರಸ್ತೆ, ಬೆಂ-53 2) ಮೆ: ಬಾಲಾಜಿ ಇಂಡಸ್ಟ್ರೀಸ್ # 09, 3ನೇ ಮಹಡಿ, ಬೆಂ-53, 3) ಮೆ: ಶುಭಶ್ರೀ ಎಂಟರ್ ಪ್ರೈಸಸ್, # 09, 1ನೇ ಮಹಡಿ, ಡಾ: ಟಿ.ಸಿ.ಎಂ. ರಾಯನ್ ರಸ್ತೆ, ಬೆಂ-53 ಹಾಗೂ 4) ಮೆ: ಬಾಲಾಜಿ ಬ್ಯಾಗ್ ಮ್ಯಾನು ಫ್ಯಾಕ್ಚರ್ಸ್, # 11, 1ನೇ ಮೈನ್, ಬಿ ಸ್ಟ್ರೀಟ್, ಕುವೆಂಪುನಗರ, ಮೈಸೂರು ರಸ್ತೆ, ಬೆಂ-26 ರವರುಗಳೂ ಭಾಗವಹಿಸಿರುತ್ತಾರೆ.

ಇವರುಗಳು ಟೆಕ್ನಿಕಲ್ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲೆ ಪ್ರತಿಗಳನ್ನು ವಿದ್ಯಾಧಿಕಾರಿ, ಸಹಾಯಕ ವಿದ್ಯಾಧಿಕಾರಿ, ವಿಷಯ ಪರಿವೀಕ್ಷಕರು ಮತ್ತು ವ್ಯವಸ್ಥಾಪಕರು ಇವರುಗಳ ಸಮ್ಮುಖದಲ್ಲಿ ಪರಿಶೀಲಿಸಿದಾಗ, ಮೇಲ್ಕಂಡ ಪಟ್ಟಿಯಲ್ಲಿನ

ಕ್ರ.ಸ: 1 ರಿಂದ 3 ರವರೆಗಿನ ಟೆಂಡರ್‌ದಾರರುಗಳು ಟೆಂಡರ್‌ನ ನಿಯಮ ನಿಬಂಧನೆಗಳ ಕ್ರ.ಸ:5ರಲ್ಲಿ ಮತ್ತು ಟೆಕ್ನಿಕಲ್ ಬಿಡ್‌ನಲ್ಲಿ ಸೂಚಿಸಿರುವಂತೆ, ಪೂರ್ಣ ದಾಖಲೆ ಪತ್ರಗಳನ್ನು ಸಲ್ಲಿಸಿರುವುದು ಕಂಡು ಬಂದಿರುವುದರಿಂದ, ಸದರಿ 3 (ಮೂರು) ಜನ ಟೆಂಡರ್‌ದಾರರುಗಳ ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹರಾಗಿರುತ್ತಾರೆ. ಕ್ರ.ಸ:4 ರಲ್ಲಿರುವ ಮೆ: ಬಾಲಾಜಿ ಬ್ಯಾಗ್ ಮ್ಯಾನುಪ್ಯಾಕ್ಚರ್‌ರವರು ಟೆಕ್ನಿಕಲ್ ಬಿಡ್‌ನಲ್ಲಿ ಸೂಚಿಸಿರುವ ಕ್ರ.ಸ(2)ರಲ್ಲಿನ VAT clearing certificate for two years (2010-11 & 2011-12) 2011-12ರ ಸರ್ಟಿಫಿಕೇಟ್ ಸಲ್ಲಿಸಿರುವುದಿಲ್ಲ ಕ್ರ.ಸ: 4 ರಲ್ಲಿನ Experience for having supply of School/College Bags in bulk to the Schools/Colleges (copy of supply orders for 3 years) copy to be submitted supply order copies ಸಲ್ಲಿಸಿರುವುದಿಲ್ಲ. ಕ್ರ.ಸ:(5)ರಲ್ಲಿನ Single work order copy (supply order copy) for Rs.50.00 lakh and above in supply of School/College Bags in any one of the previous 2 financial year (2010-11 & 11-12) copy to be submitted supply order copy ಸಲ್ಲಿಸಿರುವುದಿಲ್ಲ ಹಾಗೂ ಕ್ರ.ಸ(7)ರಲ್ಲಿನ Charted Account certificate of Trade account turnover for last two years (ie., Rs.1.00Crore per year) (2010-11 & 11-12) 2011-12ರ ಸರ್ಟಿಫಿಕೇಟ್ ಸಲ್ಲಿಸಿರುವುದಿಲ್ಲ. ಆದ್ದರಿಂದ, ಮೆ: ಬಾಲಾಜಿ ಬ್ಯಾಗ್ ಮ್ಯಾನುಪ್ಯಾಕ್ಚರ್ಸ್ ರವರ ಫೈನ್ಯಾನ್ಸಿಯಲ್ ಬಿಡ್‌ನ್ನು ಟೆಂಡರ್ ನಿಯಮ ನಿಬಂಧನೆ ಕ್ರ.ಸ: 6ರಲ್ಲಿ ತಿಳಿಸಿರುವಂತೆ ಅನರ್ಹಗೊಳಿಸಿ ತಿರಸ್ಕರಿಸಲಾಗಿರುತ್ತದೆ.

ಟೆಕ್ನಿಕಲ್ ಬಿಡ್‌ನಲ್ಲಿ ಪೂರ್ಣ ದಾಖಲೆ ಪ್ರತಿಗಳನ್ನು ಒದಗಿಸಿ ಅರ್ಹತೆ ಹೊಂದಿರುವ 3 (ಮೂರು) ಜನ ಟೆಂಡರ್‌ದಾರರುಗಳ Financial bidನ್ನು ದಿನಾಂಕ:23.05.2012ರದು ತೆರೆಯಲಾಯಿತು ಸದರಿ ಯವರು ಸಲ್ಲಿಸಿರುವ ಮಾದರಿ ಸ್ಕೂಲ್ ಬ್ಯಾಗ್‌ಗಳನ್ನು ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ ಇವರುಗಳ ಸಮ್ಮುಖದಲ್ಲಿ ಟೆಂಡರ್‌ನಲ್ಲಿ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ: ಎಸ್.ಜಿ.ಎಸ್, ಇಂಡಿಯಾ ಲಿ., ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಪಿಕೇಷನ್ ಕಂ., ಬಿ.ಟಿ.ಎಂ. ಲೇಔಟ್, ಬೆಂಗಳೂರು ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು, ಉತ್ತಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

ಫೈನ್ಯಾನ್ಸಿಯಲ್ ಬಿಡ್‌ನಲ್ಲಿ 3 ಜನ ಟೆಂಡರ್‌ದಾರರುಗಳು ಸಲ್ಲಿಸಿರುವ ತಲಾ ಒಂದು ಸ್ಕೂಲ್ ಬ್ಯಾಗ್‌ನ ದರಗಳು ಈ ಕೆಳಕಂಡಂತೆ ಇರುತ್ತದೆ.

| Sl. No. | Particulars | | Unit | M/s. Maruthi Enterprises Rs. Ps. | M/s. Balaji Industries Rs. Ps. | M/s. Shubhashree Enterprises Rs. Ps. |
|---|---|---|---|---|---|---|
| 1. | Big Size | 6/3 PNP premimum imported good quality Matty material Inner partition in 420 Dinner Nylon Height 46 cms. Width 34 cms. & Depth 20 cms. Shape Half oval shape. | Each | 497.00 | 502.00 | 510.00 |
| 2. | Medium Size | 6/3 PNP premimum imported good quality Matty material Inner partition in 420 Dinner Nylon Height 41 cms. Width 30 cms. & Depth 17 cms. Shape Half oval shape. | Each | 477.00 | 482.00 | 490.00 |

ಸದರಿ ಟೆಂಡರ್‌ನ ಫೈನ್ಯಾನ್ಸಿಯಲ್ ಬಿಡ್‌ನಲ್ಲಿ 3 ಜನ ಟೆಂಡರ್‌ದಾರರುಗಳು ಸಲ್ಲಿಸಿರುವ ಮೇಲ್ಕಂಡ ದರಗಳ ತುಲನಾತ್ಮಕ ಪಟ್ಟಿಯನ್ನು ತಯಾರಿಸಿ ಪರಿಶೀಲಿಸಿದಾಗ ಟೆಂಡರ್‌ದಾರರುಗಳಾದ ಮೆ: ಬಾಲಾಜಿ ಇಂಡಸ್ಟ್ರೀಸ್ ಹಾಗೂ ಮೆ: ಶುಭಶ್ರೀ ಎಂಟರ್ ಪ್ರೈಸಸ್ ರವರಿಗಿಂತ ಮೆ: ಮಾರುತಿ ಎಂಟರ್ ಪ್ರೈಸಸ್ ರವರು ಕಡಿಮೆ ದರಗಳನ್ನು ನೀಡಿರುವುದು ಕಂಡು ಬಂದಿರುವ ಕಾರಣ, ಇವರನ್ನು ಎಲ್-1 ಅರ್ಹ ಟೆಂಡರ್‌ದಾರರೆಂದು ಪರಿಗಣಿಸಬಹುದಾಗಿದೆ. (ಕ್ರಮವಾಗಿ ಮೆ: ಬಾಲಾಜಿ ಇಂಡಸ್ಟ್ರೀಸ್ ರವರು ಎಲ್-2 ಹಾಗೂ ಮೆ: ಶುಭಶ್ರೀ ಎಂಟರ್ ಪ್ರೈಸಸ್ ರವರು ಎಲ್-3 ಟೆಂಡರ್‌ದಾರರಾಗಿರುತ್ತಾರೆ)

ಎಲ್-1 ಟೆಂಡರ್‌ದಾರರಾದಂತಹ ಮೆ: ಮಾರುತಿ ಎಂಟರ್ ಪ್ರೈಸಸ್ ರವರು ನೀಡಿರುವ ಮೇಲ್ಕಂಡ ಕನಿಷ್ಠ ದರಗಳಲ್ಲಿ 12 ಪ್ರಾಥಮಿಕ ಶಾಲೆಗಳು, 34 ಪ್ರೌಢ ಶಾಲೆಗಳು ಹಾಗೂ 13 ಕಿರಿಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯಾಬಲಕ್ಕನುಗುಣವಾಗಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಸ್ಕೂಲ್ ಬ್ಯಾಗ್‌ಗಳನ್ನು ಈ ಕೆಳಕಂಡಂತೆ ಖರೀದಿಸಬಹುದಾಗಿರುತ್ತದೆ.

| Sl. No. | Particulars | | Unit Nos. | Rate Rs. Ps. | Rate Rs. Ps. |
|---|---|---|---|---|---|
| 1. | Big Size (High School Students) | 6/3 PNP premimum imported good quality Matty material Inner partition in 420 Dinner Nylon Height 46 cms. Width 34 cms. & Depth 20 cms. Shape Half oval shape. | 9,025 | 497.00 | 44,85,425.00 |
| 2. | Big Size (Junior College Students) | 6/3 PNP premimum imported good quality Matty material Inner partition in 420 Dinner Nylon Height 46 cms. Width 34 cms. & Depth 20 cms. Shape Half oval shape. | 4,990 | 497.00 | 24,80,030.00 |
| 3 | Medium Size (Primary School Students) | 6/3 PNP premimum imported good quality Matty material Inner partition in 420 Dinner Nylon Height 41 cms. Width 30 cms. & Depth 17 cms. Shape Half oval shape. | 2,037 | 477.00 | 9,71,649.00 |
| | | | | TOTAL Rs. | 79,37,104.00 |

(ಎಪ್ಪತ್ತೊಂಭತ್ತು ಲಕ್ಷದ ಮೂವತ್ತೇಳು ಸಾವಿರದ ಒಂದು ನೂರ ನಾಲ್ಕು ಮಾತ್ರ)

ಮೇಲ್ಕಂಡ ಖರೀದಿ ವೆಚ್ಚ ಒಟ್ಟು ಮೊತ್ತ ರೂ.79,37,104.00ಗಳನ್ನು 2012-13ನೇ ಸಾಲಿನ ಆಯ-ವ್ಯಯ 25 ಶಿಕ್ಷಣ, ಇತರೇ ವೆಚ್ಚಗಳು, ಸ್ಕೂಲ್ ಬ್ಯಾಗ್‌ಗಳ ಖರೀದಿಗಾಗಿ ನಿಗದಿಪಡಿಸಿರುವ ಮೊತ್ತ ರೂ.80.00ಲಕ್ಷಗಳಲ್ಲಿ ಭರಿಸಿ ಅವಶ್ಯಕತೆ ಇರುವ ಪ್ರಮಾಣದಷ್ಟು ಸ್ಕೂಲ್ ಬ್ಯಾಗ್‌ಗಳನ್ನು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಟೆಂಡರ್‌ನ ಕಡಿಮೆ ದರ ನೀಡಿರುವ ಮೆ: ಮಾರುತಿ ಎಂಟರ್ ಪ್ರೈಸಸ್ ರವರಿಂದ ಖರೀದಿಸಬಹುದಾಗಿರುತ್ತದೆ. ಸದರಿ ಖರೀದಿ

ವೆಚ್ಚದ ಒಟ್ಟು ಮೊತ್ತ ರೂ.79,37,104.00ಗಳನ್ನು ಮಂಜೂರು ಮಾಡಲು ಹಾಗೂ ಮೆ: ಮಾರುತಿ ಎಂಟರ್ ಪ್ರೈಸಸ್ ರವರಿಗೆ ಸ್ಕೂಲ್ ಬ್ಯಾಗ್‌ಗಳನ್ನು ಅತೀ ಜರೂರಾಗಿ ಸರಬರಾಜು ಮಾಡುವಂತೆ, ಸರಬರಾಜು ಆದೇಶ ನೀಡಲು ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಕಡತವನ್ನು ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ತಾ:16.06.2012ರ ಅಪರ ಆಯುಕ್ತರು(ಯೋ) ಇವರ ಟಿಪ್ಪಣಿ ಒಪ್ಪಲಾಯಿತು.

<u>ವಿಷಯ ಸಂಖ್ಯೆ:ಶಿ.ಸ್ಥಾ.ಸ/07/12-13</u>

ವಿಷಯ: ಪಾಲಿಕೆಯ ಶಿಶುವಿಹಾರ, ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್‌ಗಳನ್ನು ಸರಬರಾಜು ಮಾಡುವ ಕುರಿತು.

***

ಆಯುಕ್ತರು ರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/10/12-13, ದಿನಾಂಕ: 14.06.2012ರಂದು ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 85 ಶಿಶುವಿಹಾರಗಳು, 12 ಪ್ರಾಥಮಿಕ ಶಾಲೆಗಳು ಮತ್ತು 34 ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್‌ಗಳ ಖರೀದಿಗಾಗಿ 2012-13ನೇ ಸಾಲಿನ ಆಯ-ವ್ಯಯದಲ್ಲಿ, ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

| ಕ್ರ.ಸ. | ಲೆಕ್ಕ ಶೀರ್ಷಿಕೆಯ ಹೆಸರು | ಅಂದಾಜು ಆಯ-ವ್ಯಯ (ರೂ. ಲಕ್ಷಗಳಲ್ಲಿ) |
|---|---|---|
| 1 | ಶಿಶುವಿಹಾರ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಶೂಗಳ ವಿತರಣೆ | 40.00 |
| 2 | ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಶೂಗಲ ವಿತರಣೆ | 80.00 |
| 3 | ಶಿಶುವಿಹಾರದಿಂದ ಪ್ರೌಢ ಶಾಲೆಗಳಿಗೆ ಕಾಲುಚೀಲಗಳ ವಿತರಣೆ | 15.00 |
| | ಒಟ್ಟು ರೂ. | 135.00 |

ಮೇಲ್ಕಂಡ ಲೆಕ್ಕ ಶೀರ್ಷಿಕೆಗಳ ಒಟ್ಟು ಮೊತ್ತದಲ್ಲಿ ಶೂ ಮತ್ತು ಕಾಲುಚೀಲಗಳನ್ನು ಖರೀದಿಸಲು ದಿನಾಂಕ:05.05.2012ರಂದು E-Procurement Tenderನ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:16.05.2012ರಂದು ಕೊನೆಯ ದಿನವಾಗಿದ್ದು, ದಿನಾಂಕ:18.05.2012ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ 1) ಮೆ: ಬಾಟಾ ಇಂಡಿಯಾ ಲಿ., 2) ಮೆ:ಎಕ್ಸೆಲ್ ಸ್ಪೋರ್ಟ್ಸ್ ಮತ್ತು 3) ಮೆ: ಎಂ.ಬಿ.ರಬ್ಬರ್ ಪ್ರೈ. ಲಿ. ರವರುಗಳು ಭಾಗವಹಿಸಿದ್ದು, ಮೆ: ಬಾಟಾ ಇಂಡಿಯಾ ಲಿ., ಮತ್ತು ಮೆ: ಎಂ.ಬಿ.ರಬ್ಬರ್ ಪ್ರೈ.ಲಿ. ರವರುಗಳು ಇ.ಎಂ.ಡಿ ಅಪ್‌ಲೋಡ್ ಮಾಡದಿರುವ ಕಾರಣ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 2 ಜನರ ಟೆಂಡರ್ ಅನರ್ಹಗೊಂಡು ಮೆ:ಎಕ್ಸೆಲ್ ಸ್ಪೋರ್ಟ್ಸ್, # 1,2, ಮೆಜೆಸ್ಟಿಕ್ ಸರ್ಕಲ್, ಬೆಂ-9 ರವರು ಮಾತ್ರ ಅರ್ಹರಾಗಿರುತ್ತಾರೆ.

ಮೆ: ಮೆ:ಎಕ್ಸೆಲ್ ಸ್ಪೋರ್ಟ್ಸ್ Technical bidನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಸದರಿ ರವರು ಟೆಂಡರ್ ನಿಯಮ ನಿಬಂಧನೆಗಳ ಪ್ರಕಾರ ಎಲ್ಲಾ ದಾಖಲಾತಿ ಪ್ರತಿಗಳನ್ನು ದೃಢೀಕರಿಸಿ ಸಲ್ಲಿಸಿರುವುದು ಕಂಡು ಬಂದಿವುದರಿಂದ, ಇವರ ಟೆಕ್ನಿಕಲ್ ಬಿಡ್‌ನ್ನು ಅಂಗೀಕರಿಸಲಾಗಿರುತ್ತದೆ. ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹತೆ ಹೊಂದಿರುವ ಮೆ: ಎಕ್ಸೆಲ್ ಸ್ಪೋರ್ಟ್ಸ್, ರವರ Financial bidನ್ನು ದಿನಾಂಕ:23.05.2012ರಂದು ತೆರೆಯಲಾಯಿತು. ಸದರಿ ರವರು ಸಲ್ಲಿಸಿರುವ ಮಾದರಿ ಶೂ ಮತ್ತು ಕಾಲುಚೀಲನಗಳನ್ನು ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ

ಇವರುಗಳ ಸಮ್ಮುಖದಲ್ಲಿ ಟೆಂಡರ್‌ನಲ್ಲಿ ತಿಳಿಸಿರುವ ಆಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ: ಎಸ್.ಜಿ.ಎಸ್. ಇಂಡಿಯಾ ಲಿ. ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂ. ಬಿ.ಟಿ.ಎಂ. ಲೇಔಟ್, ಬೆಂ. ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು ಉತ್ತಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

2012-13ನೇ ಸಾಲಿನಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಶೂ ಮತ್ತು ಕಾಲುಚೀಲಗಳನ್ನು ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ನೀಡಿರುವ ಟೆಂಡರ್‌ನ ಕಡಿಮೆ ದರದಲ್ಲಿ ಖರೀದಿಸಲು, ಖರೀದಿ ವೆಚ್ಚದ ಒಟ್ಟು ಮೊತ್ತ, ಈ ಕೆಳಕಂಡಂತೆ ಇರುತ್ತದೆ.

| Sl. No. | Particulars | Qnty. | Rate Rs.Ps. | Total Amount Rs. Ps. |
|---|---|---|---|---|
| 1 | Nursery Boys (3yrs to 5yrs) Black leather shoes with lays | 2,800 | 389.00 | 10,89,200.00 |
| 2 | Nursery Girls (3yrs to 5yrs) Black leather shoes with belt | 2,792 | 405.00 | 11,30,760.00 |
| 3 | Primary Boys (1st to 4th Std) Black leather shoes with lays | 567 | 398.00 | 2,25,666.00 |
| 4 | Primary Girls (1st to 4th Std) Black leather shoes with belt | 555 | 415.00 | 2,30,325.00 |
| 5 | Primary Boys (5th to 7th Std) Black leather shoes with lays | 495 | 410.00 | 2,02,950.00 |
| 6 | Primary Girls (5th to 7h Std) Black leather shoes with belt | 420 | 425.00 | 1,78,500.00 |
| 7 | High School Boys (8th to 10th Std) Black leather shoes with lays | 3,151 | 559.00 | 17,61,409.00 |
| 8 | High School Girls (8th to 10th Std) Black leather shoes with belt | 5,874 | 598.00 | 35,12,652.00 |
| 9 | High School Boys (8th to 10th Std) White canvas shoes with lays | 3,151 | 229.00 | 7,21,579.00 |
| 10 | High School Girls (8th to 10th Std) White canvas shoes with lays | 5,874 | 229.00 | 13,45,146.00 |
| 11 | Nursery Boys & Girls black socks | 5,592 | 28.50 | 1,59,372.00 |
| 12 | Primary Boys & Girls black socks | 2,037 | 30.50 | 62,128.50 |
| 13 | High Schools Boys & Girls black socks | 9,025 | 38.50 | 3,47,462.50 |
| 14 | High Schools Boys & Girls white socks | 9,025 | 38.50 | 3,47,462.50 |
| | | | **Total Rs.** | **1,13,14,612.50** |

*(Rupees One Crore Thirteen Lakshs Forteen Thousand Six Hundred Twelve and Fifty Ps. Only).*

ಮೇಲ್ಕಂಡ ಪ್ರಮಾಣದಷ್ಟು ಶೂ ಮತ್ತು ಸಾಕ್ಸ್‌ಗಳನ್ನು ಟೆಂಡರ್‌ನಲ್ಲಿ ಸಲ್ಲಿಸಿರುವ ಕನಿಷ್ಠ ದರಗಳಲ್ಲಿ ಖರೀದಿಸಲು ಒಟ್ಟು ಮೊತ್ತ ರೂ.1,13,14,612.50ಗಳು ವೆಚ್ಚವಾಗುತ್ತದೆ. ಈ ಮೊತ್ತವನ್ನು 2012-13ನೇ ಸಾಲಿನ ಆಯ-ವ್ಯಯ ಲೆಕ್ಕ ಶೀರ್ಷಿಕೆಗಳಲ್ಲಿ ನಿಗದಿಪಡಿಸಿರುವ ಒಟ್ಟು ಮೊತ್ತ ರೂ.135.00ಲಕ್ಷಗಳಲ್ಲಿ ಮಂಜೂರು ಮಾಡಲು ಮತ್ತು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರ ದರಗಳನ್ನು ಅಂಗೀಕರಿಸಿ ಸದರಿ ಕಂಪನಿಯವರಿಗೆ ಸರಬರಾಜು ಆದೇಶ ನೀಡುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಕಡತವನ್ನು ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ತಾ: 14.06.2012ರ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.

(ಸಹಿ)

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ/ಆರೋಗ್ಯ ಮತ್ತು ಶಿಕ್ಷಣ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
8) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
9) ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 11.07.2012 ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳ್ಳಿಗೆ 11.00 ಘಂಟೆಗೆ ನಡೆದ ವಿಷಯ ಸಭೆಯ ನಡವಳಿಗಳು.

| ಕ್ರ. ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ಮಾರಿಯೋ ಪೈರಿಸ್ | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 2 | ಶ್ರೀ.ಅಶ್ವಥ್‌ನಾರಾಯಣ ಗೌಡ | ಸದಸ್ಯರು | 2 | ಶ್ರೀ.ಗೋಪಾಲ್ | ಶಿಕ್ಷಣಾಧಿಕಾರಿಗಳು |
| 3 | ಶ್ರೀ.ಡಿ ವೆಂಕಟೇಶ್ | ಸದಸ್ಯರು | 3 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| 4 | ಶ್ರೀಮತಿ.ಎನ್.ಜಿ.ಜಯನರತ್ನ | ಸದಸ್ಯರು | 4 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |
| 5 | ಶ್ರೀಮತಿ.ವಸಂತಕುಮಾರಿ | ಸದಸ್ಯರು | 5 | ಶ್ರೀ.ಬಸವರಾಜ | ಸ.ಕಾ.ಅಭಿಯಂತರರು(ಪ)(ಯೋ) |
| 6 | ಶ್ರೀಮತಿ.ಸೈಯದ್ ಹಸೀನಾತಾಜ್ | ಸದಸ್ಯರು | 6 | ಶ್ರೀ.ಶಾಂತಕುಮಾರ್ | ಸ.ಕಾ.ಅಭಿಯಂತರರು(ಪ)(ಯೋ) |
| 7 | ಶ್ರೀ.ಎಂ.ಉದಯಶಂಕರ್ | ಸದಸ್ಯರು | 7 | ಶ್ರೀ.ಚಂದ್ರಶೇಖರ್ | ಸ.ಕಾ.ಅಭಿಯಂತರರು(ಪ)(ಯೋ) |

ಸಭೆಯು ಬೆಳ್ಳಿಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

## ವಿಷಯ ಸಂಖ್ಯೆ:ಶಿ.ಸ್ಥಾ.ಸ/08/12-13

ವಿಷಯ: ವಾರ್ಡ್-126ರ ಮಾರುತಿ ಮಂದಿರದಲ್ಲಿ ಹೊಸದಾಗಿ ಶಿಶುವಿಹಾರ ಪ್ರಾರಂಭಿಸುವ ಕುರಿತು.

***

ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/219/11-12, ದಿನಾಂಕ:20.06.2012ರಂದು ವಿವರಿಸಿರುವಂತೆ, ಶ್ರೀಯುತ.ವಿ.ವಾಗೀಲ್, ಮಾನ್ಯ ನಗರ ಪಾಲಿಕೆ ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-126, ಮಾರುತಿ ಮಂದಿರ ರವರು ವಿಳಾಸ ಮಾಡಿರುವ ಪತ್ರದಲ್ಲಿ ವಾರ್ಡ್-126ರ ಮಾರುತಿ ಮಂದಿರ ವ್ಯಾಪ್ತಿಯ ನಂಜರಸಪ್ಪ ಬಡಾವಣೆಯ ತೀರಾ ಹಿಂದುಳಿದ ಕೂಲಿ ಕಾರ್ಮಿಕರ ಹಾಗೂ ಬಡವರಿಂದ ಕೂಡಿದ ಪ್ರದೇಶವಾಗಿದ್ದು, ಇಲ್ಲಿನ ಜನ ಪ್ರತಿನಿತ್ಯ ಕೆಲಸಕ್ಕೆ ತೆರಳುವಾಗ ಮಕ್ಕಳನ್ನು ಮನೆಯಲ್ಲಿಯೆ ಬಿಟ್ಟು ಹೋಗುತ್ತಾರೆ. ಮಕ್ಕಳು ದಿನವೂ ರಸ್ತೆಗಳಲ್ಲಿ ಕುಳಿತು ಆಟವಾಡುವುದು, ಓಡಾಡುವುದು ಸಾಮಾನ್ಯವಾಗಿದ್ದು, ಇದರಿಂದ ವಾಹನ ಸವಾರರಿಗೆ ಹಾಗೂ ಮಕ್ಕಳಿಗೆ ತೊಂದರೆಯಾಗುತ್ತಿದ್ದು, ಪೋಷಕರು ಬಡವರಾದ ಕಾರಣ, ನೋಡಿಕೊಳ್ಳಲು ಮನೆಯಲ್ಲಿ ಯಾರು ಇಲ್ಲದ್ದರಿಂದ ಮಕ್ಕಳಿಗೆ ರಕ್ಷಣೆ ಇಲ್ಲದೇ ಹೋಗಿದೆ. ಈ ನಿಟ್ಟಿನಲ್ಲಿ ಮಕ್ಕಳ ಹಿತದೃಷ್ಟಿಯಿಂದ, ಮಕ್ಕಳನ್ನು ಒಂದೆಡೆ ಸೇರಿಸಲು ಅವಕಾಶವಾಗುವಂತೆ ತಕ್ಷಣವೇ ಈ ಪ್ರದೇಶದಲ್ಲಿ ಪಾಲಿಕೆ ವತಿಯಿಂದ ಶಿಶುವಿಹಾರ ಕೇಂದ್ರವನ್ನು ತೆರೆಯಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

ಸದರಿ ಪತ್ರಕ್ಕನುಗುಣವಾಗಿ ವಿಷಯ ಪರಿವೀಕ್ಷಕರಾದ ಶ್ರೀ.ಎನ್.ಏಕಾಂತಪ್ಪ ರವರು ಸ್ಥಳ ಪರಿಶೀಲನೆ ನಡೆಸಿ, ವಾರ್ಡ್-126ರ ವ್ಯಾಪ್ತಿಯ ನಂಜರಸಪ್ಪ ಬಡಾವಣೆಯಲ್ಲಿ ಮಕ್ಕಳ ಹಿತದೃಷ್ಟಿಯಿಂದ ಶಿಶುವಿಹಾರ ಪ್ರಾರಂಭಿಸುವುದು ಸೂಕ್ತವೆಂಬ ಅಭಿಪ್ರಾಯವನ್ನು ನೀಡಿರುವ ಮೇರೆಗೆ, ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಪ್ರಕ್ರಿಯೇ ಪ್ರಾರಂಭ ಮಾಡಬೇಕಿರುವ ಹಿನ್ನೆಲೆಯಲ್ಲಿ ಪಾಲಿಕೆಯ ವತಿಯಿಂದ ಹೊಸದಾಗಿ ಶಿಶುವಿಹಾರ ಪ್ರಾರಂಭಿಸಲು ಅನುಮತಿ ನೀಡುವ ಸಂಬಂಧ ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

ನಿರ್ಣಯ: ದಿನಾಂಕ: 20.06.2012ರ ಆಯುಕ್ತರ ಟಿಪ್ಪಣಿಯನ್ನು ಭಾಗಶ: ಮಾರ್ಪಾಡಿಸುತ್ತಾ, ಸ್ಥಳೀಯ ಮಾನ್ಯ ಪಾಲಿಕೆ ಸದಸ್ಯರ ಕೋರಿಕೆ ಮೇರೆಗೆ, ಒಂದರ ಬದಲಾಗಿ ಎರಡು (2) ಶಿಶುವಿಹಾರಗಳನ್ನು ಹೊಸದಾಗಿ ಪ್ರಾರಂಭಿಸಲು ತೀರ್ಮಾನಿಸಲಾಯಿತು.

Office of the I T Advisor
No. 310
Date 19/7/12
Bangalore Mahanagara Palike

20/7/12

## ವಿಷಯ: ಸಂಖ್ಯೆ:ಶಿ.ಸ್ಥಾ.ಸ/09/12-13

ವಿಷಯ: ವಾರ್ಡ್-14ರ ಪ್ರದೇಶದಲ್ಲಿ ಹೊಸದಾಗಿ ಶಿಶುವಿಹಾರ ಪ್ರಾರಂಭಿಸುವ ಕುರಿತು.

***

ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/220/11-12, ದಿನಾಂಕ: 20.06.2012ರಂದು ವಿವರಿಸಿರುವಂತೆ, ಶ್ರೀಯುತ.ಬಿ.ಆರ್.ಚಂದ್ರಶೇಖರ್, ಮಾನ್ಯ ನಗರ ಪಾಲಿಕೆ ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-14ರವರು ವಿಕಾಸ ಮಾಡಿರುವ ಪತ್ರದಲ್ಲಿ, ವಾರ್ಡ್-14ರ ವ್ಯಾಪ್ತಿಯ ಪ್ರದೇಶದಲ್ಲಿ ಬಡ ಕೂಲಿ ಕಾರ್ಮಿಕರ ಹಾಗೂ ಅಲ್ಪಸಂಖ್ಯಾತ ವರ್ಗದ ಜನರು ವಾಸಿಸುತ್ತಿದ್ದು, ಜೀವನ ನಿರ್ವಹಣೆಗೆ ದಿನನಿತ್ಯ ಕೂಲಿ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿರುತ್ತಾರೆ. ಆದರೆ, ಅವರುಗಳ ಚಿಕ್ಕ-ಚಿಕ್ಕ ಮಕ್ಕಳುಗಳನ್ನು ಖುದ್ದು ನಿಗಾವಹಿಸಲು ಸಾಧ್ಯವಾಗದಿರುವುದರಿಂದ, ಶಿಶುವಿಹಾರ ಕೇಂದ್ರವನ್ನು ಪ್ರಾರಂಭಿಸಿದಲ್ಲಿ ಬಡ ಕೂಲಿ ಕಾರ್ಮಿಕರಿಗೆ ಅನುಕೂಲ ಕಲ್ಪಿಸಿಕೊಟ್ಟಂತಾಗುತ್ತದೆ. ಆದುದರಿಂದ, ಈ ಬಗ್ಗೆ ತಾವುಗಳು ಪರಿಶೀಲಿಸಿ, ವಾರ್ಡ್-14ರ ವ್ಯಾಪ್ತಿಯ ಪ್ರದೇಶದ ಬಾಗಲಗುಂಟೆ, 12ನೇ ಅಡ್ಡ ರಸ್ತೆ ಖಾಸಗಿ ಕಟ್ಟಡದಲ್ಲಿ ಕೂಲಿ ಕಾರ್ಮಿಕರ ಮಕ್ಕಳ ಹಿತದೃಷ್ಟಿಯಿಂದ ಶಿಶುವಿಹಾರ ಕೇಂದ್ರ ತೆರೆಯಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

ಸದರಿ ಪತ್ರಕ್ಕನುಗುಣವಾಗಿ ವಿಷಯ ಪರಿವೀಕ್ಷಕರಾದ ಶ್ರೀ.ಎನ್.ಏಕಾಂತಪ್ಪ ರವರು ಸ್ಥಳ ಪರಿಶೀಲನೆ ನಡೆಸಿ, ವಾರ್ಡ್-14ರ ವ್ಯಾಪ್ತಿಯ ಬಾಗಲಗುಂಟೆ 12ನೇ ಕ್ರಾಸ್‌ನಲ್ಲಿರುವ ಖಾಸಗಿ ಕಟ್ಟಡದಲ್ಲಿ ಮಕ್ಕಳ ಹಿತದೃಷ್ಟಿಯಿಂದ ಶಿಶುವಿಹಾರ ಪ್ರಾರಂಭಿಸುವುದು ಸೂಕ್ತವೆಂಬ ಅಭಿಪ್ರಾಯವನ್ನು ನೀಡಿರುವ ಮೇರೆಗೆ, ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಪ್ರಕ್ರಿಯೇ ಪ್ರಾರಂಭ ಮಾಡಬೇಕಿರುವ ಹಿನ್ನೆಲೆಯಲ್ಲಿ ಪಾಲಿಕೆಯ ವತಿಯಿಂದ ಹೊಸದಾಗಿ ಶಿಶುವಿಹಾರ ಪ್ರಾರಂಭಿಸಲು ಅನುಮತಿ ನೀಡುವ ಸಂಬಂಧ ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

ನಿರ್ಣಯ: ದಿನಾಂಕ:20.06.2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

## ವಿಷಯ ಸಂಖ್ಯೆ:ಶಿ.ಸ್ಥಾ.ಸ/10/12-13

ವಿಷಯ: ಪಾಲಿಕೆಯ 13 ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಅಧ್ಯಯನ ಪಠ್ಯಪುಸ್ತಕಗಳನ್ನು ಸರಬರಾಜು ಮಾಡುವ ಬಗ್ಗೆ.

***

ಆಯುಕ್ತರವರ ಟಿಪ್ಪಣಿ ಸಂಖ್ಯೆ:ವಿದ್ಯಾ(1)ಪಿಆರ್/61/12-13, ದಿನಾಂಕ:20.06.2012ರಂದು ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 13 ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಅಧ್ಯಯನ ಪಠ್ಯಪುಸ್ತಕಗಳನ್ನು ಖರೀದಿಸಿ, ವಿತರಿಸಲು 12-13ನೇ ಸಾಲಿನ ಆಯ-ವ್ಯಯ 25, ಶಿಕ್ಷಣ, ಕಿರಿಯ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ/ಅಧ್ಯಯನ ಪುಸ್ತಕಗಳ ಖರೀದಿಗಾಗಿ ರೂ.40.00ಲಕ್ಷಗಳ ಅನುದಾನವನ್ನು ನಿಗದಿಗೊಳಿಸಿದ್ದು, ಸದರಿ ಮೊತ್ತದಲ್ಲಿ ಅಧ್ಯಯನ ಪಠ್ಯಪುಸ್ತಕಗಳನ್ನು ಖರೀದಿಸಲು ದಿನಾಂಕ:05.05.2012ರಂದು ಇ-Procurement Tender ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಇದೇ ದಿನದಂದು ಟೆಂಡರ್ ಬುಲೆಟಿನ್‌ನಲ್ಲಿ ಮತ್ತು ಕನ್ನಡ/ಇಂಗ್ಲೀಷ್ ದಿನ ಪತ್ರಿಕೆಗಳಲ್ಲಿ ಟೆಂಡರ್ ಪ್ರಕಟಣೆ ಪ್ರಕಟಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ದಿನಾಂಕ:11.05.2012ರಂದು ಕೊನೆ ದಿನವಾಗಿದ್ದು, ದಿನಾಂಕ:16.05.2012ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಮೆ: ಪ್ರಕಾಶ್ ಸಾಹಿತ್ಯ #1, ತಲಕಾಡು ಸುಬ್ಬರಾವ್ ಲೇನ್, ಕಾಟನ್‌ಪೇಟೆ, ಬೆಂ-53 ರವರು ಏಕೈಕ ಟೆಂಡರ್‌ದಾರರಾಗಿ ಭಾಗವಹಿಸಿರುತ್ತಾರೆ. ಸದರಿಯವರು Technical Bidನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಟೆಂಡ್‌ನ ನಿಯಮ ನಿಬಂಧನೆಗಳ ಕ್ರ.ಸಂ. 5 ರಲ್ಲಿ ತಿಳಿಸಿರುವಂತೆ ಪೂರ್ಣ ದಾಖಲೆ ಪತ್ರಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಇವರುಗಳ ಟೆಕ್ನಿಕಲ್ ಬಿಡ್‌ನ್ನು ಅಂಗೀಕರಿಸಬಹುದಾಗಿರುತ್ತದೆ.

ಟೆಕ್ನಿಕಲ್ ಬಿಡ್‌ನಲ್ಲಿ ಪೂರ್ಣ ದಾಖಲೆ ಪ್ರತಿಗಳನ್ನು ನೀಡಿ ಅರ್ಹತೆ ಹೊಂದಿರುವ ಮೆ: ಪ್ರಕಾಶ್ ಸಾಹಿತ್ಯ ರವರ Financial Bid ನ್ನು ದಿನಾಂಕ:21.05.2012ರಂದು ತೆರೆಯಲಾಯಿತು. ಸದರಿಯವರು ಪಠ್ಯಪುಸ್ತಕಗಳ ಮುಖಬೆಲೆಯ ಮೇಲೆ ಶೇ.16ರಷ್ಟು ಸೋಡಿಯನ್ನು ನೀಡುವುದಾಗಿ ಒಪ್ಪಿರುವುದರಿಂದ, ಸದರಿ ಯವರನ್ನು ಅರ್ಹ ಟೆಂಡರ್‌ದಾರರೆಂದು ಪರಿಗಣಿಸಬಹುದಾಗಿದೆ.

ಮೆ: ಪ್ರಕಾಶ್ ಸಾಹಿತ್ಯ ರವರು ನೀಡಿರುವ ಮೇಲ್ಕಂಡ ಸೋಡಿಯಲ್ಲಿ 13 ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯಾಬಲಕ್ಕನುಗುಣವಾಗಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ವಿವಿಧ ಶೀರ್ಷಿಕೆವಾರು ಅಧ್ಯಯನ ಪಠ್ಯಪುಸ್ತಕಗಳನ್ನು ಖರೀದಿಸಬಹುದಾಗಿರುತ್ತದೆ.

ಮೆ: ಪ್ರಕಾಶ್ ಸಾಹಿತ್ಯ ರವರು ನೀಡಿರುವ ಅಧ್ಯಯನ ಪಠ್ಯಪುಸ್ತಕಗಳ ಎಂ,ಆರ್.ಪಿ. ದರಗಳಿಗೆ ಶೇ.16ರಂತೆ ರಿಯಾಯ್ತಿ ಪಡೆದು ಅಗತ್ಯ ಇರುವ ಅಂದಾಜು 49,400 ಸಂಖ್ಯೆಯಷ್ಟು ವಿವಿಧ ಶೀರ್ಷಿಕೆಗಳ ಅಧ್ಯಯನ ಪಠ್ಯಪುಸ್ತಕಗಳನ್ನು ಖರೀದಿಸಲು, ಖರೀದಿ ವೆಚ್ಚ ರೂ.30.00ಲಕ್ಷಗಳು ಆಗಬಹುದೆಂಬ ಅಂದಾಜು ಮಾಡಲಾಗಿದೆ. ಸದರಿ ಖರೀದಿ ವೆಚ್ಚವನ್ನು 12-13ನೇ ಸಾಲಿನ ಆಯ-ವ್ಯಯ ಶೀರ್ಷಿಕೆ ಕಿರಿಯ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ/ಅಧ್ಯಯನ ಪುಸ್ತಕಗಳ ಖರೀದಿಗಾಗಿ ನಿಗಿಪಡಿಸಿರುವ ಮೊತ್ತ ರೂ.40.00ಲಕ್ಷಗಳಲ್ಲಿ ಮಂಜೂರು ಮಾಡಲು ಮತ್ತು ಪಾರದರ್ಶಕ ನಿಯಮಾನುಸಾರ ಹಚ್ಚಿನ ಸೋಡಿ ನೀಡಿರುವ ಮೆ: ಪ್ರಕಾಶ್ ಸಾಹಿತ್ಯ ರವರ ದರಗಳನ್ನು (ಶೇ. 16ರಷ್ಟು ಸೋಡಿ ಕಳೆದು) ಅಂಗೀಕರಿಸಿ, ಜರೂರಾಗಿ ಅಧ್ಯಯನ ಪಠ್ಯಪುಸ್ತಕಗಳನ್ನು ಸರಬರಾಜು ಮಾಡುವಂತೆ ಸರಬರಾಜು ಆದೇಶ ನೀಡಲು ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

ನಿರ್ಣಯ: ದಿನಾಂಕ: 20.06.2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

<u>ವಿಷಯ ಸಂಖ್ಯೆ:ಶಿ.ಸ್ಥಾ.ಸ/11/12-13</u>

ವಿಷಯ: ESIC Medical Collegeಗೆ ಡಾ: ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣವನ್ನು ಹಂಚಿಕೆ/ಉಪಯೋಗಿಸಲು ಅನುಮತಿ ನೀಡುವ ಬಗ್ಗೆ.

***

ಆಯುಕ್ತರವರ ಟಿಪ್ಪಣಿ ಸಂಖ್ಯೆ ನಮೂದಿಸಿರುವುದಿಲ್ಲ, ದಿನಾಂಕ:23.06.2012ರಂದು ವಿವರಿಸಿರುವಂತೆ, ಡೈರೆಕ್ಟರ್ ಜನರಲ್ ESIC Medical College, Rajajinagar, Bangalore, ರವರು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸದರಿ ಸಂಸ್ಥೆ ವತಿಯಿಂದ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡುವ ಉದ್ದೇಶದ ಹಿನ್ನೆಲೆಯಲ್ಲಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ-106, ಡಾ: ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣವನ್ನು ಹಂಚಿಕೆ/ಉಪಯೋಗಿಸಲು ಅನುಮತಿ ನೀಡಲು ಕೋರಿದ್ದು, ಸದರಿ ವಿಷಯವು ಉನ್ನತ ಮಟ್ಟದ ಚರ್ಚೆಯ ಅವಶ್ಯಕತೆ ಇರುವುದರಿಂದ, ಸದರಿ ವಿಷಯದ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿಯ ತೀರ್ಮಾನ ಕೈಗೊಳ್ಳಲು ಕೋರಿ ಟಿಪ್ಪಣಿಯನ್ನು ಮಂಡಿಸಿದೆ.

ನಿರ್ಣಯ: ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರು ವಿಷಯದ ಸಂಖ್ಯೆ:304/07-08, ದಿನಾಂಕ: 27.12.2007ರ ನಡವಳಿ ಹಾಗೂ ಮುಂದಿನ ದಿನಗಳಲ್ಲಿ ಸದರಿ ಕ್ರೀಡಾಂಗಣವು ಪಾಲಿಕೆಗೆ ಅವಶ್ಯಕತೆವಿರುವುದು ಕಂಡುಬರಬಹುದೆಂಬ ಅಂಶದ ಹಿನ್ನೆಲೆಯಲ್ಲಿ, ದಿನಾಂಕ: 23.06.2012ರ ಆಯುಕ್ತರ ಟಿಪ್ಪಣಿಯನ್ನು ಕೈಬಿಡಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ:ಶಿ.ಸ್ಥಾ.ಸ/12/12-13</u>

ವಿಷಯ: ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡುವ ಕುರಿತು.

***

ಅಪರ ಆಯುಕ್ತರು(ಯೋಜನೆ)ರವರ ಟಿಪ್ಪಣಿ ಸಂಖ್ಯೆ:ವಿದ್ಯಾ(2)ಪಿಆರ್/15/12-13, ದಿನಾಂಕ:20.06.2012ರಂದು ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯಡಿ 87 ಶಿಶುವಿಹಾರ, 12 ಪ್ರಾಥಮಿಕ ಶಾಲೆ, 34 ಪ್ರೌಢ ಶಾಲೆಗಳು, 13 ಸಂಯುಕ್ತ ಪದವಿ ಪೂರ್ವ ಕಾಲೇಜುಗಳು, 1 ಪ್ರಥಮ ದರ್ಜೆ ಕಾಲೇಜು ಹಾಗೂ ಬಿ.ಬಿ.ಎಂ.ಪಿ ಮತ್ತು ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಪಬ್ಲಿಕ್ ಸ್ಕೂಲ್ ಅಸ್ತಿತ್ವದಲ್ಲಿದ್ದು, ಸದರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಪಾಲಿಕೆಯ ವತಿಯಿಂದ ಉಚಿತವಾಗಿ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡಬೇಕಾಗಿರುತ್ತದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಡಿ/108/ಎಂಎಂಎಸ್/2010, ದಿನಾಂಕ:31.05.2010ರ ಆದೇಶದಂತೆ 2010-11ನೇ ಶೈಕ್ಷಣಿಕ ಸಾಲಿನಿಂದ ಅಕ್ಷರ ದಾಸೋಹ ಕಾರ್ಯಕ್ರಮದ ಅಕ್ಷಯ ಪಾತ್ರ ಪ್ರತಿಷ್ಠಾನಕ್ಕೆ ವಹಿಸಿರುವ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ನವೀಕರಿಸುವ ಸಂದರ್ಭದಲ್ಲಿ ಆ ಸಂಸ್ಥೆಯವರು ದೇಣಿಗೆಯನ್ನು ಪಡೆಯಬಾರದು ಎಂಬ ಕಟ್ಟುನಿಟ್ಟಿನ ಷರತ್ತಿಗನುಗುಣವಾಗಿ ಈ ಯೋಜನೆಯನ್ನು ಮುಂದುವರೆಸಬಹುದೆಂದು ಸೂಚನೆ ನೀಡಿರುವ ಮೇರೆಗೆ, ಹಾಗು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಿದ್ಯಾರ್ಥಿಗಳಿಂದಾಗಲೀ, ಅವರ ಪೋಷಕರಿಂದಾಗಲೀ ಯಾವುದೇ ಹಣವನ್ನು ಸಂಗ್ರಹಿಸುವುದನ್ನು ನಿಷೇದಿಸಿದೆ ಎಂಬ ಅಂಶದ ಆಧಾರದ ಮೇರೆಗೆ, ಕಳೆದ 2011-12ನೇ ಸಾಲಿನಲ್ಲಿ ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ಸರಬರಾಜು ಆದೇಶ ನೀಡಲಾಗಿತ್ತು.

ದಿನಾಂಕ:08.05.2012ರಂದು ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರು ಮಾನ್ಯ ಆಯುಕ್ತರವರಿಗೆ ಪತ್ರವನ್ನು ವಿಳಾಸ ಮಾಡಿ ಕಳೆದ ಸಾಲಿನ ಒಡಂಬಡಿಕೆಯು ಅಂತ್ಯಗೊಂಡಿದ್ದು, 2012-13ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅದನ್ನು ನವೀಕರಿಸಬೇಕಾದ ಅವಶ್ಯಕತೆ ಇರುತ್ತದೆ ಎಂದು ತಮ್ಮ ದಯಾಪರ ಗಮನಕ್ಕೆ ತರಬಯಸುತ್ತೇನೆ. ಅದರಂತೆ, ಶಾಲೆಯು ಪ್ರಾರಂಭವಾದ ದಿನದಿಂದಲೇ ಮಧ್ಯಾಹ್ನದ ಬಿಸಿಯೂಟವನ್ನು ಪಾಲಿಕೆಯ ಆಡಳಿತದಲ್ಲಿರುವ ಎಲ್ಲ ಶಾಲೆಗಳಿಗೂ ಒದಗಿಸುವುದಕ್ಕಾಗಿ ಒಡಂಬಡಿಕೆಯನ್ನು ಸಿದ್ಧಪಡಿಸಲು ಅಧಿಕೃತ ಆದೇಶವೊಂದನ್ನು ಕೊಟ್ಟಲ್ಲಿ ಪ್ರತಿಷ್ಠಾನಕ್ಕೆ ಸೂಕ್ತವಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಹಾಯಕವಾಗುತ್ತದೆ. ಏರುತ್ತಿರುವ ವೆಚ್ಚಗಳ ಈ ದಿನಗಳಲ್ಲಿ ಪ್ರತಿಷ್ಠಾನಕ್ಕೆ ಪ್ರತಿಯೂಟಕ್ಕೆ ರೂ.20.00ಗಳ ವೆಚ್ಚವಾಗುತ್ತಿದ್ದರೂ ಸಹ, ಪ್ರತಿಷ್ಠಾನದ ಧ್ಯೇಯೋದ್ದೇಶಕ್ಕೆ ಅನುಗುಣವಾದ ಗುಣಮಟ್ಟದ ವಿದ್ಯಾಭ್ಯಾಸಕ್ಕೆ ಪೂರಕವಾಗಿ ನಾವು ಕರ್ತವ್ಯ ನಿರ್ವಹಿಸುತ್ತಿರುವುದರಿಂದ, ತಾವು ಪ್ರತಿ ಊಟಕ್ಕೆ ಕನಿಷ್ಟ ರೂ.8.00ಗಳ ವೆಚ್ಚವನ್ನಾದರೂ ಭರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

ಪರಿಶೀಲಿಸಲಾಗಿ, ಸದರಿ ಸಂಸ್ಥೆಯವರು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ತಲಾ ಒಂದು ಊಟಕ್ಕೆ ರೂ.4.50ರಂತೆ ಸರಬರಾಜು ಮಾಡುತ್ತಿದ್ದು, ನಂತರ ಅಕ್ಟೋಬರ್ 2011ರಿಂದ ತಲಾ ಒಂದು ಊಟಕ್ಕೆ ರೂ.6.50ರಂತೆ ಒದಗಿಸಲು ಕೋರಿದ್ದ ಮೇರೆಗೆ, ಶಿಕ್ಷಣ ಮತ್ತು ಸ್ಥಾಯಿ ಸಮಿತಿ ರವರ ನಡವಳಿಕೆ ಸಂಖ್ಯೆ:ಶಿಸ್ಥಾಸ/16/11-12 ದಿನಾಂಕ:01.02.2012 ಮತ್ತು ಮಾನ್ಯ ಆಯುಕ್ತರವರ ಆಪ್ತ ಕಾರ್ಯಾಲಯದ ಸಂಖ್ಯೆ:ಪಿಎಸ್‌ಆರ್(ಸಿ)ಪಿಆರ್/1383/11-12, ದಿನಾಂಕ:01.02.2012 ಹಾಗೂ ಜಂಟಿ ಆಯುಕ್ತರು(ಕಲ್ಯಾಣ)ರವರ ಆದೇಶದ ದಿನಾಂಕ:10.02.2012ರ ಆದೇಶದಂತೆ ತಲಾ ಒಂದು ಊಟಕ್ಕೆ ರೂ.6.50ರಂತೆ ಸರಬರಾಜು ಮಾಡಲು ಮೆ: ಇಸ್ಕಾನ್ ಸಂಸ್ಥೆಯ ಅಕ್ಷಯ ಪಾತ್ರ ಫೌಂಡೇಷನ್‌ರವರೊಂದಿಗೆ ದಿನಾಂಕ:01.06.2011ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ.

ಅದರಂತೆ, ಮೆ: ಅಕ್ಷಯ ಪಾತ್ರ ಪ್ರತಿಷ್ಠಾನದವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಹಲವು ವರ್ಷಗಳಿಂದ ಬಿಸಿಯೂಟದ ವ್ಯವಸ್ಥೆ ಮಾಡುತ್ತಿರುತ್ತಾರೆ. ಸದರಿ ಸಂಸ್ಥೆಯವರು ಪ್ರಸಕ್ತ ಸಾಲಿನಲ್ಲಿ ತಲಾ ಒಂದು ಊಟಕ್ಕೆ ರೂ.8.00ರಂತೆ ವೆಚ್ಚವನ್ನು ಭರಿಸಲು ಕೋರಿರುವುದನ್ನು ಹಾಗೂ ಒಡಂಬಡಿಕೆಯು ಅಂತ್ಯಗೊಂಡಿರುವ ಹಿನ್ನೆಲೆಯಲ್ಲಿ, ಪ್ರಸಕ್ತ 12-13ನೇ ಶೈಕ್ಷಣಿಕ ವರ್ಷವು ದಿನಾಂಕ:01.06.2012ರಿಂದ ಪ್ರಾರಂಭವಾಗಿರುವುದರಿಂದ, ಪಾಲಿಕೆಯ ಸಭೆಯ ಅನುಮೋದನೆ ಪಡೆಯಲು ಕಾಲಾವಕಾಶ ಬೇಕಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಹಿಂದಿನ (ತಲಾ ಒಂದು ಊಟಕ್ಕೆ ರೂ.6.50ರ) ದರದಲ್ಲಿಯೇ ಒದಗಿಸುವಂತೆ ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ದಿನಾಂಕ:08.06.2012ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ,

ಮುಂದುವರೆದು ದಿನಾಂಕ:08.06.2012ರಂದು ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರು ಮತ್ತೆ ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿರವರಿಗೆ ಪತ್ರವನ್ನು ವಿಳಾಸ ಮಾಡಿ ಕಳೆದ ಸಾಲಿನ ಒಡಂಬಡಿಕೆಯು ಅಂತ್ಯಗೊಂಡಿದ್ದು, 12-13ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅದನ್ನು ನವೀಕರಿಸಬೇಕಾದ ಅವಶ್ಯಕತೆ ಇರುತ್ತದೆ ಎಂದು ತಮ್ಮ ದಯಾಪರ ಗಮನಕ್ಕೆ ತರಬಯಸುತ್ತೇನೆ. ಅದರಂತೆ ಶಾಲೆಯು ಪ್ರಾರಂಭವಾದ ದಿನದಿಂದಲೇ ಮಧ್ಯಾಹ್ನದ ಬಿಸಿಯೂಟವನ್ನು ಪಾಲಿಕೆಯ ಆಡಳಿತದಲ್ಲಿರುವ ಎಲ್ಲ ಶಾಲೆಗಳಿಗೂ ಒದಗಿಸುವುದಕ್ಕಾಗಿ ಒಡಂಬಡಿಕೆಯನ್ನು ಸಿದ್ಧಪಡಿಸಲು

ಅಧಿಕೃತ ಆದೇಶವೊಂದನ್ನು ಕೊಟ್ಟಲ್ಲಿ ಪ್ರತಿಷ್ಠಾನಕ್ಕೆ ಸೂಕ್ತವಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಹಾಯಕವಾಗುತ್ತದೆ. ಏರುತ್ತಿರುವ ವೆಚ್ಚಗಳ ಈ ದಿನಗಳಲ್ಲಿ ಪ್ರತಿಷ್ಠಾನಕ್ಕೆ ಪ್ರತಿಯೂಟಕ್ಕೆ ರೂ.20.00ಗಳ ವೆಚ್ಚವಾಗುತ್ತಿದ್ದರೂ ಸಹ, ಪ್ರತಿಷ್ಠಾನದ ಧ್ಯೇಯೋದ್ದೇಶಕ್ಕೆ ಅನುಗುಣವಾದ ಗುಣಮಟ್ಟದ ವಿದ್ಯಾಭ್ಯಾಸಕ್ಕೆ ಪೂರಕವಾಗಿ ನಾವು ಕರ್ತವ್ಯ ನಿರ್ವಹಿಸುತ್ತಿರುವುದರಿಂದ, ತಾವು ಪ್ರತಿ ಊಟಕ್ಕೆ ಕನಿಷ್ಟ ರೂ.8.00ಗಳ ವೆಚ್ಚವನ್ನಾದರೂ ಭರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಮಾಡಲು ಮೆ: ಇಸ್ಕಾನ್ ಸಂಸ್ಥೆಯ ಅಕ್ಷಯ ಪಾತ್ರ ಫೌಂಡೇಷನ್‌ಗೆ ಸರಬರಾಜು ಆದೇಶವನ್ನು ನೀಡುವಾಗ ಮೇಲ್ಕಂಡಂತೆ ಎರಡು ಷರತ್ತುಗಳನ್ನು ವಿಧಿಸಿ, ಕೌನ್ಸಿಲ್ ಸಭೆಯ ಅನುಮತಿಯನ್ನು ನಿರೀಕ್ಷಿಸಿ ಸರಬರಾಜು ಆದೇಶ ನೀಡಲಾಗಿದ್ದು, ಅದರಂತೆ, ದಿನಾಂಕ:01.06.2012ರಿಂದ ಮೆ: ಇಸ್ಕಾನ್ ಸಂಸ್ಥೆಯವರು ಪಾಲಿಕೆಯ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸುತ್ತಿದ್ದಾರೆ.

ಮುಂದುವರೆದು, ಬೆಲೆಗಳು ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಪ್ರತಿ ಊಟಕ್ಕೆ ರೂ.8.00ಗಳ ವೆಚ್ಚವನ್ನು ಭರಿಸಬೇಕೆಂದು ಕೋರಿರುವ ಮೇರೆಗೆ, ರೂ.8.00ಗಳ ದರದಂತೆ, ಪ್ರಸಕ್ತ ಸಾಲಿನಲ್ಲಿಯೂ ಸಹ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಜೊತೆ ಭಾರತೀಯ ವಿದ್ಯಾಭವನ ಮತ್ತು ಬಿ.ಬಿ.ಎಂ.ಪಿ ಸಹಯೋಗದೊಂದಿಗೆ ನಡೆಸುತ್ತಿರುವ ಪಬ್ಲಿಕ್ ಶಾಲೆಯ 200 ವಿದ್ಯಾರ್ಥಿಗಳಿಗೂ ಸಹ

ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಒದಗಿಸಲು ಮೆ: ಅಕ್ಷಯ ಪಾತ್ರ ಫೌಂಡೇಷನ್‌ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಕೋರಿ ಮಂಡಿಸಿರುವ ಟಿಪ್ಪಣಿ.

ನಿರ್ಣಯ: ದಿನಾಂಕ:20.06.2012ರ ಅಪರ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಭಾಗಶ: ಮಾರ್ಪಡಿಸುತ್ತಾ, ಪಾಲಿಕೆಯ ಆರ್ಥಿಕ ಸ್ಥಿತಿಗತಿಯ ಆಧಾರದ ಹಿನ್ನೆಲೆಯಲ್ಲಿ, ಪ್ರಸಕ್ತ ಸಾಲಿನಲ್ಲೂ ಕೂಡ ಹಿಂದಿನ ಸಾಲಿನಲ್ಲಿ ಪ್ರತಿ ಊಟಕ್ಕೆ ನೀಡುತ್ತಿರುವ ರೂ.6.50ಯನ್ನೆ ಮುಂದುವರಿಸಲು ತೀರ್ಮಾನಿಸಲಾಯಿತು.

B G [signature]

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ/ಆರೋಗ್ಯ ಮತ್ತು ಶಿಕ್ಷಣ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
8) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
9) ಕಛೇರಿ ಕಡತಕ್ಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ದಿನಾಂಕ: 19.07.2012ರಂದು ಶಿಕ್ಷಣ ಸ್ಥಾಯಿ ಸಮಿತಿಯು ನಡೆಸಿದ, ಅನಿರೀಕ್ಷಿತ ತಪಾಸಣೆಯ, ತಪಾಸಣಾ ವರದಿ

| ಕ್ರ. ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ಗೋಪಾಲ್ | ಶಿಕ್ಷಣಾಧಿಕಾರಿಗಳು |
| 2 | ಶ್ರೀ.ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 2 | ಶ್ರೀ.ಆರ್.ನಾಗೇಂದ್ರ | ಸ.ಕಾ.ಅ(ಯೋ)(ದ) |
| 3 | ಶ್ರೀಮತಿ.ಎಂ.ಜಿ.ಜಯರತ್ನ | ಸದಸ್ಯರು | 3 | ಶ್ರೀ.ಎಂ.ವಿ.ಬದ್ರಿನಾಥ್ | ಸ.ಕಾ.ಅ(ಯೋ)(ದ) |
| 4 | ಶ್ರೀಮತಿ.ವಸಂತಕುಮಾರಿ | ಸದಸ್ಯರು | 4 | ಶ್ರೀ.ಎಂ.ರಘು | ಸ.ಕಾ.ಅ(ಯೋ)(ದ) |
| 5 | ಶ್ರೀಮತಿ.ಸೈಯದ್ ಹಸೀನಾತಾಜ್ | ಸದಸ್ಯರು | 5 | ಶ್ರೀ.ಮಹಾಂತೇಶ್ | ಸ.ಕಾ.ಅ(ಯೋ)(ದ) |
| 6 | ಶ್ರೀ.ಎಂ.ಉದಯಶಂಕರ್ | ಸದಸ್ಯರು | 6 | ಶ್ರೀ.ಕೆ.ಎಸ್.ಇಂದ್ರೂಸ್ | ಸ.ಕಾ.ಅ(ಯೋ)(ಪೂ) |
| | | | 7 | ಶ್ರೀ.ಬಿಸ್ಸಪ್ಪ | ಸ.ಕಾ.ಅ(ಯೋ)(ಪೂ) |
| | | | 8 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| | | | 9 | ಶ್ರೀ.ಎನ್.ಏಕಾಂತಪ್ಪ | ವಿಷಯ ಪರಿವೀಕ್ಷಕರು |
| | | | 10 | ಶ್ರೀ. ಅಶ್ವಥ್‌ನಾರಾಯಣ ಸ್ವಾಮಿ | ವಿಷಯ ಪರಿವೀಕ್ಷಕರು |
| | | | 11 | ಶ್ರೀ.ಡಿ.ಪಿ.ಪಿ.ಸ್ವಾಮಿ | ಕ್ರೀಡಾಂಗಣ ಮೇಲ್ವಿಚಾರಕರು |

ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು, ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಅಧಿಕಾರಿ ವರ್ಗದವರು ದಿನಾಂಕ: 19.07.2012ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಡೆತನದ, ಈ ಕೆಳಕಂಡ ಶಾಲಾ/ಕಾಲೇಜುಗಳಿಗೆ ಭೇಟಿ ನೀಡಲಾಯಿತು.

1) ಬೃ.ಬೆಂ.ಮ.ಪಾ. ಪ್ರಾಥಮಿಕ ಪಾಠ ಶಾಲೆ, ಆಸ್ಟಿನ್ ಟೌನ್.
2) ಬೃ.ಬೆಂ.ಮ.ಪಾ. ಬಾಲಕಿಯರ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಸ್ಟಿನ್ ಟೌನ್.
3) ಬೃ.ಬೆಂ.ಮ.ಪಾ. ಬಾಲಕರ ಪ್ರೌಢ ಶಾಲೆ, ಆಸ್ಟಿನ್ ಟೌನ್.
4) ಬೃ.ಬೆಂ.ಮ.ಪಾ. ಹಿರಿಯ ಪ್ರಾಥಮಿಕ ಪಾಠ ಶಾಲೆ, ನೀಲಸಂದ್ರ.
5) ಬೃ.ಬೆಂ.ಮ.ಪಾ. ಶಿಶುವಿಹಾರ, ನೀಲಸಂದ್ರ,
6) ಬೃ.ಬೆಂ.ಮ.ಪಾ. ಶಿಶುವಿಹಾರ, ಆಡುಗೋಡಿ,
7) ಬೃ.ಬೆಂ.ಮ.ಪಾ. ಪ್ರೌಢ ಶಾಲೆ, ಶಾಂತಿನಗರ,

ಮೇಲೆ ತಿಳಿಸಲಾಗಿರುವ, ಎಲ್ಲಾ ಶಾಲಾ/ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯ ತೊಂದರೆಗಳು ಎದ್ದು ಕಾಣುತ್ತಿದ್ದವು. ಕಟ್ಟಡಗಳಿಗೆ ಸಂಬಂಧಿಸಿದಂತೆ, ಎಲ್ಲಾ ಕಟ್ಟಡಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದಾಗಿರುತ್ತದೆ.

1) <u>ಬೃ.ಬೆಂ.ಮ.ಪಾ. ಪ್ರಾಥಮಿಕ ಪಾಠ ಶಾಲೆ, ಆಸ್ಟಿನ್ ಟೌನ್:</u>- ಈ ಶಾಲೆಯಲ್ಲಿ ಒಟ್ಟು 295 ವಿದ್ಯಾರ್ಥಿಗಳಿದ್ದು, ಭದ್ರತಾ ಸಿಬ್ಬಂದಿಗೆ ಸಂಬಂಧಿಸಿದಂತೆ, ಒಬ್ಬರು ಮಾತ್ರ ದಿನದ 24 ಘಂಟೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಮಾಹೆ ರೂ.6,000/-ಗಳು ಮಾತ್ರ ಪಡೆಯುತ್ತಿರುವುದಾಗಿ, ಭದ್ರತಾ ಸಿಬ್ಬಂದಿಯು ಸಮಿತಿಯ ಸದಸ್ಯರಿಗೆ ಹೇಳಿಕೆ ನೀಡಿರುತ್ತಾರೆ. ಸದರಿ ಶಾಲೆಯ ಕಟ್ಟಡವು ಸುಸ್ಥಿತಿಯಲ್ಲಿದ್ದು, ಶುಚಿತ್ವ ಕಾಪಾಡುವುದರಲ್ಲಿ ಹಾಗೂ ನಿರ್ವಹಣೆಯಲ್ಲಿ ಪಾಲಿಕೆಯ ಅಧಿಕಾರಿಗಳು ವಿಫಲರಾಗಿರುತ್ತಾರೆ. ಸದರಿ ಶಾಲೆಗೆ ಹೊಂದಿಕೊಂಡಂತೆ ಇರುವ ರಕ್ಷಣಾ ಪಡೆಯವರು ಶಾಲೆಯ ಆವರಣದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಪಾಲಿಕೆಯ ವತಿಯಿಂದ ಕೈಗೊಂಡ ಸಮಯಗಳಲ್ಲಿ, ಸದರಿ ಆಸ್ತಿಯು ರಕ್ಷಣಾ ಪಡೆಗೆ ಸಂಬಂಧಿಸಿದೆ ಎಂದು ಕೆಲಸ ಕಾರ್ಯಗಳನ್ನು ಮಾಡಲು ಅಡ್ಡಿಪಡಿಸುತ್ತಿರುವುದಾಗಿ ಸ್ಥಳೀಯ ಸಾರ್ವಜನಿಕರ ಮೌಖಿಕವಾಗಿ ತಿಳಿಸಿರುತ್ತಾರೆ.

Office of the I T Advisor
No. 347
Date 26/7/12
Bangalore Mahanagara Palike

-2

ಇದಕ್ಕೆ ಸಂಬಂಧಿಸಿದಂತೆ, ಪಾಲಿಕೆಯ ಕಂದಾಯ ಇಲಾಖೆ ಹಾಗೂ ಆಸ್ತಿ ವಿಭಾಗದ ಅಧಿಕಾರಿಗಳೊಂದಿಗೆ ಚರ್ಚಿಸಿ ನಂತರ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದೆಂದು ಸಮಿತಿಯು ತಿಳಿಸಿರುತ್ತದೆ.

2) <u>ಬೃ.ಬೆಂ.ಮ.ಪಾ. ಬಾಲಕಿಯರ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಸ್ಟಿನ್ ಟೌನ್</u>: ಈ ಕಾಲೇಜಿನಲ್ಲಿ ಒಟ್ಟು 500 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಭದ್ರತಾ ಸಿಬ್ಬಂದಿಗೆ ಸಂಬಂಧಿಸಿದಂತೆ, ಒಬ್ಬರು ಮಾತ್ರ ದಿನದ 24 ಘಂಟೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಮಾಹೆ ರೂ.6,500/-ಗಳು ಮಾತ್ರ ಪಡೆಯುತ್ತಿರುವುದಾಗಿ, ಭದ್ರತಾ ಸಿಬ್ಬಂದಿಯು ಸಮಿತಿಯ ಸದಸ್ಯರಿಗೆ ಹೇಳಿಕೆ ನೀಡಿರುತ್ತಾರೆ. ಸದರಿ ಕಾಲೇಜಿನ ಮುಂದಿನ ಭಾಗದಲ್ಲಿ ಹೊಸದಾಗಿ ತಡೆ ಗೋಡೆಯನ್ನು ನಿರ್ಮಿಸಲಾಗುತ್ತಿರುತ್ತದೆ. ಮುಂದುವರಿದಂತೆ, ಶಾಲೆಯ ಒಳಾಂಗಣವನ್ನು ವೀಕ್ಷಿಸಿದ ಸಮಿತಿಯು ಕೆಲವು ನ್ಯೂನ್ಯತೆಗಳಾದ ತಡೆ ಗೋಡೆಗಳನ್ನು ಕೆಡವಿರುವುದು ಹಾಗೂ ವಿದ್ಯಾರ್ಥಿಗಳು ಊಟವನ್ನು ಅಸಡ್ಡೆಯಿಂದ ಅಲ್ಲಲ್ಲಿಯೆ ಚೆಲ್ಲಿರುವುದನ್ನು ಗಮನಿಸಿದಾಗ, ಶಾಲೆಯ ಮುಖ್ಯೋಪಾಧ್ಯಾಯರನ್ನು ಸದರಿ ಪ್ರಕರಣಗಳಿಗೆ ವಿಶ್ಲೇಷಣೆಯನ್ನು ನೀಡಲು ತಿಳಿಸಿದಾಗ, ಸ್ಥಳೀಯ ಅಕ್ಕಪಕ್ಕದ ಸಾರ್ವಜನಿಕರು ತಡೆ ಗೋಡೆಯನ್ನು ಒಡೆದು ಘನತ್ಯಾಜ್ಯ ವಸ್ತುಗಳನ್ನು ಶಾಲೆಯ ಆವರಣದಲ್ಲಿ ಚೆಲ್ಲುತ್ತಿರುವುದಾಗಿಯೂ, ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಪೋಲೀಸ್ ಠಾಣೆಗೆ ದೂರನ್ನು ಕೂಡ ನೀಡಲಾಗಿದೆ ಎಂದು ತಮ್ಮ ಅಳಲನ್ನು ತೋಡಿಕೊಳ್ಳುತ್ತಾ, ಇಲ್ಲಿಯ ವಿದ್ಯಾರ್ಥಿಗಳಿಗೆ ಈಗಾಗಲೇ ಹಲವಾರು ವೇಳೆ ಶಿಸ್ತಿನಿಂದ ಊಟವಾದ ನಂತರ ಚೆಲ್ಲುತ್ತಿರುವ ಊಟವನ್ನು ಸ್ವಚ್ಚಗೊಳಿಸುವಂತೆ, ತಿಳಿ ಹೇಳಲಾಗಿದೆ ಎಂದು ತಿಳಿಸಿರುತ್ತಾರೆ.

ಸದರಿ ಸಮಸ್ಯೆಗಳಿಗೆ ಸಂಬಂಧಿಸಿದಂತೆ, ಸ್ಥಳದಲ್ಲಿಯೇ ಇದ್ದ ಅಭಿಯಂತರರಿಗೆ ಇನ್ನೆರಡು ದಿನಗಳಲ್ಲಿ ಕೆಡವಿರುವ ತಡೆ ಗೋಡೆಯನ್ನು ಮುಚ್ಚಿಸಲು ಹಾಗೂ ಸಣ್ಣ ಪುಟ್ಟ ಕಾಮಗಾರಿಗಳನ್ನು ಕೈಗೊಳ್ಳಲು ಸಮಿತಿಯು ಆದೇಶಿಸುತ್ತಾ, ಮುಂಜಾಗ್ರತೆಗಾಗಿ ಮತ್ತೊಮ್ಮೆ ಸ್ಥಳೀಯ ಪೋಲೀಸ್ ಠಾಣೆಗೆ ದೂರು ನೀಡಲು ಹಾಗೂ ವಿದ್ಯಾರ್ಥಿಗಳ ಸಹಕಾರದಿಂದ ಅಕ್ಕಪಕ್ಕದ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಮಿತಿಯು ಶಿಫಾರಸ್ಸು ಮಾಡಲಾಯಿತು.

3) <u>ಬೃ.ಬೆಂ.ಮ.ಪಾ. ಬಾಲಕರ ಪ್ರೌಢ ಶಾಲೆ, ಆಸ್ಟಿನ್ ಟೌನ್</u>:- ಈ ಶಾಲೆಯಲ್ಲಿ 270 ವಿದ್ಯಾರ್ಥಿಗಳಿದ್ದು, ಕಟ್ಟಡ ಹಾಗೂ ಆವರಣವು ಸುಚಿತ್ವದಿಂದ ಕಂಡ ಸಮಿತಿಯು ಅಭಿನಂದನೆಯನ್ನು ಸೂಚಿಸಿತು. ಹಿಂದಿನ ಸಾಲಿನಲ್ಲಿ ಶಾಲೆಯ ಫಲಿತಾಂಶವು ಶೇ.44ರಷ್ಟು ಇದ್ದು, ಇಂದಿನ ಸಾಲಿನಲ್ಲಿ ಇನ್ನು ಹೆಚ್ಚಿನ ಫಲಿತಾಂಶವನ್ನು ಪಡೆಯುವುದಾಗಿ ಅಭಿಮತವನ್ನು ಮುಖ್ಯೋಪಾಧ್ಯಾಯರು ವ್ಯಕ್ತಪಡಿಸುತ್ತಾ, ಸದರಿ ಶಾಲೆಯಲ್ಲಿ ಹೊರಗುತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣಕರಿಗೆ ಹಾಲಿ ನೀಡಿರುತ್ತಿರುವ ವೇತನವು ಕಡಿಮೆ ಇರುವುದನ್ನು ಹೆಚ್ಚಿಸಬೇಕೆಂದು ಹೊರಗುತ್ತಿಗೆಯ ಶಿಕ್ಷಕರ ವತಿಯಿಂದ ಬೇಡಿಕೆ ಇಟ್ಟಿರುತ್ತಾರೆ.

ಸದರಿ ಪ್ರಸ್ತಾವನೆಗೆ ಮುಂದಿನ ದಿನಗಳಲ್ಲಿ ಆಯುಕ್ತರೊಡನೆ ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದೆಂದು ಸಮಿತಿಯು ತಿಳಿಸಿರುತ್ತದೆ.

4) <u>ಬೃ.ಬೆಂ.ಮ.ಪಾ. ಹಿರಿಯ ಪ್ರಾಥಮಿಕ ಪಾಠ ಶಾಲೆ, ನೀಲಸಂದ್ರ</u>:- ಈ ಶಾಲೆಯ ಕಟ್ಟಡವು ಉತ್ತಮ ಗುಣಮಟ್ಟದಿಂದ ಇದ್ದು, ನಿರ್ವಹಣೆಯ ಕಾರ್ಯದಲ್ಲಿ ಅಧಿಕಾರಿಗಳು ವಿಫಲರಾಗಿರುವುದು ಎದ್ದು ಕಾಣುತ್ತಿತ್ತು. ನೆಲ ಹಾಸಿಗೆ, ನೀರಿನ ಪೈಪುಗಳು ಹಾಗು ಹೊರ ಛಾವಣಿಯ ಶೀಟ್‌ಗಳನ್ನು ಬದಲಾಯಿಸಿ ಸುಸ್ಥಿತಿಯಲ್ಲಿಡುವಂತೆ, ವಿದ್ಯಾಧಿಕಾರಿ ಹಾಗೂ ಅಭಿಯಂತರರುಗಳಿಗೆ ಸ್ಥಳದಲ್ಲಿಯೇ ತಾಕೀತು ಮಾಡಲಾಯಿತು.

5) <u>ಬೃ.ಬೆಂ.ಮ.ಪಾ. ಶಿಶುವಿಹಾರ, ನೀಲಸಂದ್ರ</u>:- ಈ ಶಿಶುವಿಹಾರದಲ್ಲಿ ಒಟ್ಟು 80 ಬಡ ಮಕ್ಕಳಿಗೆ ಇಬ್ಬರು ಶಿಕ್ಷಕರು ಇರುವುದನ್ನು ಕಂಡ ಸಮಿತಿಯು, ಮಕ್ಕಳ ವತಿಯಿಂದ ಪದ್ಯಗಳನ್ನು ಆಲಿಸಿ ಅಭಿಮತ ವ್ಯಕ್ತಪಡಿಸುತ್ತಾ, ಇದೇ ರೀತಿ ಇನ್ನು ಹೆಚ್ಚಿನ ಶ್ರಮದಿಂದ ಕಾರ್ಯನಿರ್ವಹಿಸಲು ಸ್ಪೂರ್ತಿಯನ್ನು ನೀಡಲಾಯಿತು.

-3

6) <u>ಬೃ.ಬೆಂ.ಮ.ಪಾ. ಶಿಶುವಿಹಾರ, ಆಡುಗೋಡಿ.</u>:- ಸಮಿತಿಯು ಭೇಟಿ ನೀಡಿದ ಸಮಯದಲ್ಲಿ ಶಿಶುವಿಹಾರವು ಮುಚ್ಚಲಾಗಿತ್ತು. ಶಿಶುವಿಹಾರದ ಪೂರಾ ಕಟ್ಟಡವನ್ನು ಹೊರಗಿನಿಂದ ವೀಕ್ಷಿಸಿದ ಸಮಿತಿಯು ಸಂಬಂಧಿಸಿದ ಅಭಿಯಂತರರಿಗೆ ಕಟ್ಟಡ ದುರಸ್ತಿಕರಣ ನಡೆಸಲು ಅಂದಾಜು ಪಟ್ಟಿಯನ್ನು ತಯಾರಿಸಿ 12-13ನೇ ಸಾಲಿನಲ್ಲಿಯೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸೂಚಿಸಲಾಯಿತು.

7) <u>ಬೃ.ಬೆಂ.ಮ.ಪಾ. ಪ್ರೌಢ ಶಾಲೆ, ಶಾಂತಿನಗರ:-</u> ಈ ಶಾಲೆಯಲ್ಲಿ 69 ವಿದ್ಯಾರ್ಥಿಗಳಿದ್ದು, ಕಟ್ಟಡ ಹಾಗೂ ಆವರಣವು ಸುಚಿತ್ವದಿಂದ ಕಂಡ ಸಮಿತಿಯು ಅಭಿನಂದನೆಯನ್ನು ಸೂಚಿಸಿತು. ಸದರಿ ಶಾಲೆಯಲ್ಲಿ ಧ್ವಜಾರೋಹಣದ ಕಂಬ ನೆಡುವ ಕಾಮಗಾರಿ ಕೆಲಸವನ್ನು ಸ್ಥಳೀಯ ದಾನಿಗಳಿಂದ ಕೈಗೊಂಡಿರುವುದನ್ನು ಕಂಡ ಸಮಿತಿಯು, ಇಂತಹ ಸಣ್ಣ ಪುಟ್ಟ ಕಾರ್ಯಗಳನ್ನು ಇದೇ ರೀತಿ ಸ್ಥಳೀಯ ದಾನಿಗಳಿಂದ ಕೈಗೆತ್ತಿಕೊಳ್ಳುವಂತೆ, ಮುಖ್ಯೋಪಾಧ್ಯಾಯರಿಗೆ ಸಲಹೆ ನೀಡಲಾಯಿತು. ನಂತರದಲ್ಲಿ ಗಣಕಯಂತ್ರ ಪ್ರಯೋಗಾಲಯದ ಕೊಠಡಿಯನ್ನು ವೀಕ್ಷಣೆ ನಡೆಸಿ, ಕಟ್ಟಡದ ಮೇಲ್ ಛಾವಣಿಯಿಂದ ನೀರು ಸೋರುತಿರುವುದನ್ನು ತಡೆಗಟ್ಟಲು ತುರ್ತಾಗಿ ಕ್ರಮವಹಿಸುವಂತೆ ಹಾಗೂ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಸುಣ್ಣ ಬಣ್ಣವನ್ನು ಬಳಿಯುವ ವೇಳೆಯಲ್ಲಿ ಭಾರತದ ಮಹಾನ್ ವ್ಯಕ್ತಿಗಳ ಭಾವಚಿತ್ರ ಹಾಗೂ ಸೂಕ್ತಿಗಳನ್ನು ಬರೆಸುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುವಂತೆ, ಸಂಬಂಧಿಸಿದ ಅಭಿಯಂತರರಿಗೆ ಸ್ಥಳದಲ್ಲಿಯೇ ಸೂಚನೆ ನೀಡುತ್ತಾ, ತಪಾಸಣೆಯನ್ನು ಮುಕ್ತಾಯಗೊಳಿಸಲಾಯಿತು.

B G—Raju

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ/ಆರೋಗ್ಯ ಮತ್ತು ಶಿಕ್ಷಣ)ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮ ಜರುಗಿಸಲು ಕೋರಿದೆ.
7) ಕಾರ್ಯಪಾಲಕ ಅಭಿಯಂತರರು-(ಯೋಜನೆ)/(ಪೂರ್ವ/ಪಶ್ಚಿಮ ಮತ್ತು ದಕ್ಷಿಣ)ರವರಿಗೆ ಕಳುಹಿಸುತ್ತಾ, ಸಂಬಂಧಿಸಿದ ಕಾರ್ಯಗಳನ್ನು ಜರೂರಾಗಿ ನಿರ್ವಹಿಸಲು ಸೂಚಿಸಿದೆ.
8) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಿದೆ.
9) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
10) ಕಛೇರಿ ಕಡತಕ್ಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 29.08.2012 ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳ್ಳಿಗೆ 11.00 ಘಂಟೆಗೆ ನಡೆದ ವಿಷಯ ಸಭೆಯ ನಡವಳಿಗಳು.

| ಕ್ರ. ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀಮತಿ.ಸಲ್ಮಾ.ಕೆ.ಫಾಹೀಂ | ಜಂಟಿ ಆಯುಕ್ತರು(ಕಲ್ಯಾಣ) |
| 2 | ಶ್ರೀ.ಅಶ್ವಥ್‌ನಾರಾಯಣ ಗೌಡ | ಸದಸ್ಯರು | 2 | ಶ್ರೀ.ಮಾರಿಯೋ ಪಿರೀಸ್ | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 3 | ಶ್ರೀ.ಡಿ ವೆಂಕಟೇಶ್ | ಸದಸ್ಯರು | 3 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| 4 | ಶ್ರೀ.ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 4 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |
| 5 | ಶ್ರೀಮತಿ.ಎನ್.ಜಿ.ಜಯನರತ್ನ | ಸದಸ್ಯರು | | | |
| 6 | ಶ್ರೀಮತಿ.ವಸಂತಕುಮಾರಿ | ಸದಸ್ಯರು | | | |
| 7 | ಶ್ರೀಮತಿ.ಸೈಯದ್ ಹಸೀನಾತಾಜ್ | ಸದಸ್ಯರು | | | |
| 8 | ಶ್ರೀ.ಎಂ.ನಾಗರಾಜ್ | ಸದಸ್ಯರು | | | |
| 9 | ಶ್ರೀ.ಬಿ.ಎ.ಬಸವರಾಜು | ಸದಸ್ಯರು | | | |
| 10 | ಶ್ರೀ.ಎಂ.ಉದಯಶಂಕರ್ | ಸದಸ್ಯರು | | | |
| 11 | ಶ್ರೀ.ಎನ್.ಎಂ.ಹನುಮಂತೇಗೌಡ | ಸದಸ್ಯರು | | | |

ಸಭೆಯು ಬೆಳ್ಳಿಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

**ವಿಷಯ ಸಂಖ್ಯೆ:ಶಿ.ಸ್ಥಾ.ಸ/14/12-13**

ವಿಷಯ: ಪಾಲಿಕೆಯ ವಿವಿಧ ವಾರ್ಡ್‌ಗಳಲ್ಲಿನ ಆಟದ ಮೈದಾನ/ಉದ್ಯಾನವನಗಳಲ್ಲಿ ಹೊಸದಾಗಿ ತಯಾರಿಸಿದ ಮಕ್ಕಳ ಆಟದ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕಾರ್ಯದ ಟೆಂಡರ್ ಬಗ್ಗೆ.

ಉಲ್ಲೇಖ: ಜಂಟಿ ಆಯುಕ್ತರು(ಕಲ್ಯಾಣ)ರವರ ಆದೇಶ ದಿನಾಂಕ:04.07.2012.

***

ವಿಶೇಷ ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎಸ್.ಪಿ.ಪಿ.ಆರ್/55/11-12, ದಿನಾಂಕ: 05.07.2012ರಂದು ವಿವರಿಸಿರುವಂತೆ, 2011-12ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿನ ಆಟದ ಮೈದಾನ/ಉದ್ಯಾನವನಗಳಲ್ಲಿ ಹೊಸದಾಗಿ ತಯಾರಿಸಿದ ಮಕ್ಕಳ ಆಟದ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕಾರ್ಯಕ್ಕೆ ದಿನಾಂಕ:28.02.2012ರಂದು "ಇ" ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ನಿಯಮಾವಳಿ ರೀತ್ಯ ದಿನಾಂಕ:13.03.2012ರಂದು ತಾಂತ್ರಿಕ ಬಿಡ್‌ನ್ನು ತೆರೆಯಲಾಯಿತು. ಸದರಿ ಟೆಂಡರ್‌ನಲ್ಲಿ 1) ಮೆ: ಟಾಯ್ಸ್ ಅಂಡ್ ಸ್ಪೋರ್ಟ್ಸ್ 2) ಮೆ: ವಿನ್ಯಾಸ್ ಪ್ಲೇ ಸಿಸ್ಟಮ್ಸ್ ಸಂಸ್ಥೆಯವರು ಭಾಗವಹಿಸಿರುತ್ತಾರೆ. ನಂತರ ಇಬ್ಬರು ಟೆಂಡರ್‌ದಾರರು ಟೆಂಡರ್‌ನಲ್ಲಿ ಹಾಜರುಪಡಿಸಿದ್ದ ತಾಂತ್ರಿಕ ಬಿಡ್ಡಿನ ದಾಖಲಾತಿಗಳನ್ನು ಡೌನಲೋಡ್ ಮಾಡಿ ಕಡತದಲ್ಲಿ ಲಗತ್ತಿಸಿದ್ದು, ನಂತರ ಸದರಿ ಟೆಂಡರ್‌ನಲ್ಲಿ ಹಾಜರುಪಡಿಸಿದ್ದ ತಾಂತ್ರಿಕ ಬಿಡ್ಡಿನ ದಾಖಲಾತಿಗಳನ್ನು ಪರಿಶೀಲಿಸಲು ತಾಂತ್ರಿಕ ಪರಿಶೀಲನಾ ಸಮಿತಿಯನ್ನು ರಚಿಸಿದ್ದು, ತಾಂತ್ರಿಕ ಪರಿಶೀಲನಾ ಸಮಿತಿಯವರು ತಾಂತ್ರಿಕ ಬಿಡ್ಡಿನಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ಪರೀಶೀಲಿಸಿ ಸಲ್ಲಿಸಿರುವ ವರದಿಯಲ್ಲಿ ಇಬ್ಬರು ಟೆಂಡರ್‌ದಾರರು ಸಲ್ಲಿಸಿರುವ ದಾಖಲಾತಿಗಳು ತೃಪ್ತಿಕರವಾಗಿ ಇರುವುದರ ಬಗ್ಗೆ ನೀಡಿರುವ ವರದಿಯ ಆಧಾರದ ಮೇಲೆ ಇಬ್ಬರು ಟೆಂಡರ್‌ದಾರರ ಆರ್ಥಿಕ ಬಿಡ್ಡನ್ನು ತೆರೆದು ದರಗಳ ತುಲನಾತ್ಮಕ ಪಟ್ಟಿಯನ್ನು ಸಿದ್ಧಪಡಿಸಿ ಕಡತದಲ್ಲಿ ಲಗತ್ತಿಸಿದೆ.

Office of the I T Advisor
No. 486
Date. 4/9/12
Bangalore Mahanagara Palike

ಟೆಂಡರ್ ಪಾರದರ್ಶಕ ಕಾಯ್ದೆ ನಿಯಮಾವಳಿ ರೀತ್ಯ ಇಬ್ಬರು ಟೆಂಡರ್‌ದಾರರು ಹಾಜರುಪಡಿಸಿರುವ ಮಾದರಿ ಉಪಕರಣಗಳ ಗುಣಮಟ್ಟವನ್ನು ಪರಿಶೀಲಿಸಿ ವರದಿ ಸಲ್ಲಿಸಲು ಕಾರ್ಯಪಾಲಕ ಅಭಿಯಂತರರು ಗುಣನಿಯಂತ್ರಣ ವಿಭಾಗರವರಿಗೆ ಸೂಚಿಸಿದ್ದು, ಇವರು ಪರಿಶೀಲಿಸಿ ಸಲ್ಲಿಸಿರುವ ವರದಿಯಲ್ಲಿ ಇಬ್ಬರು ಟೆಂಡರ್‌ದಾರರು ಹಾಜರುಪಡಿಸಿರುವ ಮಾದರಿ ಉಪಕರಣಗಳ ಗುಣಮಟ್ಟ ತೃಪ್ತಿಕರವಾಗಿ ಇರುವುದರ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡಿರುವುದರಿಂದ, ಇಬ್ಬರು ಟೆಂಡರ್‌ದಾರರಿಂದ ಅಂಗೀಕೃತ ಕನಿಷ್ಟ ದರಗಳಿಗೆ ಅನುಗುಣವಾಗಿ, ಈ ಕೆಳಕಂಡಂತೆ ಆಟದ ಉಪಕರಣಗಳನ್ನು ಖರೀದಿಸಬಹುದಾಗಿರುತ್ತದೆ.

| | | | | |
|---|---|---|---|---|
| 1 | ಮೆ: ಟಾಯ್ಸ್ ಅಂಡ್ ಸ್ಪೋರ್ಟ್ಸ್ | ತ್ರಿಲ್ ಫನ್ | 5,90,000*30 ಸಂಖ್ಯೆ | 1,77,00,000.00 |
| 2 | ಮೆ: ವಿನ್ಯಾಸ್ ಪ್ಲೇ ಸಿಸ್ಟಮ್ | ಜಂಗಲ್ ಸೀಸಾ | 33,500*32 ಸಂಖ್ಯೆ | 10,72,000.00 |
| | | ಶಾಟ್ ಲೈಟ್ ರಿವಾಲ್ವರ್ | 48,000*32 ಸಂಖ್ಯೆ | 15,36,000.00 |
| | | ಬಾಕ್ಸ್‌ಸ್ವಿಂಗ್ | 30,500*32 ಸಂಖ್ಯೆ | 9,76,000.00 |
| | | ಬಾಡಿಟೋನರ್ | 43,500*32 ಸಂಖ್ಯೆ | 13,92,000.00 |
| | | ಡಿಫರೆಂಸಿಯಲ್ ಹ್ಯಾಂಗರ್ | 22,500*32 ಸಂಖ್ಯೆ | 7,20,000.00 |
| | | ಸ್ಪೆರಿಕಲ್ ಫನ್ | 53000*30 ಸಂಖ್ಯೆ | 15,90,000.00 |
| | | | ಒಟ್ಟು ರೂ. | 2,49,86,000.00 |

11-12ನೇ ಸಾಲಿನ ಆಯ-ವ್ಯಯ ಶೀರ್ಷಿಕ "24 ಸಂಸ್ಕೃತಿ ಮತ್ತು ಕ್ರೀಡೆ " ಆಡಳಿತ ವೆಚ್ಚಗಳು, ಕ್ರೀಡಾಭಿವೃದ್ಧಿ ಚಟುವಟಿಕೆಗಳು, ಮಕ್ಕಳ ಆಟದ ಉಪಕರಣಗಳ ಖರೀದಿ ಶೀರ್ಷಿಕೆಯಡಿ ನಿಗದಿಗೊಳಿಸಿದ್ದ ಹಂಚಿಕೆ ಮೊತ್ತ ರೂ.250.00ಲಕ್ಷಗಳ (ವರ್ಕ್ ಕೋಡ್ ಪಿ0251) ಆರ್ಥಿಕ ವರ್ಷದ ಅವಧಿ ದಿನಾಂಕ:31.03.2012ಕ್ಕೆ ಮುಕ್ತಾಯವಾಗಿರುವುದರಿಂದ, ಸದರಿ ಅನುದಾನದಲ್ಲಿ ಮೇಲ್ಕಂಡ ವೆಚ್ಚವನ್ನು ಭರಿಸಲು ಅವಕಾಶವಿರುವುದಿಲ್ಲ. ಆದುದರಿಂದ, 2012-13ನೇ ಸಾಲಿನ ಕರಡು ಆಯ-ವ್ಯಯದಲ್ಲಿ ಅನುಮೋದನೆ ನಿರೀಕ್ಷಿಸಿ ಇಬ್ಬರು ಟೆಂಡರ್‌ದಾರರಿಂದ ಮಕ್ಕಳ ಆಟದ ಉಪಕರಣಗಳನ್ನು ಖರೀದಿಸಲು ಹಾಗೂ ಸರಬರಾಜು ಆದೇಶ ನೀಡಲು ಅನುಮೋದನೆ ಕೋರಿ ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರ ದಿ:05.07.2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ/ಆರೋಗ್ಯ ಮತ್ತು ಶಿಕ್ಷಣ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
8) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
9) ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 26.09.2012 ರಂದು ಶಿಕ್ಷಣ ಸ್ಥಾಯಿ ಸಮಿತಿಯಲ್ಲಿ ಬೆಳ್ಳಿಗೆ 11.00 ಘಂಟೆಗೆ ನಡೆದ ವಿಷಯ ಸಭೆಯ ನಡವಳಿಗಳು.**

| ಕ್ರ. ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ಬಿ.ಇ.ಗೋವಿಂದರಾಜು | ಕೌನ್ಸಿಲ್ ಕಾರ್ಯದರ್ಶಿ |
| 2 | ಶ್ರೀ.ಅಶ್ವಥ್‌ನಾರಾಯಣ ಗೌಡ | ಸದಸ್ಯರು | 2 | ಶ್ರೀ.ಹನುಮಂತರಾಜು | ಶಿಕ್ಷಣಾಧಿಕಾರಿ |
| 3 | ಶ್ರೀಮತಿ.ಎನ್.ಜಿ.ಜಯನರತ್ನ | ಸದಸ್ಯರು | 3 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| 4 | ಶ್ರೀಮತಿ.ವಸಂತಕುಮಾರಿ | ಸದಸ್ಯರು | 4 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |
| 5 | ಶ್ರೀ.ಬಿ.ಎ.ಬಸವರಾಜು | ಸದಸ್ಯರು | | | |
| 6 | ಶ್ರೀ.ಎಂ.ಉದಯಶಂಕರ್ | ಸದಸ್ಯರು | | | |
| 7 | ಶ್ರೀ.ಎನ್.ಎಂ.ಹನುಮಂತೇಗೌಡ | ಸದಸ್ಯರು | | | |

ಸಭೆಯು ಬೆಳ್ಳಿಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

**ವಿಷಯ ಸಂಖ್ಯೆ:ಶಿ.ಸ್ಥಾ.ಸ/15/12-13**

**ವಿಷಯ: ಉದಯವಾಣಿ ದಿನಪತ್ರಿಕೆಯನ್ನು ಖರೀದಿಸಿ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ವಿತರಿಸುವ ಕುರಿತು.**

***

ವಿಶೇಷ ಆಯುಕ್ತರವರ ಟಿಪ್ಪಣಿ ಸಂಖ್ಯೆ: ವಿದ್ಯಾ(2)/ಪಿಆರ್/74/12-13, ದಿನಾಂಕ: 31.08.2012ರಂದು ವಿವರಿಸಿರುವಂತೆ, ಪೂಜ್ಯ ಮಹಾಪೌರರು ನೀಡಿರುವ ಟಿಪ್ಪಣಿಯಲ್ಲಿ ಶ್ರೀ.ಅಜಿತ್ ಬಂಡಾರಿ, ಸರ್ಕ್ಯುಲೇಷನ್ ಮ್ಯಾನೇಜರ್, ಉದಯವಾಣಿ, ಬೆಂಗಳೂರು ರವರು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ ಈಗಿನ ಹೊಸ ಪಠ್ಯಕ್ರಮಕ್ಕೆ ಅನುಗುಣವಾಗಿ ಅನುಭವಿ ಅಧ್ಯಾಪಕರಿಂದ ರೂಪಿಸಲ್ಪಟ್ಟ "ಶಿಕ್ಷಣ ಮಾರ್ಗದರ್ಶಿ" ನೀಡುತ್ತಿದ್ದು, ಇದರಿಂದ, ಪೋಷಕರಿಂದ ಹಾಗೂ ಅಧ್ಯಾಪಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುತ್ತದೆಂದು ಉದಯವಾಣಿಯು ಸಮಾಜದ ಬಡ ವಿದ್ಯಾರ್ಥಿಗಳಿಗೋಸ್ಕರ ವಿಶೇಷವಾಗಿ ಯೋಜನೆ ರೂಪಿಸಿದ್ದು, ಶಿಕ್ಷಣ ಮಾರ್ಗದರ್ಶಿಯನ್ನು ಒಳಗೊಂಡ ಉದಯವಾಣಿ ದಿನಪತ್ರಿಕೆಯನ್ನು ವಾರದ 5 ದಿನ ವಿದ್ಯಾರ್ಥಿಗಳಿಗೋಸ್ಕರ ರಿಯಾಯಿತಿ ದರದಲ್ಲಿ ಶೈಕ್ಷಣಿಕ ವರ್ಷದ ಜುಲೈ 2012 ರಿಂದ ಮಾರ್ಚ್ 2013ರವರೆವಿಗೆ ನೀಡಲಾಗುವುದೆಂದು ಬಿ.ಬಿ.ಎಂ.ಪಿ. ಶಾಲೆಗಳ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ಶಿಕ್ಷಣ ಮಾರ್ಗದರ್ಶಿಯನ್ನು ಒಳಗೊಂಡ ಉದಯವಾಣಿ ದಿನಪತ್ರಿಕೆಗೆ ಪ್ರಾಯೋಜಕತ್ವ ವಹಿಸಿಕೊಳ್ಳುವಂತೆ, ಕೋರಿರುವ ಮೇರೆಗೆ, ಪಾಲಿಕೆಯ ಎಲ್ಲಾ ಶಾಲಾ/ಕಾಲೇಜುಗಳ ಮಕ್ಕಳಿಗೆ ದಿನಪತ್ರಿಕೆಯನ್ನು ವಿತರಿಸುವುದರಿಂದ, ಅದರಲ್ಲಿನ ಶಿಕ್ಷಣ ಮಾರ್ಗದರ್ಶಿ ಸಂಚಿಕೆಯಿಂದ ಶಾಲಾ ಮಕ್ಕಳ ವಿದ್ಯಾರ್ಜನೆಗೆ ಅನುಕೂಲವಾಗಲಿದೆ. ಅಲ್ಲದೆ, ಪಾಲಿಕೆಯಲ್ಲಿ ಓದುವ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮ ರೀತಿಯಲ್ಲಿ ತೆಗೆದುಕೊಂಡು ಹೋಗಬಹುದಾಗಿರುತ್ತದೆ. ಈ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತಾರೆ.

ಸದರಿ ಪತ್ರಿಕೆಯವರು ಒಬ್ಬ ವಿದ್ಯಾರ್ಥಿಗಳಿಗೆ ತಗಲುವ ವೆಚ್ಚವನ್ನು, ಈ ಕೆಳಕಂಡಂತೆ ತಿಳಿಸಿರುತ್ತಾರೆ.

| | |
|---|---|
| 2012-13ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಸಂಖ್ಯೆ | 2,800 |
| ಒಂದು ವರ್ಷಕ್ಕೆ ಒಬ್ಬ ವಿದ್ಯಾರ್ಥಿಗೆ ತಗಲುವ ವೆಚ್ಚ | 595-00 |
| ಒಟ್ಟು (2,800* 595) | 16,66,000-00 |
| ರಿಯಾಯಿತಿ ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ರೂ. | 395-00 |
| ಒಟ್ಟು ರಿಯಾಯಿತಿ ಮೊತ್ತ ರೂ.(2,800*395) | 11,06,000-00 |
| ಒಟ್ಟು ಮೊತ್ತ ರೂ.(16,66,000-11,06,000) | 5,60,000-00 |

ಮೇಲ್ಕಂಡಂತೆ, ಉದಯವಾಣಿ ಪತ್ರಿಕೆಯನ್ನು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಖರೀದಿಸಿ ವಿತರಿಸಲು ಒಂದು ವರ್ಷಕ್ಕೆ ರೂ.5,60,000-00 ವೆಚ್ಚವಾಗಲಿದ್ದು, ಸದರಿ ಮೊತ್ತವನ್ನು 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಇತರೇ ವೆಚ್ಚಗಳು, ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮಗಳು ಶೀರ್ಷಿಕೆಯಲ್ಲಿ ಭರಿಸಲು ತಿಳಿಸಲಾಗಿರುತ್ತದೆ. ಆದರೆ, ಸದರಿ ಶೀರ್ಷಿಕೆಯಲ್ಲಿ ಮೀಸಲಿಟ್ಟಿರುವ ಮೊತ್ತವನ್ನು ಈಗಾಗಲೇ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಲು ಅವಶ್ಯಕವಾದ ಸಾಮಗ್ರಿಗಳನ್ನು ಖರೀದಿಸಲು ಉಪಯೋಗಿಸಿಕೊಳ್ಳಲಾಗಿರುತ್ತದೆ.

ಆದುದರಿಂದ, 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಇತರೇ ವೆಚ್ಚಗಳು, ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ವಿತರಣೆ (ಪಿ 0257) ಲೆಕ್ಕ ಶೀರ್ಷಿಕೆಯಲ್ಲಿ ಮೀಸಲಿರಿಸಿರುವ ಮೊತ್ತ ರೂ.60.00ಲಕ್ಷಗಳ ಅನುದಾನದಲ್ಲಿ ಉಳಿಕೆಯಾಗಿರುವ ಮೊತ್ತ ರೂ.35.00ಲಕ್ಷಗಳಲ್ಲಿ ಪಾವತಿ ಮಾಡಲು ಮಂಜೂರು ಮಾಡುವ ಸಂಬಂಧ ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

ನಿರ್ಣಯ: **ವಿಶೇಷ ಆಯುಕ್ತರು(ಯೋಜನೆ)ರವರ ದಿ:31.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ/ಆರೋಗ್ಯ ಮತ್ತು ಶಿಕ್ಷಣ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
8) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
9) ಕಛೇರಿ ಕಡತಕ್ಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಶಿಕ್ಷಣ ಸ್ಥಾಯಿ ಸಮಿತಿಯು ದಿನಾಂಕ:15.11.2012ರಂದು ನಡೆದ ಸಭೆಯ ನಡವಳಿ.

| ಕ್ರ. ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ಬಿ.ಇ.ಗೋವಿಂದರಾಜು | ಕೌನ್ಸಿಲ್ ಕಾರ್ಯದರ್ಶಿ |
| 2 | ಶ್ರೀ.ಅಶ್ವಥ್‌ನಾರಾಯಣ ಗೌಡ | ಸದಸ್ಯರು | 2 | ಶ್ರೀ.ಹನುಮಂತರಾಜು | ಶಿಕ್ಷಣಾಧಿಕಾರಿ |
| 3 | ಶ್ರೀ.ಎನ್.ಎಂ.ಕೃಷ್ಣ ಮೂರ್ತಿ | ಸದಸ್ಯರು | 3 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| 4 | ಶ್ರೀಮತಿ.ಎನ್.ಜಿ.ಜಯರತ್ನ | ಸದಸ್ಯರು | 4 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |
| 5 | ಶ್ರೀಮತಿ.ವಸಂತಕುಮಾರಿ | ಸದಸ್ಯರು | 5 | ಶ್ರೀ.ಬಿ.ವಿ.ಕೃಷ್ಣಮೂರ್ತಿ | ಸ.ಕಾ.ನಿ.ಅ(ಯೋಜನೆ-ದಕ್ಷಿಣ) |
| 6 | ಶ್ರೀಮತಿ.ಸೈಯದ್ ಹಸೀನಾತಾಜ್ | ಸದಸ್ಯರು | 6 | ಶ್ರೀ.ಎಂ.ರಘು | ಕಿ.ಅ (ಯೋಜನೆ-ದಕ್ಷಿಣ) |
| 7 | ಶ್ರೀ.ಎಂ.ಉದಯಶಂಕರ್ | ಸದಸ್ಯರು | | | |

ಸಭೆಯು ಬೆಳ್ಳಿಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

**ವಿಷಯ ಸಂಖ್ಯೆ: ಶಿಸ್ಥಾಸ/16/12-13:**

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ: - ಇಲ್ಲ - ದಿನಾಂಕ: 25.10.2012ರಂದು ವಿವರಿಸಿರುವಂತೆ, ಮುಖ್ಯ ಅಭಿಯಂತರರು (ದಕ್ಷಿಣ) ವಲಯದ ವ್ಯಾಪ್ತಿಗೆ ಬರುವ ಯೋಜನೆ ವಿಭಾಗದ ಕೆಳಕಂಡ ಕಾಮಗಾರಿಯನ್ನು ಇ-ಪ್ರೋಕ್ಯೂರ್‌ಮೆಂಟ್ ಮುಂಖಾತರ ಟೆಂಡರ್ ಕರೆಯಲಾಗಿರುತ್ತದೆ.

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ | ಕಾಮಗಾಲಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 1 | 168 | Improvements to Chamundeshwari Kabbadi Play Ground at 18th Main Road, Jayanagar in Ward No. 168. | 65.00 |

ಸದರಿ ಕಾಮಗಾರಿಗೆ 2011-12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ P1543 CDP of Play Grounds ರ ಅಡಿಯಲ್ಲಿ ಲಭ್ಯವಿರುವ ಅನುದಾನದಡಿಯಲ್ಲಿ ರೂ. 65.00ಲಕ್ಷಗಳಿಗೆ ಕಾಮಗಾರಿ ಸಂಕೇತ 168-12-000012 ರಂತೆ ಪಡೆದು ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿ ಪಡೆದು ಇ-ಪ್ರೋಕ್ಯೂರ್‌ಮೆಂಟ್ ಮುಖೇನ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕಟಣೆಯನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಕ್ರೋನಿಕಲ್ ದಿನಪತ್ರಿಕೆಗಳಲ್ಲಿ ದಿನಾಂಕ:28.04.2012ರಂದು ಪ್ರಕಟಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸ | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) | ನಮೂದಿಸಿರುವ ಮೊತ್ತ (ರೂ.ಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತಕ್ಕೆ ಶೇಕಡವಾರು | ಸಂಧಾನದ ನಂತರ (ಪ್ರಸಕ್ತ 2012-13ನೇ ಸಾಲಿನ ಎಸ್.ಆರ್ ದರಗಳಿಗೆ ಹೋಲಿಸಿದಾಗ ಮೊತ್ತ | |
|---|---|---|---|---|---|---|
| 1 | ಶ್ರೀ.ಎಂ.ವಿ.ಕೆಂಪೇಗೌಡ | 53,13,289.26 | 66,97,358.40 | 26.61% ಹೆಚ್ಚು | 65,01,513.40<br>ಶೇ.11.98% ಹೆಚ್ಚು | ಎಲ್-1 |
| 2 | ಶ್ರೀ.ಕೆ.ರಾಮಚಂದ್ರ ರಾಜು | | 69,61,220.25 | 31.01% ಹೆಚ್ಚು | | ಎಲ್-2 |

ಮೇಲ್ಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ.ಎಂ.ವಿ.ಕೆಂಪೇಗೌಡ ರವರ ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ.65,01,513.40ಗಳ ಪ್ರಸಕ್ತ 2012-13ನೇ ಸಾಲಿನ ದರ ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.11.98% ರಷ್ಟು ಹೆಚ್ಚುವರಿಯಾಗಿದ್ದು, ಸದರಿ ಟೆಂಡರ್‌ಗೆ ಅನುಮೋದನೆ ಕೋರಿ, ಶಿಕ್ಷಣ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 25.10.2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

**ವಿಷಯ ಸಂಖ್ಯೆ: ಶಿಸ್ಥಾಸ/ 17 /12-13**

ನಿರ್ಣಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2012-13ನೇ ಸಾಲಿನ ಆಯವ್ಯಯದಲ್ಲಿ 25-ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು, ಶಾಲಾ ಮತ್ತು ಕಾಲೇಜುಗಳಿಗೆ ಸಣ್ಣ ಪುಟ್ಟ ದುರಸ್ತಿ ಲೆಕ್ಕ ಶೀರ್ಷಿಕೆ ಪಿ-1783 ರಲ್ಲಿ ರೂ.100 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ. ಅದರಂತೆ ಈ ಕೆಳಕಂಡ ವಲಯಗಳಿಗೆ ನಿಗಧಿಪಡಿಸಿರುವ ಮೊತ್ತಕ್ಕೆ ಅನುಗುಣವಾಗಿ ಜಾಬ್ ನಂಬರ್ ನೀಡಿ, ಶಾಲಾ ಮತ್ತು ಕಾಲೇಜುಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಹಿತದೃಷ್ಟಿಯಿಂದ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ, ಸೂಕ್ತ ಪ್ರಸ್ತಾವನೆಯನ್ನು ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

| ಕ್ರ.ಸಂ. | ವಲಯ | ಲೆಕ್ಕ ಶೀರ್ಷಿಕೆ (ಪಿ ಕೋಡ್) | ಆಯವ್ಯಯದ ಪುಟ ಸಂಖ್ಯೆ | ನಿಗಧಿಪಡಿಸಿರುವ ಮೊತ್ತ (ಲಕ್ಷಗಳಲ್ಲಿ) |
|---|---|---|---|---|
| 1 | ಪಶ್ಚಿಮ | ಪಿ-1783 | 202 | 20-00 |
| 2 | ಪೂರ್ವ | ಪಿ-1783 | 202 | 60-00 |
| 3 | ದಕ್ಷಿಣ | ಪಿ-1783 | 202 | 20-00 |

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ. ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7) ಕಾರ್ಯಪಾಲಕ ಅಭಿಯಂತರರು-(ಯೋಜನೆ)/(ಪೂರ್ವ/ಪಶ್ಚಿಮ ಮತ್ತು ದಕ್ಷಿಣ)ರವರಿಗೆ ಕಳುಹಿಸುತ್ತಾ, ವಿಷಯ ಸಂಖ್ಯೆ 17 ರಲ್ಲಿ ಸಮಿತಿಯು ತೆಗೆದು ಕೊಂಡಿರುವ ನಿರ್ಣಯದ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
8) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
10) ಕಛೇರಿ ಕಡತಕ್ಕೆ.